# ಗುರುವಾರ, ೩೧ನೇ ಜುಲೈ, ೧೯೪೭

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ೧೦ ಗಂಟೆಗೆ ಮಾನ್ಯ ಸಭಾಧ್ಯಕ್ಷ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**ಮಾನ್ಯ ಸಭಾಧ್ಯಕ್ಷರು :** ಇಂದು ಬರಬೇಕಾದ ಬೇರೆ ಸದಸ್ಯರಾರೂ ಇಲ್ಲ ಎಂದು ತೋರುತ್ತದೆ. ನಾವು ಕಾರ್ಯಸೂಚಿ ಪ್ರಕಾರ ಮುಂದುವರಿಸೋಣ.

ಕಾರ್ಯಸೂಚಿಯಲ್ಲಿರುವ ಮೊದಲ ವಿಷಯವೆಂದರೆ, ಸಂವಿಧಾನ ರಚನಾಸಭೆಯಲ್ಲಿ ದೆಹಲಿ ಹಾಗೂ ಅಜ್ಮೇರ್–ಮೇರ್ವಾರದ ಪ್ರಾತಿನಿಧ್ಯಕ್ಕೆ ಸಂಬಂಧಪಟ್ಟಂತೆ ನಿಯಮ ೫ಕ್ಕೆ ತಿದ್ದುಪಡಿ ತರುವ ಶ್ರೀ ದೇಶಬಂಧು ಗುಪ್ತ ಅವರ ಪ್ರಸ್ತಾವವಾಗಿದೆ.

**ಶ್ರೀ ಎಚ್.ವಿ. ಕಾಮತ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯರೆ, ಆಗಸ್ಟ್ ೧೫ರಂದು ನಡೆಯಲಿರುವ ಅಧಿಕಾರ ಹಸ್ತಾಂತರ ಸಮಾರಂಭವನ್ನು ಕುರಿತಂತೆ, ಸಾರ್ವಭೌಮ ಸಂವಿಧಾನ ರಚನಾಸಭೆಯ ಘನತೆವೆತ್ತ ಮತ್ತು ಪ್ರತಿಷ್ಠಿತ ಅಧ್ಯಕ್ಷರಾಗಿರುವ ತಮ್ಮ ಬಳಿ ನಾನು ವಿನಂತಿಸುವುದೇನೆಂದರೆ, ಕನಿಷ್ಠಪಕ್ಷ ಈ ಸದನದಲ್ಲಿ ನಡೆಯುವ ಸಂಭ್ರಮದ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ಅದು ನಿಮ್ಮಿಂದ ಮತ್ತು ನಿಮ್ಮಿಂದ ಮಾತ್ರ ಇತ್ಯರ್ಥವಾಗಬೇಕು ಮತ್ತು ಅಂತಿಮಗೊಳ್ಳಬೇಕು ಮತ್ತು ಇದರಲ್ಲಿ ಅಧಿಕಾರಿವರ್ಗದ ಮಧ್ಯಪ್ರವೇಶ ಅಥವಾ ದಬ್ಬಾಳಿಕೆ, ಆದೇಶ ಇರಬಾರದು. ನನಗೆ ಖಾತರಿಯಿದೆ, ಈ ಅಂಶದ ಬಗ್ಗೆ ನಿಮ್ಮಿಂದ ಭರವಸೆ ದೊರಕಿದರೆ ಸದನವು ನಿಮಗೆ ಚಿರಋಣಿಯಾಗಿರುತ್ತದೆ.

ಕಾರ್ಯಕ್ರಮ ಪಟ್ಟಿಯನ್ನು ತಯಾರಿಸುವಾಗ, ಮಾನ್ಯರೆ, ಇದರಲ್ಲಿ ನಮ್ಮ ಸಾಂಪ್ರದಾಯಿಕ ರಾಷ್ಟ್ರಗೀತೆ, ವಂದೇ ಮಾತರಮ್, ಹಾಗೆಯೇ, ನಮ್ಮ ಶ್ರೇಷ್ಠ ಸೇನಾನಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರಿಂದ ಜನಪ್ರಿಯಗೊಂಡ ಗೀತೆ, ಹೆಸರಿಸುವುದಾದರೆ, 'ಸಭ್ ಸುಖ ಚೈನ್ ಕಿ ಬರ್ಷಾ ಬರ್ಸೆ ಭಾರತ ಭಾಗ ಹೈ ಜಗಾ' ಶಬ್ದಗಳಿಂದ ಆರಂಭಗೊಳ್ಳುವ ಗೀತೆಯನ್ನು ಸೇರಿಸಬೇಕೆಂದು ನಾನು ನಿಮ್ಮಲ್ಲಿ ಬೇಡಿಕೊಳ್ಳುತ್ತೇನೆ.

ಎರಡನೆಯದಾಗಿ, ಮಾನ್ಯರೆ, ನಿಮಗೆ ನೆನಪು ಮಾಡುವುದಕ್ಕೆ ಅನುಮತಿ ನೀಡಬೇಕು; ಸಂವಿಧಾನ ರಚನಾಸಭೆಯ ಎಲ್ಲ ಸದಸ್ಯರಿಗೆ ರಾಷ್ಟ್ರಧ್ವಜವನ್ನು ನೀಡಬೇಕೆಂದು ನಾನು ಸೋಮವಾರದಂದು ನಿಮ್ಮಲ್ಲಿ ಮನವಿ ಮಾಡಿದ್ದೆ. ನಾವೆಲ್ಲ ಆಗಸ್ಟ್ ೧೫ಕ್ಕಿಂತ ಮೊದಲು ಧ್ವಜವನ್ನು ಹೊಂದಿರುವುದಕ್ಕೆ ನಿಜವಾಗಿಯೂ ತವಕಗೊಂಡಿದ್ದೇವೆ. ಸಂಚಾಲಕ ಸಮಿತಿಯು ಇದಕ್ಕೆ ಅಡ್ಡಬರುವುದಿಲ್ಲ ಮತ್ತು ಈ ಪ್ರಸ್ತಾವಕ್ಕೆ ತಕರಾರು ಎತ್ತುವುದಿಲ್ಲವೆಂದು ನಾನು ಆಶಿಸುವ ಸಾಹಸ ಮಾಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ನಾನು ಈ ಸದನಕ್ಕೆ ಮತ್ತು ಗೌರವಾನ್ವಿತ ಸದಸ್ಯರಾದ ಶ್ರೀ ಕಾಮತ್ ಅವರಿಗೆ ತಿಳಿಸಬಯಸುವುದೇನೆಂದರೆ, ಈ ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ, ಈ ದಿನದ ಸಭೆಯನ್ನು ಮುಕ್ತಾಯಗೊಳಿಸುವ ಸಂದರ್ಭದಲ್ಲಿ ಹೇಳಿಕೆ ನೀಡಲು ಉದ್ದೇಶಿಸಿದ್ದೇನೆ. ಇದರಲ್ಲಿ ಹೊರಗಿನ ಯಾವುದೇ ಅಧಿಕಾರದ ಯಾವುದೇ ಆಜ್ಞೆ, ಮಧ್ಯಪ್ರವೇಶ ಇರುವುದಿಲ್ಲ. ನಮ್ಮ ಕಾರ್ಯಕ್ರಮವನ್ನು ನಾವೇ ನಿರ್ಧರಿಸೋಣ. (ಚಪ್ಪಾಳೆ). ಆಗಸ್ಟ್ ೧೫ರ ಕಾರ್ಯಕ್ರಮ ರೂಪಿಸುವುದಕ್ಕೆ ಸಂಬಂಧಿಸಿದಂತೆ, ನನ್ನಲ್ಲಿ ಕೆಲವು ಯೋಚನೆಗಳಿವೆ;

ಇವನ್ನು ಕುರಿತು ನಾನು ಪಂಡಿತ್ ಜವಾಹರಲಾಲ್ ನೆಹರು ಮತ್ತು ಇತರ ಕೆಲವು ಸ್ನೇಹಿತರೊಂದಿಗೆ ಮಾತನಾಡಿದ್ದೇನೆ ಮತ್ತು ನಾನು ಅವನ್ನು ಸದನದ ಮುಂದೆ ಇಡುತ್ತೇನೆ.

## ನಿಯಮಗಳ ತಿದ್ದುಪಡಿಗಳು

**ಶ್ರೀ ದೇಶಬಂಧು ಗುಪ್ತ** (ದೆಹಲಿ) : *[ಮಾನ್ಯ ಸಭಾಧ್ಯಕ್ಷರೆ, ನನ್ನ ಹೆಸರಿನಲ್ಲಿ ಇರುವ ಪ್ರಸ್ತಾವವು ಇದು:

"(೧) ಸಂವಿಧಾನ ರಚನಾಸಭೆಯ ನಿಯಮಗಳ ಪೈಕಿ ನಿಯಮ ೫ (ತಿದ್ದುಪಡಿಗೊಳಗಾದಂತೆ)ರ ಉಪನಿಯಮ (೨)ರಲ್ಲಿ, 'ಸಂದರ್ಭಾನುಸಾರ' ಶಬ್ದಗಳ ಅನಂತರ ಬರುವ 'ದೆಹಲಿ ಮತ್ತು ಅಜ್ಮೇರ್-ಮೇರ್ವಾರದ ಸಲಹಾಸಮಿತಿಗಳು' ಶಬ್ದಗಳನ್ನು ತೆಗೆಯಬೇಕು.

(೨) ನಿಯಮ ೫(ತಿದ್ದುಪಡಿಗೊಳಗಾದಂತೆ)ರ ಉಪನಿಯಮ (೧೨)ಕ್ಕೆ ಈ ಕೆಳಗಿನದ್ದು ಸೇರ್ಪಡೆಯಾಗಬೇಕು: ಸಂವಿಧಾನ ರಚನಾಸಭೆಯಲ್ಲಿ ದೆಹಲಿ ಮತ್ತು ಅಜ್ಮೇರ್-ಮೇರ್ವಾರಗಳನ್ನು ಪ್ರತಿನಿಧಿಸುವ ಸದಸ್ಯರ ಕಛೇರಿಯಲ್ಲಿ ಒಂದು ವೇಳೆ ಮರಣ, ರಾಜೀನಾಮೆ ಅಥವಾ ಇತರ ಯಾವುದೇ ಕಾರಣಗಳಿಂದ ಯಾವುದೇ ಖಾಲಿ ಸ್ಥಾನವು ಉಂಟಾದರೆ, ರಾಷ್ಟ್ರಪತಿಯವರು ಆ ಖಾಲಿ ಸ್ಥಾನವನ್ನು ಪ್ರಕಟಿಸಬೇಕು ಮತ್ತು ಆ ಖಾಲಿ ಸ್ಥಾನವನ್ನು ತುಂಬುವುದಕ್ಕಾಗಿ ಉಪಚುನಾವಣೆಗಳನ್ನು ನಡೆಸುವ ಸಂಬಂಧ ದೆಹಲಿ ಅಥವಾ ಅಜ್ಮೇರ್-ಮೇರ್ವಾರ್‌ಗಳ, ಸಂದರ್ಭಾನುಸಾರ ಮುಖ್ಯ ಆಯುಕ್ತರನ್ನು ಕರೆದು ಚರ್ಚಿಸಬೇಕು.

ಭಾರತೀಯ ಶಾಸಕಾಂಗ ಸಭೆಗಾಗಿ, ದೆಹಲಿ ಅಥವಾ ಸಂದರ್ಭಾನುಸಾರ ಅಜ್ಮೇರ್-ಮೇರ್ವಾರ ಮತಕ್ಷೇತ್ರವನ್ನು ಪ್ರತಿನಿಧಿಸುವ ಸದಸ್ಯರಿಗಾಗಿ, ಆಗಸ್ಟ್ ೧, ೧೯೪೭ರಂದು ಜಾರಿಯಲ್ಲಿರುವಂತೆ, ಶಾಸಕಾಂಗ ಸಭೆಯ ಚುನಾವಣಾ ನಿಯಮಗಳಲ್ಲಿ ಉಲ್ಲೇಖಿಸಲಾಗಿರುವ ಪದ್ಧತಿಯ ಅನುಸಾರವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಉಪಚುನಾವಣೆಗಳನ್ನು ನಡೆಸಬೇಕು."

ಇದಕ್ಕೆ ಸಂಬಂಧಪಟ್ಟಂತೆ, ನಾನು ಹೇಳಬೇಕಾಗಿರುವುದಿಷ್ಟೇ, ಈ ಹಿಂದಿನ ಶ್ರೀ ಸಂತಾನಮ್ ಅವರ ತಿದ್ದುಪಡಿಯಲ್ಲಿ ಏನು ಹೇಳಲಾಗಿತ್ತೆಂದರೆ, ದೆಹಲಿ ಹಾಗೂ ಅಜ್ಮೇರ್-ಮೇರ್ವಾರ ಪ್ರಕರಣದಲ್ಲಿ ಸಹಜವಾದ ಖಾಲಿ ಸ್ಥಾನವನ್ನು ಏಳಕ್ಕಿಂತಲೂ ಹೆಚ್ಚು ಸದಸ್ಯರನ್ನು ಹೊಂದಿಲ್ಲದ ಸಲಹಾಸಮಿತಿಯು ಭರ್ತಿಮಾಡಬೇಕು.

ದೆಹಲಿ ಮತ್ತು ಅಜ್ಮೇರ್-ಮೇರ್ವಾರಗಳಿಂದ ಇದಕ್ಕೆ ತಕರಾರು ಎದ್ದಿರುವುದು ಸಹಜವಾಗಿದೆ; ಏಕೆಂದರೆ, ಸಲಹಾ ಸಮಿತಿಯು ಪ್ರಾಂತೀಯ ಶಾಸನಸಭೆಯ ಸಮಿತಿಯ ಹಾಗೆ ಚುನಾಯಿತ ಸಂಸ್ಥೆಯಲ್ಲ. ಇದು ಪರೋಕ್ಷ ಚುನಾವಣೆಯ ಮೂಲಕ ರಚನೆಯಾದ ಒಂದು ಸಣ್ಣ ಸಂಸ್ಥೆ. ಇದರ ಅಧಿಕಾರಗಳು ಸೀಮಿತವಾಗಿವೆ ಮತ್ತು ಸಾಂದರ್ಭಿಕ ಖಾಲಿ ಸ್ಥಾನವನ್ನು ತುಂಬುವುದಕ್ಕಾಗಿ ಕೆಲವೇ ಸದಸ್ಯರನ್ನು ಹೊಂದಿರುವ ಈ ಸಲಹಾ ಸಮಿತಿಯನ್ನು ಮತದಾರರ ಸಮುದಾಯದಿಂದ ಆಮಂತ್ರಿಸುವುದು ಸಮಂಜಸವಲ್ಲವೆಂದು ಕಂಡುಬರುತ್ತದೆ. ಒಂದು ವೇಳೆ ನೀವು ಇದನ್ನು ಎಚ್ಚರಿಕೆಯಿಂದ ಗಮನಿಸಿದರೆ, ನಿಮಗೆ ಕಂಡುಬರುತ್ತದೆ, ಒಟ್ಟು ಏಳು ಸದಸ್ಯರ ಪೈಕಿ ಅಧಿಕಾರಿಗಳಲ್ಲದ ಮೂವರಲ್ಲಿ ಆಯ್ಕೆಮಾಡುವ ಪ್ರಯತ್ನ ಕಾಣುತ್ತದೆ. ದೆಹಲಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಸಲಹಾಸಮಿತಿಯು ದೆಹಲಿ ಮತ್ತು ನವದೆಹಲಿಯ ನಗರಪಾಲಿಕೆಯ ಚುನಾಯಿತ ಸದಸ್ಯರಿಂದ ಆಯ್ಕೆಯಾಗುತ್ತದೆ. ಕೊನೆಯದು ದೊಡ್ಡ ಸಂಸ್ಥೆ. ಇದು ಕೆಲವು ನಾಮಕರಣ ಸದಸ್ಯರನ್ನೂ ಸಹ ಹೊಂದಿರುತ್ತದೆ ಮತ್ತು ಹಾಗಾಗಿ ಇದರ ಎಲ್ಲ ಸದಸ್ಯರೂ ಚುನಾವಣೆಗಳಲ್ಲಿ ಪಾಲ್ಗೊಳ್ಳುವುದಿಲ್ಲ. ಇಲ್ಲಿ ಮತ್ತೊಂದು ತಕರಾರೂ ಸಹ ಇದೆ. ಅದೆಂದರೆ ಒಂದು ವೇಳೆ ಚುನಾವಣೆಯ ಕಾರ್ಯವನ್ನು ಸಲಹಾ ಸಮಿತಿಗೆ ವಹಿಸುವುದೆಂದರೆ, ನವದೆಹಲಿಯ ೩ ಲಕ್ಷ ಮತದಾರರು ಮತದಾನದ ಅಧಿಕಾರವನ್ನು ಕಳೆದುಕೊಂಡರೆಂದೇ ಅರ್ಥ. ಇದು ಈಗ ನಿರೀಕ್ಷಿತವಲ್ಲ; ಏಕೆಂದರೆ, ದೆಹಲಿಯ ಶಾಸಕಾಂಗಸಭೆಯು

ಪರಿಷತ್ತನ್ನು ಹೊಂದಿಲ್ಲ; ಸಲಹಾಸಮಿತಿಯು ಈ ಕಾರ್ಯನಿರ್ವಹಿಸುತ್ತದೆ ಎಂದು ಭಾವಿಸಲಾಗಿದೆ. ಆದರೆ, ಜನರು ಈ ಅಭಿಪ್ರಾಯವನ್ನು ದೂರುವುದಕ್ಕೆ ಕಾರಣವಿದೆ, ಅದು ಈ ನಿಯಮವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಿದೆ. ದೆಹಲಿಯ ಪ್ರಕರಣದಲ್ಲಿ, ಸಾಂದರ್ಭಿಕ ಖಾಲಿ ಸ್ಥಾನವನ್ನು ದೆಹಲಿಯಲ್ಲಿ ವಾಸ್ತವವಾಗಿ ಚುನಾವಣೆಯನ್ನು ನಡೆಸುವ ಮೂಲಕ ತುಂಬಬಹುದು; ದೆಹಲಿ ಸದಸ್ಯರ ಸ್ಥಾನವು ಅದೇ ಹುದ್ದೆಯ ಇತರ ಸದಸ್ಯರ ಸ್ಥಾನಕ್ಕಿಂತ ಸ್ವಲ್ಪ ಭಿನ್ನವಾಗಿದೆ. ಇವು ಪ್ರಾಂತೀಯ ಶಾಸನಸಭೆಗಳಿಂದ ಆಯ್ಕೆಯಾಗುತ್ತವೆ; ಆದರೆ, ಅಜ್ಮೀರ್–ಮೇರ್ವಾರದ ಸದಸ್ಯರು ನೇರವಾಗಿ ಆಯ್ಕೆಯಾಗುತ್ತಾರೆ. ಆದ್ದರಿಂದ, ಉಪಚುನಾವಣೆಗಳು ಮೂಲ ಚುನಾವಣೆಗಳ ಮಾದರಿಯಲ್ಲಿಯೇ ನಡೆಯುವುದು ತತ್ತ್ವಶಃ ಸಮಂಜಸವೆನಿಸುತ್ತದೆ. ಇದು ನನ್ನ ಪ್ರಸ್ತಾವ. ಸಂಚಾಲಕಸಮಿತಿಯು ಇದನ್ನು ಒಪ್ಪಿಕೊಂಡಿದೆ ಎಂದು ನಾನು ಭಾವಿಸುತ್ತೇನೆ. ಇದಕ್ಕೆ ಸದನದ ಅಭ್ಯಂತರ ಇಲ್ಲವೆಂದು ನಾನು ನಂಬುತ್ತೇನೆ.]*

**ಮಾನ್ಯ ಸಭಾಧ್ಯಕ್ಷರು** : ಈ ತಿದ್ದುಪಡಿಗೆ ಸಂಬಂಧಿಸಿದಂತೆ ಯಾವುದಾದರೂ ಸದಸ್ಯರು ಏನನ್ನಾದರೂ ಹೇಳಲು ಬಯಸುತ್ತೀರಾ?

(ಯಾವ ಸದಸ್ಯರೂ ಮಾತನಾಡಲು ಎದ್ದು ನಿಲ್ಲಲಿಲ್ಲ.)

ಇದರ ಬಗ್ಗೆ ಯಾವ ಸದಸ್ಯರೂ ಏನನ್ನೂ ಹೇಳಲು ಬಯಸುವುದಿಲ್ಲವೆಂದು ನಾನು ತೆಗೆದುಕೊಳ್ಳುತ್ತೇನೆ. ನಾನು ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಒಕ್ಕೂಟ ಸಂವಿಧಾನದ ಮೇಲಿನ ವರದಿ

**ಮಾನ್ಯ ಸಭಾಧ್ಯಕ್ಷರು** : ನಾವು ಈಗ ಒಕ್ಕೂಟ ಸಂವಿಧಾನ ಸಮಿತಿಯ ವರದಿಯ ಇತರ ಖಂಡಗಳ ಚರ್ಚೆಗೆ ಬಂದಿದ್ದೇವೆ. ನಾವು ಈಗ, ಭಾಗ ೧೦ನ್ನು ತೆಗೆದುಕೊಳ್ಳೋಣವೇ ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರೇ?

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಒಂದು ವೇಳೆ ನಾನು ನಿಮ್ಮ ಪರಿಗಣನೆಗಾಗಿ ಇದನ್ನು ಸಲಹೆ ಮಾಡಬಹುದಾದರೆ, ಮಾನ್ಯರೆ, ನಾವು ಪ್ರಾಯಃ ಪರಿಗಣನೆಯಿಂದ ಬಿಟ್ಟುಹೋಗಿರುವ ಖಂಡಗಳನ್ನು ತೆಗೆದುಕೊಳ್ಳಬಹುದು.

**ಮಾನ್ಯ ಸಭಾಧ್ಯಕ್ಷರು** : ಖಂಡ ೭ನ್ನು ನಾವು ತೆಗೆದುಕೊಳ್ಳಬಹುದೆಂದು ನೀವು ಸಲಹೆ ಮಾಡುತ್ತಿದ್ದೀರಿ ಮತ್ತು ಇದಕ್ಕೆ ನನ್ನ ಅಭ್ಯಂತರವಿಲ್ಲ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ನಾನು ಖಂಡ ೭ನ್ನು ಈಗಾಗಲೇ ಮಂಡಿಸಿದ್ದೇನೆ. ನೀವು ಈಗ, ಯಾರು ಈ ಖಂಡವನ್ನು ಕುರಿತು ತಿದ್ದುಪಡಿಗಳ ಸೂಚನೆ ನೀಡಿದ್ದಾರೋ ಅಂತಹ ಸದಸ್ಯರನ್ನು ತಿದ್ದುಪಡಿಗಳನ್ನು ಮಂಡಿಸಲು ಕರೆಯಬಹುದು.

### ಖಂಡ ೭

**ಮಾನ್ಯ ಸಭಾಧ್ಯಕ್ಷರು** : ಮೊದಲು ಖಂಡ ೭. ಖಂಡ ೭ಕ್ಕೆ ಸಂಬಂಧಿಸಿದಂತೆ, ನಮ್ಮ ಬಳಿ ಅನೇಕ ತಿದ್ದುಪಡಿಗಳಿವೆ. ನಾವು ಈ ತಿದ್ದುಪಡಿಗಳನ್ನು ತೆಗೆದುಕೊಳ್ಳಬಹುದೇ ಅಥವಾ ಒಪ್ಪಂದದ ಮೂಲಕ ಹೊರಬಂದಂತಹ ಯಾವುದಾದರೂ ತಿದ್ದುಪಡಿ ಇದೆಯೇ? ಇಲ್ಲಿ ಇಂತಹ ಯಾವುದಾದರೂ ಒಪ್ಪಂದವಿದೆಯೇ?

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ನಾನು ಏನನ್ನು ಹೇಳಲು ಬಯಸುತ್ತೇನೆಂದರೆ, ನಿರ್ದಿಷ್ಟವಾಗಿ ಈ ತಿದ್ದುಪಡಿಯ ಬಗ್ಗೆ ಯಾರು ಆಸಕ್ತಿ ಹೊಂದಿದ್ದಾರೋ, ಅವರ

ಜೊತೆ ಚರ್ಚಿಸಿದ ಅನಂತರ ನಾವು ಸಮ್ಮತವಾದ ಮುಕ್ತಾಯಕ್ಕೆ ಬರಬಹುದು ಮತ್ತು ನಾನು ಉಪಸಂಹಾರದ ಮಾದರಿಯಲ್ಲಿ ತಿದ್ದುಪಡಿಯ ಸೂಚನೆ ನೀಡಿದ್ದೇನೆ. ಆದರೆ, ನಾನು ಸೂಚನೆ ನೀಡಿರುವ ತಿದ್ದುಪಡಿಯ ರೂಪದ ಬಗ್ಗೆಯೂ ಸಹ ಕೆಲವು ಅಭಿಪ್ರಾಯ ಭೇದಗಳಿರಬಹುದು ಎಂಬುದನ್ನು ನಾನು ಅರಿತಿದ್ದೇನೆ. ಒಂದು ವೇಳೆ, ರಾಜ್ಯಗಳನ್ನು ಪ್ರತಿನಿಧಿಸುವ ಗೌರವಾನ್ವಿತ ಸದಸ್ಯರುಗಳು ತಾವು ಸೂಚನೆ ನೀಡಿದ ತಿದ್ದುಪಡಿಗಳನ್ನು ಮಂಡಿಸಿದರೆ ಮತ್ತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರೆ ಮತ್ತು ಒಂದು ವೇಳೆ, ಈ ಸದನದಲ್ಲಿ ವ್ಯಕ್ತವಾದ ಅಭಿಪ್ರಾಯವು, ಕೆಲವು ದಿನಗಳ ಹಿಂದೆ ನಾನು ಹೊಂದಿದ ಅಭಿಪ್ರಾಯಗಳಿಗಿಂತ ಭಿನ್ನವಾಗಿದ್ದರೆ, ನಾನು ಕೆಲವು ಕ್ರಮಗಳನ್ನು ಸೂಚಿಸುತ್ತೇನೆ; ಆ ಮೂಲಕ ನಿಜವಾಗಿಯೂ ಎರಡೂ ಅಭಿಪ್ರಾಯಗಳನ್ನು ಒಂದಾಗಿ ಸೇರಿಸಬಹುದಾಗಿದೆ. ಆದ್ದರಿಂದ, ರಾಜ್ಯಗಳ ಪ್ರತಿನಿಧಿಗಳನ್ನು ತಮ್ಮ ತಿದ್ದುಪಡಿಗಳನ್ನು ಮಂಡಿಸುವುದಕ್ಕಾಗಿ ಮತ್ತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕಾಗಿ ನೀವು ಆಹ್ವಾನಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಬಹಳ ಉತ್ತಮವಾದುದು ಏನೆಂದರೆ, ನಾನು ಸೂಚನೆ ಪಡೆದಿರುವ ಎಲ್ಲ ತಿದ್ದುಪಡಿಗಳನ್ನು ತೆಗೆದುಕೊಳ್ಳುವುದು. ಖಂಡ ೭ನ್ನು ಕುರಿತ ಮೊದಲ ತಿದ್ದುಪಡಿಯು ಶ್ರೀ ನಜಿರುದ್ದೀನ್ ಅಹ್ಮದ್ ಅವರದ್ದಾಗಿದೆ.

**ಶ್ರೀ ನಜಿರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ನಾನು ತಿದ್ದುಪಡಿ ಸಂಖ್ಯೆ ೧೯೨ನ್ನು ಅಮುಖ್ಯ ಸ್ವರೂಪದ ಅಲ್ಪ ಬದಲಾವಣೆಯೊಂದಿಗೆ ಮಂಡಿಸಲು ನಿಮ್ಮಲ್ಲಿ ಅನುಮತಿ ಕೋರುತ್ತೇನೆ. ಖಂಡ ೭ರ ಉಪಖಂಡ (೨)ರ ಕಂಡಿಕೆ (ಬಿ)ಗೆ ಈ ಕೆಳಗಿನದ್ದು ಸೇರ್ಪಡೆಯಾಗಬೇಕೆಂದು ಮಂಡಿಸಲು ನಿಮ್ಮ ಬಳಿ ಬೇಡಿಕೊಳ್ಳುತ್ತೇನೆ.

"(ಬಿ) ಅಪರಾಧ ಪ್ರಕ್ರಿಯಾ ಸಂಹಿತೆ, ೧೮೯೮ ಅಥವಾ ತತ್ಕಾಲೀನ ಸಮಯದಲ್ಲಿ ಜಾರಿಯಲ್ಲಿರುವ ನಿಯಮದಲ್ಲಿನ ಉಪಬಂಧಗಳ ಪ್ರಕಾರ ಅಪರಾಧ ಕಾನೂನು ಪರಿಧಿಯಲ್ಲಿ ಅಧಿಕಾರ ಚಲಾಯಿಸುವ ಯಾವುದೇ ನ್ಯಾಯಾಲಯದಿಂದ ಯಾವುದೇ ವ್ಯಕ್ತಿಗೆ ವಿಧಿಸಲಾದ ಶಿಕ್ಷೆಗೆ ಕ್ಷಮಾಪಣೆ ನೀಡುವುದಕ್ಕೆ ಸಂಬಂಧಪಟ್ಟಂತೆ, ಅಂತಹ ಯಾವುದೇ ವ್ಯಕ್ತಿಗೆ ಯಾವುದೇ ನ್ಯಾಯಾಲಯವು ವಿಧಿಸಿದ ದಂಡನೆಗೆ ಸಂಪೂರ್ಣವಾಗಿ ಇಲ್ಲವೇ ಭಾಗಶಃವಾಗಿ ಕ್ಷಮಾಪಣೆ ನೀಡುವ ಪರಮೋಚ್ಚ ಹಕ್ಕು ಮತ್ತು ಅಧಿಕಾರವನ್ನು ರಾಷ್ಟ್ರಪತಿಯವರು ಹೊಂದಿರುತ್ತಾರೆ."

ಇದು ಕೇವಲ ಕರಡು ತಿದ್ದುಪಡಿಯಾಗಿದೆ ಎಂದು ತಿಳಿಸಲು ಅವಕಾಶ ಕೋರುತ್ತೇನೆ ಮತ್ತು ಇದನ್ನು ನಾನು ಕರಡು ರಚನಾ ಸಮಿತಿಯ ಪರಿಗಣನೆಗಾಗಿ ಸಲ್ಲಿಸುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಬಿ. ಎಲ್. ಮಿಟ್ಟರ್.

**ಶ್ರೀ ಬಿ. ಎಲ್. ಮಿಟ್ಟರ್** (ಬರೋಡಾ ರಾಜ್ಯ) : ಮಾನ್ಯರೆ, ನಾನು ಮಂಡಿಸುತ್ತಿರುವ ತಿದ್ದುಪಡಿಯು ಯಾವುದೆಂದರೆ:

"ಖಂಡ ೭ರ ಉಪಖಂಡ (೨) (ಬಿ)ಯಲ್ಲಿ 'ಅಧಿಕಾರವ್ಯಾಪ್ತಿ' ಶಬ್ದಗಳ ಅನಂತರ 'ಒಂದು ಪ್ರಾಂತ್ಯದಲ್ಲಿ' ಶಬ್ದವು ಸೇರ್ಪಡೆಯಾಗಬೇಕು."

ಈ ತಿದ್ದುಪಡಿಯ ವಿಷಯವೇನೆಂದರೆ, ಶಿಕ್ಷೆಗೆ ಕ್ಷಮಾಪಣೆ ಮತ್ತು ಶಿಕ್ಷೆಗೆ ತಾತ್ಕಾಲಿಕ ತಡೆಯೊಡ್ಡುವ ಅಧಿಕಾರವು ಪ್ರಸ್ತುತ ರಾಜ್ಯದ ಆಡಳಿತಗಾರರ ಬಳಿಯಲ್ಲಿದ್ದು, ಇದನ್ನು ಕಾಯ್ದಿಡಬಹುದಾಗಿದೆ. ಒಂದು ವೇಳೆ ಈ ತಿದ್ದುಪಡಿಯು ಅಂಗೀಕಾರವಾದರೆ, ರಾಷ್ಟ್ರಪತಿಯವರ ಈ ಅಧಿಕಾರವು ಪ್ರಾಂತ್ಯಗಳಲ್ಲಿ ಉದ್ಭವಿಸುವ ವಿಷಯಗಳಲ್ಲಿ ಮಾತ್ರ ಪ್ರಯೋಗಿಸಲ್ಪಡುತ್ತದೆಯೇ ಹೊರತು ರಾಜ್ಯಗಳಲ್ಲಿ ಅಲ್ಲ. ನಾನು ನೋಡುತ್ತಿರುವ ಒಂದು ಅಂಶವೇನೆಂದರೆ, ಕೇಂದ್ರ ಶಾಸನಸಭೆಯಲ್ಲಿ ಹುಟ್ಟುಹಾಕಲ್ಪಡುವ ಅಪರಾಧಗಳಿಗೆ ಸಂಬಂಧಪಟ್ಟಂತೆ, ರಾಷ್ಟ್ರಪತಿಯವರೇ ಅಂತಿಮ ಅಧಿಕಾರ(ಅಥಾರಿಟಿ)ವಾಗಬೇಕು. ಈ ಅಂಶವನ್ನು ನಾನು ಒಪ್ಪಿಕೊಳ್ಳಬಹುದು,

ಆದರೆ ಅದೇ ವೇಳೆಯಲ್ಲಿ, ರಾಜ್ಯಗಳು ತಮ್ಮ ಆಡಳಿತಗಾರರ (ಆಳುವವರ) ಬಳಿಯಲ್ಲಿ ಈಗ ಇರುವ ಅಧಿಕಾರ ಮೊಟಕುಗೊಳ್ಳುವುದನ್ನು ಬಯಸುವುದಿಲ್ಲ. ಇದಕ್ಕೆ ಪರಿಹಾರವೆಂದರೆ, ಆಡಳಿತಗಾರರ (ಆಳುವವರ) ಮತ್ತು ರಾಷ್ಟ್ರಪತಿಗಳ ಏಕಾಭಿಪ್ರಾಯವುಳ್ಳ ಕಾನೂನು ಪರಿಧಿಗೆ ಸೇರಿಸುವುದು. ಒಂದು ವೇಳೆ ಸರ್ ಗೋಪಾಲಸ್ವಾಮಿಯವರು ಆಡಳಿತಗಾರರ (ಆಳುವವರ) ಈ ಅಧಿಕಾರವನ್ನು ಕಾಯ್ದಿಟ್ಟುಕೊಂಡು ಅದೇ ಅಧಿಕಾರವನ್ನು ರಾಷ್ಟ್ರಪತಿಯವರಿಗೂ ನೀಡಿ ತಿದ್ದುಪಡಿಯನ್ನು ರಚಿಸಿದರೆ, ನಾನು ಇದನ್ನು ಸ್ವೀಕರಿಸಲು ಬಯಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಅನಂತರ ನಾನು ಮೂರು ತಿದ್ದುಪಡಿಗಳನ್ನು ಶ್ರೀ ಚನ್ನಯ್ಯ, ಶ್ರೀ ಗುರುವಾ ರೆಡ್ಡಿ ಮತ್ತು ಶ್ರೀ ಹಿಮ್ಮತ್ ಸಿಂಗ್ ಮಹೇಶ್ವರಿ ಅವರ ಹೆಸರಿನಲ್ಲಿ ಹೊಂದಿದ್ದೇನೆ. ಇವೆಲ್ಲವೂ ಅದೇ ಪರಿಣಾಮವನ್ನು ಹೊಂದಿರುವಂಥದ್ದು. ಆದ್ದರಿಂದ ಅವನ್ನು ಮಂಡಿಸಬೇಕಾದ ಆವಶ್ಯಕತೆಯಿಲ್ಲ.

ಅನಂತರ ತಿದ್ದುಪಡಿ ಸಂಖ್ಯೆ ೧೯೭, ಶ್ರೀ ಚೆಂಗಲರಾಯ ರೆಡ್ಡಿ ಅವರಿಂದ.

**ಶ್ರೀ ಚೆಂಗಲರಾಯ ರೆಡ್ಡಿ** (ಮೈಸೂರು ರಾಜ್ಯ) : ನಾನು ಇದನ್ನು ಮಂಡಿಸುತ್ತಿಲ್ಲ.

(ಶ್ರೀ ಗುಪ್ತೆಯವರು ತಮ್ಮ ತಿದ್ದುಪಡಿ ಸಂಖ್ಯೆ ೧೯೮ನ್ನು ಮಂಡಿಸಲಿಲ್ಲ.)

**ಶ್ರೀ ದೇಬಿ ಪ್ರಸಾದ್ ಖೈತಾನ್** (ಪಶ್ಚಿಮ ಬಂಗಾಳ : ಸಾಮಾನ್ಯ) : ನಾನು ತಿದ್ದುಪಡಿ ಸಂಖ್ಯೆ ೧೯೯ನ್ನು ಮಂಡಿಸುತ್ತಿಲ್ಲ.

(ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ ಅವರು ಪೂರಕ ಪಟ್ಟಿ ೧೨ರ ತಮ್ಮ ತಿದ್ದುಪಡಿ ಸಂಖ್ಯೆ ೪ನ್ನು ಮಂಡಿಸಲಿಲ್ಲ.)

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೇ, ನಾನು ಖಂಡ ೭ (೨) (ಬಿ)ಯನ್ನು ಮಂಡಿಸಲು ಅನುಮತಿ ಕೋರುತ್ತೇನೆ; ಈ ಕೆಳಗಿನವು ಬದಲಿಯಾಗಿ ಸೇರ್ಪಡೆಯಾಗಬೇಕು :

"(ಬಿ) ಅಪರಾಧ ಕಾನೂನು ಪರಿಧಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುವ ಯಾವುದೇ ನ್ಯಾಯಾಲಯವು ವಿಧಿಸಿದ ಶಿಕ್ಷೆಗೆ ಕ್ಷಮಾಪಣೆ ನೀಡುವ, ದಂಡನೆಗೆ ತಡೆಯೊಡ್ಡುವ, ಗಲ್ಲುಶಿಕ್ಷೆಯನ್ನು ತಾತ್ಕಾಲಿಕವಾಗಿ ನಿಲ್ಲಿಸುವ, ಕ್ಷಮಾದಾನ ನೀಡುವ, ರದ್ದುಪಡಿಸುವ ಅಥವಾ ಕ್ರಮವ್ಯತ್ಯಯ ಮಾಡುವ (ಬದಲಾಯಿಸುವ) ಅಧಿಕಾರವು, ಅಪರಾಧ ನಿರ್ಣಯದ ಸಂದರ್ಭದಲ್ಲಿ ರಾಷ್ಟ್ರಪತಿಯವರ ಬಳಿಯಿರುತ್ತದೆ.

(i) ಒಕ್ಕೂಟದ ಸಂಸತ್ತು ಹೊಂದಿರುವ ಮತ್ತು ಸಂಬಂಧಿಸಿದ ಘಟಕ ಶಾಸನಸಭೆ ಹೊಂದಿಲ್ಲದ, ಕಾನೂನು ರಚಿಸುವ ಅಧಿಕಾರಕ್ಕೆ ಸಂಬಂಧಿಸಿದ ಒಕ್ಕೂಟದ ಕಾನೂನುಗಳಿಗೆ ವಿರುದ್ಧವಾದ ಅಪರಾಧಗಳಿಗಾಗಿ; ಮತ್ತು...

(ii) ಸೈನಿಕ ನ್ಯಾಯಾಲಯಗಳಿಂದ ವಿಚಾರಣೆ ಮಾಡಲಾದ ಅಪರಾಧಗಳಿಗಾಗಿ.

ಇಂತಹ ಅಧಿಕಾರವನ್ನು ಒಕ್ಕೂಟದ ಕಾನೂನಿನ ಪ್ರಕಾರ ಇತರ ಅಧಿಕಾರಗಳಿಗೂ ಅನುಗ್ರಹಿಸಬಹುದು.

ಷರತ್ತು ಏನೆಂದರೆ, ಈ ಉಪಖಂಡದಲ್ಲಿನ ಯಾವುದೂ ಕೂಡ, ಸೈನಿಕ ನ್ಯಾಯಾಲಯದಿಂದ ನೀಡಲಾದ ದಂಡನೆಯನ್ನು ರದ್ದುಪಡಿಸುವ, ಕ್ಷಮಿಸುವ ಅಥವಾ ಬದಲಿಸುವ ಒಕ್ಕೂಟದ ಸಶಸ್ತ್ರ ದಳದ ಯಾವುದೇ ಅಧಿಕಾರಿಯ ಅಧಿಕಾರದ ಮೇಲೆ ಪರಿಣಾಮ ಬೀರಬಾರದು."

ಮಾನ್ಯರೆ, ನನ್ನ ಹಾಗೂ ತಿದ್ದುಪಡಿ (ಸರ್ ಬಿ.ಎಲ್. ಮಿಟ್ಟರ್ ಅವರು ಈಗಷ್ಟೇ ಮಂಡಿಸಿದ ತಿದ್ದುಪಡಿ)ಯನ್ನು ಮಂಡಿಸಿದ ಅನೇಕ ರಾಜ್ಯಗಳ ಪ್ರತಿನಿಧಿಗಳ ನಡುವೆ ಚರ್ಚೆ ನಡೆದ ಅನಂತರ ಈ ತಿದ್ದುಪಡಿಗೆ ಸೂಚನೆ ನೀಡಲಾಯಿತು. ಪ್ರಾಂತ್ಯಗಳಲ್ಲಿ ಈ ಖಂಡದ ಅಡಿಯಲ್ಲಿ ವಿಧಿಸಲಾದ ಶಿಕ್ಷೆಗಳಿಗೆ ಕ್ಷಮಾಪಣೆ ನೀಡುವ ಅಧಿಕಾರವನ್ನು ನಿಯಂತ್ರಿಸುವುದೇ ಈ ತಿದ್ದುಪಡಿಯ ಉದ್ದೇಶವಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಭಾರತೀಯ ರಾಜ್ಯಗಳ ಆಳ್ವಿಕೆಗಾರ(ರಾಜ)ರಲ್ಲಿ ಪ್ರಸ್ತುತ ಇರುವ, ಎಲ್ಲ ರೀತಿಯ ಅಪರಾಧ ನಿರ್ಣಯಕ್ಕೆ ಸಂಬಂಧಪಟ್ಟಂತೆ ಕ್ಷಮಾಪಣೆ ನೀಡುವ ಅಪರಿಮಿತ ಅಧಿಕಾರವನ್ನು ಉಳಿಸಿಕೊಳ್ಳಲು ಅವರು ಬಯಸಿದ್ದಾರೆ.

ಈಗ, ಮಾನ್ಯರೆ, ಅದು ಕೆಲವು ಪ್ರಮುಖ ವಿಷಯವನ್ನು ಎತ್ತಿದೆ. ನಾವು ಒಕ್ಕೂಟವನ್ನು ರಚಿಸುತ್ತಿದ್ದೇವೆ ಮತ್ತು ನಾವು ಸಾರ್ವಭೌಮ ಅಧಿಕಾರವನ್ನು ಒಕ್ಕೂಟ ಮತ್ತು ಘಟಕಗಳ ನಡುವೆ ಹಂಚುತ್ತಿದ್ದೇವೆ; ನಿರ್ದಿಷ್ಟ ವಿಷಯಗಳಿಗೆ ಸಂಬಂಧಪಟ್ಟಂತೆ ಒಕ್ಕೂಟವು ಕಾನೂನು ರಚಿಸುವ ಅಧಿಕಾರವನ್ನು ಹೊಂದಿದೆ ಮತ್ತು ಇತರ ವಿಷಯಗಳಲ್ಲಿ ಘಟಕಗಳು, ಒಕ್ಕೂಟಕ್ಕೆ ಹೊರತುಪಡಿಸಿ ಕಾನೂನು ರಚಿಸುವ ಅಧಿಕಾರವನ್ನು ಹೊಂದಿವೆ. ಪ್ರಾಂತ್ಯಗಳ ಪ್ರಕರಣದಲ್ಲಿ, ಒಕ್ಕೂಟ ಮತ್ತು ಪ್ರಾಂತ್ಯಗಳೆರಡೂ ಕಾನೂನು ರಚನೆ ಮಾಡಬಹುದಾದ ವಿಷಯಗಳ ಮೂರನೇ ಪಟ್ಟಿಯೂ ಇದೆ.

ಈಗ, ಕ್ಷಮಾದಾನದ ಅಧಿಕಾರವು ಎಲ್ಲಿ ಸ್ಥಾನ ಪಡೆಯಬೇಕು ಎಂಬ ಪ್ರಶ್ನೆಯನ್ನು ಪರಿಗಣಿಸುವಾಗ, ಎರಡು ಮೂಲತತ್ತ್ವಗಳನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಮೊದಲನೆಯದು, ಅಪರಾಧಗಳು ನಡೆಯುವುದಕ್ಕೆ ವಿರುದ್ಧವಾಗಿ ಕಾನೂನು ರಚಿಸುವ ಅಧಿಕಾರದ ಕಡೆಗೆ ನಾವು ಉಚಿತವಾದ ಲಕ್ಷ್ಯ ನೀಡಬೇಕು. ಪರಿಗಣನೆಗೆ ತೆಗೆದುಕೊಳ್ಳಬೇಕಾದ ಎರಡನೆಯ ಅಂಶವೇನೆಂದರೆ, ಇಂತಹ ದಂಡನೆ ಅಥವಾ ಅಪರಾಧ ನಿರ್ಣಯವನ್ನು ಪ್ರಕಟಿಸುವ ನ್ಯಾಯಾಲಯಗಳ ಪ್ರಕಾರ, ಇದು ಹೇಗೆ ಸಂಭವಿಸುತ್ತದೆಂದರೆ, ಬ್ರಿಟಿಷ್ ಭಾರತಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ನ್ಯಾಯಾಧಿಕರಣದ ಆಡಳಿತದ ಏಕರೂಪ ಪದ್ಧತಿಯನ್ನು ಹೊಂದಿದ್ದೇವೆ ಮತ್ತು ಪ್ರಾಂತ್ಯಗಳಲ್ಲಿ ಅತ್ಯಂತ ಕೆಳ ಹಂತದಿಂದ ಹಿಡಿದು ಅತ್ಯಂತ ಮೇಲಿನ ಹಂತದವರೆಗಿನ ನ್ಯಾಯಾಲಯಗಳು, ಕೇವಲ ಪ್ರಾಂತೀಯ ಕಾನೂನಿನ ವಿರುದ್ಧ ಮಾತ್ರವಲ್ಲ, ಒಕ್ಕೂಟದ ಕಾನೂನಿನ ವಿರುದ್ಧದ ಅಪರಾಧಗಳವರೆಗಿನ ಕಾನೂನು ಪರಿಧಿಯನ್ನು ಹೊಂದಿವೆ. ಭಾರತೀಯ ರಾಜ್ಯಗಳಲ್ಲಿ ಇದೇ ವಿಷಯವು ಜಾರಿಯಲ್ಲಿದೆ. ಭಾರತೀಯ ರಾಜ್ಯಗಳ ನ್ಯಾಯಾಲಯಗಳು ಎಲ್ಲ ಪ್ರಕಾರದ ಅಪರಾಧಗಳ ನ್ಯಾಯ ನಿರ್ಧಾರಮಾಡುವ ಅಧಿಕಾರ ಹೊಂದಿವೆ; ಎಲ್ಲಿಯವರೆಗೆ ಎಂದರೆ, ಒಕ್ಕೂಟವು ಅಸ್ತಿತ್ವಕ್ಕೆ ಬಂದ ಅನಂತರ ಒಕ್ಕೂಟದ ಕಾನೂನಿನ ಪ್ರಕಾರ ಅಪರಾಧ ಎನಿಸಬಹುದಾದ ಅಪರಾಧಗಳೂ ಕೂಡ ಇದರ ವ್ಯಾಪ್ತಿಗೆ ಬರುತ್ತವೆ ಮತ್ತು ಕ್ಷಮಾದಾನದ ಅಧಿಕಾರವೂ ಕೂಡ, ಹೆಚ್ಚು ಕಡಿಮೆ ನಿಜವಾಗಿಯೂ ಒಂದು ವಿನಾಯಿತಿಯನ್ನು ಹೊರತುಪಡಿಸಿ, ಪ್ರಾಂತ್ಯಗಳು ಮತ್ತು ಭಾರತೀಯ ರಾಜ್ಯಗಳ ನಡುವಿನಂತೆಯೇ ಇದೆ. ಕೊನೆಯ ತಿದ್ದುಪಡಿಯಲ್ಲಿರುವಂತೆ, ಅಪರಾಧ ಪ್ರಕ್ರಿಯಾ ಸಂಹಿತೆಯ ಪ್ರಕಾರ, ವಾಸ್ತವವಾಗಿ ಎಲ್ಲ ಪ್ರಕಾರದ ಅಪರಾಧ ಪ್ರಕರಣಗಳಲ್ಲಿ ಕ್ಷಮಾದಾನ ನೀಡುವ, ದಂಡನೆಯನ್ನು ಮನ್ನಿಸುವ ಅಥವಾ ತಡೆಹಿಡಿಯುವ ಅಧಿಕಾರವನ್ನು ಹೊಂದಿರುವುದು ಪ್ರಾಂತೀಯ ಸರ್ಕಾರ; ಆದರೆ, ಒಂದೇ ಒಂದು ಷರತ್ತು ಏನೆಂದರೆ, ಒಂದು ವೇಳೆ ದಂಡನೆಯು ಮರಣದಂಡನೆಯಾಗಿದ್ದರೆ, ಕೇಂದ್ರ ಸರ್ಕಾರವು ಏಕಾಭಿಪ್ರಾಯದ ಅಧಿಕಾರವನ್ನು ಹೊಂದಿರುತ್ತದೆ. ಭಾರತೀಯ ರಾಜ್ಯಗಳ ಪ್ರಕರಣದಲ್ಲಿ ಈ ವಿನಾಯಿತಿಯು ಸದ್ಯಕ್ಕೆ ಅಸ್ತಿತ್ವದಲ್ಲಿಲ್ಲ. ನಾವು ಈಗ ಪರಿಗಣಿಸಬೇಕಾದ ಪ್ರಶ್ನೆ ಏನೆಂದರೆ, ಇಂತಹ ಪರಿಸ್ಥಿತಿಗಳಲ್ಲಿ ನಾವು ಕ್ಷಮಾದಾನದ ಅಧಿಕಾರವನ್ನು ಪ್ರಾಂತ್ಯದಲ್ಲಿ ಇಡಬೇಕೇ ಅಥವಾ ಕೇಂದ್ರದಲ್ಲಿ ಇಡಬೇಕೇ ಅಥವಾ ಎರಡರಲ್ಲೂ ಇಡಬೇಕೇ ಎಂಬುದು. ಮಾನ್ಯರೆ, ನಾನು ಅಂದುಕೊಳ್ಳುತ್ತೇನೆ, ನಾವು ಒಕ್ಕೂಟದ ಮುಖ್ಯಸ್ಥರ ಸ್ಥಾನವನ್ನು ರಚಿಸುತ್ತಿರುವಾಗ ಮತ್ತು ಅವರನ್ನು ರಾಷ್ಟ್ರಪತಿ ಎಂದು ಕರೆಯುತ್ತಿರುವಾಗ, ಸಹಜವಾಗಿಯೇ ಅವರಿಗೆ ನೀಡಬೇಕಾದ ಅಧಿಕಾರಗಳಲ್ಲಿ ಕ್ಷಮಾದಾನದ ಅಧಿಕಾರವೂ ಸಹ ಒಂದಾಗಿರುತ್ತದೆಂದು ಈ ಸದನವು ಒಪ್ಪಿಕೊಳ್ಳಲಿದೆ. ಈಗ, ಕ್ಷಮಾದಾನದ ಅಧಿಕಾರವು ತನ್ನ ಸ್ವರೂಪದಲ್ಲಿ ಅಪರಿಮಿತವಾಗಿರುತ್ತದೆಯೇ ಅಥವಾ ನಾವು ಅವರಿಗೆ ಕ್ಷಮಾದಾನದ ಸೀಮಿತ ಅಧಿಕಾರವನ್ನು ಮಾತ್ರ ನೀಡುತ್ತಿದ್ದೇವೆಯೇ? ಯಾವುದೇ ಸಿದ್ಧಾಂತದ ಪ್ರಕಾರ, ರಾಜನ ವಿಶೇಷಾಧಿಕಾರ ಮತ್ತು ಮುಂತಾದವುಗಳ ಅನ್ವಯ ಕ್ಷಮಾದಾನದ ಅಧಿಕಾರವನ್ನು ಜಾರಿಮಾಡುವುದಕ್ಕೆ ಅವರು ತಮ್ಮ ಸ್ಥಾನದಲ್ಲಿ ವಂಶಪಾರಂಪರ್ಯದ ರಾಜನ ಹಾಗೆ ಅಲ್ಲ. ಒಂದು ವೇಳೆ ಅವರು ಕ್ಷಮಾದಾನದ ಅಧಿಕಾರವನ್ನು ಬಳಸಿದರೆ, ನಾವು ಇದಕ್ಕೆ ಸಂಬಂಧಿಸಿದ ಅಧಿಕಾರವನ್ನು ಸಂವಿಧಾನಕ್ಕೆ ಅಥವಾ ಕೆಲವು ಒಕ್ಕೂಟದ ಕಾನೂನಿಗೆ ನೀಡಬೇಕಾಗುತ್ತದೆ. ಆದ್ದರಿಂದ, ಸಂವಿಧಾನದಲ್ಲಿ ನಾವು ಈ ಪ್ರಶ್ನೆಯನ್ನು ಇತ್ಯರ್ಥಗೊಳಿಸಬೇಕಿದೆ.

ನಾನು ಒಂದೇ ಬಾರಿಗೆ ಹೇಳುವುದಾದರೆ, ವಾಸ್ತವವಾಗಿ ಎಲ್ಲ ಒಕ್ಕೂಟಗಳಲ್ಲಿ ಈ ಕ್ಷಮಾದಾನದ ಅಧಿಕಾರವು ಒಕ್ಕೂಟದ ಮುಖ್ಯಸ್ಥರು ಮತ್ತು ಘಟಕದ ಮುಖ್ಯಸ್ಥರ ನಡುವೆ ಹಂಚಿಕೆಯಾಗಿದೆ ಮತ್ತು ಈ ಹಂಚಿಕೆಯನ್ನು ಯಾವ ಮೂಲತತ್ತ್ವದ ಮೇಲೆ ಮಾಡಲಾಗಿದೆಯೆಂದರೆ, ಒಕ್ಕೂಟದ ಕಾನೂನಿಗೆ ವಿರುದ್ಧವಾದ ಅಪರಾಧಗಳಿಗೆ ಕ್ಷಮಾದಾನ ನೀಡುವ ಅಧಿಕಾರವನ್ನು ಒಕ್ಕೂಟದ ಮುಖ್ಯಸ್ಥರು ಹೊಂದಿರುತ್ತಾರೆ ಮತ್ತು ಘಟಕದ ಕಾನೂನಿಗೆ ವಿರುದ್ಧವಾದ ಅಪರಾಧಗಳಿಗೆ ಕ್ಷಮಾದಾನ ಹೊಂದಿರುವ ಅಧಿಕಾರವನ್ನು ಘಟಕದ ಮುಖ್ಯಸ್ಥರು ಹೊಂದಿರುತ್ತಾರೆ. ಈಗ, ನಾವು ಪರಿಗಣಿಸಬೇಕಾಗಿರುವ ಪ್ರಶ್ನೆ ಏನೆಂದರೆ, ನಾವು ಎಲ್ಲ ಒಕ್ಕೂಟಗಳ ಪದ್ಧತಿಯನ್ನು ಅನುಕರಿಸಬೇಕೇ ಎಂಬುದು.

ಈಗಿನ ಕರಡು ಹೇಳುವ ಪ್ರಕಾರ, ಕೇಂದ್ರ ಸಂವಿಧಾನ ಮತ್ತು ಪ್ರಾಂತೀಯ ಸಂವಿಧಾನಗಳೆರಡರಲ್ಲೂ ಕ್ಷಮಾದಾನದ ಅಧಿಕಾರವು ಒಕ್ಕೂಟದ ಅಧ್ಯಕ್ಷರ ಬಳಿಯಲ್ಲಿದೆ. ಆದರೆ, ಒಕ್ಕೂಟದ ಕಾನೂನಿನ ಮೂಲಕ ಈ ಅಧಿಕಾರವನ್ನು ಎರಡೂ ಅಧಿಕಾರಗಳಿಗೆ ನೀಡುವ ಅವಕಾಶವನ್ನು ಕಲ್ಪಿಸಲಾಗಿದೆ. ಆದರೆ, ನೀವು ಅಂಗೀಕರಿಸಿರುವ ಕರಡು ಮಾದರಿಯ ಪ್ರಾಂತೀಯ ಸಂವಿಧಾನದಲ್ಲಿ ಪ್ರಾಂತ್ಯದ ರಾಜ್ಯಪಾಲರಿಗೆ, ಕ್ಷಮಾದಾನ ನೀಡುವ ಯಾವುದೇ ಅಧಿಕಾರದ ಅವಕಾಶವನ್ನು ನೀಡಲಾಗಿಲ್ಲ. ಆದ್ದರಿಂದ, ಇದು ಎಲ್ಲಿಗೆ ಬರುತ್ತದೆಂದರೆ, ಪ್ರಸ್ತುತ ಖಂಡದ ಉದ್ದೇಶವೇನೆಂದರೆ, ರಾಷ್ಟ್ರಪತಿಯವರು ಕ್ಷಮಾದಾನ ನೀಡುವ ಪ್ರಾಥಮಿಕ ಅಧಿಕಾರಿಯಾಗಿರುತ್ತಾರೆ ಮತ್ತು ಒಕ್ಕೂಟದ ಕಾನೂನು ಈ ಅಧಿಕಾರವನ್ನು ಇತರ ಜನರಿಗೂ ನೀಡಬಹುದಾಗಿದೆ.

**ಮಾನ್ಯ ಸಭಾಧ್ಯಕ್ಷರು** : ನಾನು ಭಾವಿಸುವಂತಹ ಒಂದು ತೊಂದರೆಯಿದೆ. ನೀವು ಅದನ್ನು ದಯವಿಟ್ಟು ವಿವರಿಸುತ್ತೀರಾ? ನಿಮ್ಮ ತಿದ್ದುಪಡಿಯು, ದಂಡ ಸಂಹಿತೆಯ ಅಡಿಯಲ್ಲಿನ – ಕೊಲೆಯೆನ್ನಿ – ಅಪರಾಧದಲ್ಲಿ ಕ್ಷಮಾದಾನ ನೀಡುವ ಅಧಿಕಾರವನ್ನು ರಾಷ್ಟ್ರಪತಿಯವರಿಂದ ಹೊರತಾಗಿಸುತ್ತದೆಯೇ?

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಈಗಿರುವಂತೆ ಖಂಡವು ಹಾಗೆ ಹೇಳುತ್ತದೆ.

**ಮಾನ್ಯ ಸಭಾಧ್ಯಕ್ಷರು** : ನಿಮ್ಮಿಂದ ತಿದ್ದುಪಡಿಗೊಳಗಾದ ರೀತಿಯಲ್ಲಿ ಖಂಡವು, ಕೊಲೆಯ ಅಪರಾಧಕ್ಕೆ ಕ್ಷಮಾದಾನ ನೀಡುವ ಅಧಿಕಾರವನ್ನು ರಾಷ್ಟ್ರಪತಿಯವರಿಗೆ ನೀಡುತ್ತದೆಯೇ?

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಇಲ್ಲ. ಇದು ನೀಡುವುದಿಲ್ಲ. ನಾನು ವಿವರಿಸಿದಂತೆ, ಖಂಡವು ಈಗಿರುವಂತೆ ಕ್ಷಮಾದಾನದ ಸಂಪೂರ್ಣ ಅಧಿಕಾರವನ್ನು ರಾಷ್ಟ್ರಪತಿಯವರಿಗೆ ನೀಡುತ್ತದೆ; ಒಕ್ಕೂಟದ ಕಾನೂನು ಇತರ ಅಧಿಕಾರಗಳಿಗೆ ಇದನ್ನು ನೀಡಬಹುದಾಗಿದ್ದರೂ ಕೂಡ. ಈಗ, ಸೂಚನೆ ನೀಡಲಾಗಿರುವ ತಿದ್ದುಪಡಿ ೧, ಕ್ಷಮಾದಾನವನ್ನು ನೀಡುವ ರಾಷ್ಟ್ರಪತಿಯವರ ಅಧಿಕಾರವು ಒಕ್ಕೂಟದ ಕಾನೂನಿಗೆ ವಿರುದ್ಧವಾದ ಅಪರಾಧಗಳಿಗೆ ಮಾತ್ರ ಆಗಿರುತ್ತದೆ ಮತ್ತು ಅವರು ಈಗಿನ ಸ್ಥಿತಿಯಲ್ಲಿ, ಸಾಮಾನ್ಯ ಅಪರಾಧ ಕಾನೂನಿನ ಅಡಿಯಲ್ಲಿನ ದಂಡನೆಗಳ ಪ್ರಕರಣಗಳಲ್ಲಿ ಕ್ಷಮಾದಾನ ನೀಡುವುದು ಸಾಧ್ಯವಿಲ್ಲ. ಪ್ರಾಂತ್ಯಗಳಲ್ಲಿ, ಸಾಮಾನ್ಯ ಅಪರಾಧ ಕಾನೂನು ವಿಷಯ ೨ರಲ್ಲಿ ಕಂಡುಬರುತ್ತದೆ, ನನಗನ್ನಿಸುತ್ತದೆ, ಏಕಾಭಿಪ್ರಾಯದ ಪಟ್ಟಿಯಲ್ಲಿ ಮತ್ತು ಏಕಾಭಿಪ್ರಾಯದ ಪಟ್ಟಿಯಲ್ಲಿ ಅಂತಹ ಒಂದು ಪ್ರಕರಣದಲ್ಲಿ, ೧೯೩೫ರ ಅಧಿನಿಯಮದ ಸಿದ್ಧಾಂತದ ಪ್ರಕಾರ ಒಕ್ಕೂಟವೂ ಕೂಡ ಕಾನೂನು ಮಾಡುವ ಅಧಿಕಾರವನ್ನು ಹೊಂದಿರುತ್ತದೆ ಎಂಬುದಕ್ಕೆ ಸಂಬಂಧಿಸಿದಂತೆ. ಕಾರ್ಯನಿರ್ವಾಹಕ ಅಧಿಕಾರವನ್ನು ಏಕಾಭಿಪ್ರಾಯದ ವಿಷಯಕ್ಕೆ ವಿಸ್ತರಿಸುವುದು ಆವಶ್ಯಕವಲ್ಲ;

**ಮಾನ್ಯ ಸಭಾಧ್ಯಕ್ಷರು** : ರಾಷ್ಟ್ರಪತಿಯವರಿಗೆ ಯಾವ್ಯಾವ ವಿಷಯಗಳ ಪ್ರಕರಣಗಳಲ್ಲಿ ಕ್ಷಮಾದಾನ ನೀಡುವ ಅಧಿಕಾರ ಇರಬೇಕೆಂದು ನೀವು ಆಲೋಚಿಸುತ್ತೀರಿ? ವಾಸ್ತವವಾಗಿ, ದಂಡನೆಯ ಕಾನೂನು ಸಂಪೂರ್ಣವಾಗಿ ಪ್ರಾಂತ್ಯದ ವಿಷಯ. ಹಾಗಿದ್ದರೆ, ರಾಷ್ಟ್ರಪತಿಯವರು ಕ್ಷಮಾದಾನ ನೀಡುವ ಅಧಿಕಾರ ಹೊಂದಿರಬಹುದಾದ ಅಪರಾಧಗಳು ಯಾವುವಾಗಿರುತ್ತವೆ?

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ನಾನು ಉಲ್ಲೇಖಿಸಬಹುದಾದ ಅಪರಾಧಗಳು, ಉದಾಹರಣೆಗೆ: ಆದಾಯ ತೆರಿಗೆ ಅಧಿನಿಯಮ ಸಮುದ್ರ ಸುಂಕದ ಅಧಿನಿಯಮ ಮತ್ತು ಸಂಪೂರ್ಣವಾಗಿ ಒಕ್ಕೂಟದ ವಿವರಣೆಯನ್ನು ಹೊಂದಿರುವ ಅಧಿನಿಯಮಗಳ ವಿರುದ್ಧವಾದವುಗಳು.

ಈಗ, ನನ್ನ ತಿದ್ದುಪಡಿಯ ಹಿಂದಿರುವ ಮೂಲತತ್ತ್ವ ಏನೆಂದರೆ, ರಾಷ್ಟ್ರಪತಿಯವರು ಕ್ಷಮಾದಾನ ನೀಡುವ ಅಥವಾ ಇತರ ಮುಂತಾದ ಅಧಿಕಾರವನ್ನು ಒಕ್ಕೂಟದ ಕಾನೂನಿಗೆ ವಿರುದ್ಧವಾಗಿ ನಡೆದ ಅಪರಾಧ ಪ್ರಕರಣಗಳಲ್ಲಿ ಮಾತ್ರ ಹೊಂದಿರಬೇಕು. ಸಾಮಾನ್ಯ ಅಪರಾಧ ಕಾನೂನಿಗೆ ವಿರುದ್ಧವಾದ ಅಪರಾಧಗಳು ಮತ್ತು ಪ್ರಾಂತ್ಯಗಳು ಅಥವಾ ರಾಜ್ಯಗಳು ಮಾಡಿದ ಕಾನೂನಿಗೆ ವಿರುದ್ಧವಾದ ಅಪರಾಧ ಪ್ರಕರಣಗಳಲ್ಲಿ ಕ್ಷಮಾದಾನ ನೀಡುವ ಅಧಿಕಾರವನ್ನು ಪ್ರಾಂತ್ಯಗಳು ಅಥವಾ ರಾಜ್ಯಗಳ ಮುಖ್ಯಸ್ಥರು ಹೊಂದಿರಬೇಕು.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** (ಮದ್ರಾಸ್ : ಸಾಮಾನ್ಯ) : ಒಕ್ಕೂಟದ ಸರ್ಕಾರವು ವಿಶೇಷವಾಗಿ ಪ್ರಾಂತೀಯ ಪಟ್ಟಿಯಲ್ಲಿರುವ ಏಕಾಭಿಪ್ರಾಯದ ವಿಷಯಗಳು ಹಾಗೂ ವಿಷಯಗಳೆರಡಕ್ಕೂ ಸಂಬಂಧಪಟ್ಟ ಅಧಿಕಾರಗಳನ್ನು, ಯಾವುದೇ ನಿಯೋಗವನ್ನು ಹೊರತುಪಡಿಸಿ, ಪ್ರಾಂತೀಯ ಸರ್ಕಾರಗಳಿಗೆ ವಹಿಸುವುದಕ್ಕೆ ಅನುಗುಣವಾದ, ಬದಲಾವಣೆಗಳನ್ನು ಪ್ರಾಂತೀಯ ಸಂವಿಧಾನದಲ್ಲಿ ಮಾಡಲಾಗುವುದೆಂದು ನಾನು ಭಾವಿಸುತ್ತೇನೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಹೌದು, ಮಾನ್ಯರೆ. ಮೂಲ ಉದ್ದೇಶವೇನೆಂದರೆ, ಒಂದು ವೇಳೆ ಈ ತಿದ್ದುಪಡಿಯನ್ನು ಕೇಂದ್ರ ಸಂವಿಧಾನದಲ್ಲಿ ನೀವು ಜಾರಿಮಾಡಿದರೆ, ಅದಕ್ಕೆ ಅನುಗುಣವಾದ ಉಪಬಂಧಗಳನ್ನು ಮಾದರಿ ಪ್ರಾಂತೀಯ ಸಂಧಾನದಲ್ಲಿಯೂ ಮಾಡಬೇಕಾಗುತ್ತದೆ ಮತ್ತು ಆ ನಿಟ್ಟಿನತ್ತ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ನಾನು ಈಗ, ಒಂದು ವಿಷಯದಲ್ಲಿ ವ್ಯವಹರಿಸಬಹುದು; ಅದು, ಸರ್ ಬಿ. ಎಲ್. ಮಿಟ್ಟರ್ ಅವರ ತಿದ್ದುಪಡಿಯಿಂದ ಉದ್ಭವಿಸಿದ ವಿಷಯವಾಗಿದೆ. ಅವರ ತಿದ್ದುಪಡಿಯು ಹೇಳುವುದೇನೆಂದರೆ, ಈ ನಿರ್ದಿಷ್ಟ ಖಂಡದಲ್ಲಿರುವ ಕ್ಷಮಾದಾನ ನೀಡುವ ಅಧಿಕಾರವು ಪ್ರಾಂತ್ಯಗಳಿಗೆ ಸೀಮಿತವಾಗಬೇಕು. ಆದಾಗ್ಯೂ, ನಾವು ಈ ಕ್ಷಮಾದಾನದ ಅಧಿಕಾರವನ್ನು ಹೇಗೆ ವಿಭಜಿಸುತ್ತೇವೆ ಎಂಬುದು ಭಾರತೀಯ ರಾಜ್ಯಗಳಿಗೆ ಸಂಬಂಧಪಟ್ಟಿಲ್ಲ. ಈ ನಿರ್ದಿಷ್ಟ ತಿದ್ದುಪಡಿಯು ಪ್ರಸ್ತುತ ಭಾರತೀಯ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ಸಂಗತಿಯಿಂದ ಸ್ಫೂರ್ತಿ ಪಡೆದಿದೆ; ಹೆಸರಿಸುವುದಾದರೆ, ತನ್ನ ನ್ಯಾಯಾಲಯದಲ್ಲಿ ಯಾವುದೇ ರೀತಿಯ ದಂಡನೆಗೆ ಗುರಿಯಾದ ಪ್ರತಿಯೊಂದು ಅಪರಾಧಗಳಿಗೆ ಕ್ಷಮಾದಾನ ನೀಡುವ ಅಧಿಕಾರವನ್ನು ಅಲ್ಲಿನ ಆಳ್ವಕೆಗಾರ(ರಾಜ)ರು ಹೊಂದಿರುತ್ತಾರೆ. ಈಗ, ಮಾನ್ಯರೆ, ಇಂತಹ ಪ್ರಕರಣಗಳಲ್ಲಿ ಕ್ಷಮಾದಾನ ನೀಡುವ ಅಧಿಕಾರದಿಂದ ರಾಷ್ಟ್ರಪತಿಯವರನ್ನು ಹೊರಗಿಡುವುದನ್ನು ಕುರಿತಾದ ತಕರಾರು ಯಾವುದೇ ಮೂಲತತ್ತ್ವದ ತಳಹದಿಯನ್ನು ಹೊಂದಿದಂತೆ ಕಾಣುವುದಿಲ್ಲ; ಏಕೆಂದರೆ, ಕ್ಷಮಾದಾನದ ಅಧಿಕಾರಕ್ಕೆ ಸಂಬಂಧಪಟ್ಟಂತೆ, ಇತರ ಅಂಶಗಳನ್ನೂ ಕೂಡ ಪರಿಗಣಿಸಬೇಕಾಗುತ್ತದೆಂದು ನಾನು ಈ ಸದನವನ್ನು ಕೇಳಿಕೊಂಡಿದ್ದೇನೆ. ಹೆಸರಿಸುವುದಾದರೆ, ಕಾನೂನನ್ನು ಜಾರಿಗೊಳಿಸುವುದನ್ನು ತನ್ನ ಕಾರ್ಯವಾಗಿ ಹೊಂದಿರುವ, ಕಾನೂನು ರಚನೆ ಮಾಡುವುದಕ್ಕೆ ಮತ್ತು ಅವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಜವಾಬ್ದಾರವಾಗಿರುವ ಪ್ರಾಧಿಕಾರದಿಂದ, ಕ್ಷಮಾದಾನಗಳನ್ನು ನೀಡುವುದು, ಮನ್ನಿಸುವುದು, ದಂಡನೆಯ ತೀವ್ರತೆಯನ್ನು ಕಡಿಮೆ ಮಾಡುವುದು ಮುಂತಾದವುಗಳಿಗೆ ಸಂಬಂಧಿಸಿದ ನೀತಿಯನ್ನು ನಿರ್ಧರಿಸುವ ಅಧಿಕಾರವನ್ನು ಕಿತ್ತುಕೊಳ್ಳಬಾರದು. ಆದ್ದರಿಂದ, ಒಕ್ಕೂಟದ ಅಪರಾಧಗಳಿಗೆ ಸಂಬಂಧಿಸಿದ ಅಧಿಕಾರವು ಒಕ್ಕೂಟದ ರಾಷ್ಟ್ರಪತಿಯವರ ಬಳಿಯಲ್ಲಿ ಇರಬೇಕಾದುದು ಆವಶ್ಯಕವಾಗಿದೆ. ನನ್ನಿಂದ ಪಟ್ಟಿಮಾಡಲಾಗಿರುವ ತಿದ್ದುಪಡಿಯು ನಾನು ಗ್ರಹಿಸಿದ ಒಂದು ವಿಷಯವನ್ನು ಗುರುತಿಸುತ್ತದೆ; ಅದು ಏನೆಂದರೆ, ಆಳ್ವಿಕೆಗಾರ(ರಾಜ)ರ ಪರವಾಗಿ ಸ್ವಲ್ಪಮಟ್ಟಿಗಿನ ಸೂಕ್ಷ್ಮಗ್ರಾಹಿತ್ಯವನ್ನು, ಸೂಕ್ಷ್ಮತೆಯನ್ನು, ಅವರು ಈಗ ಜಾರಿಮಾಡುತ್ತಿರುವ ದಂಡನೆಗಳಿಗೆ ಕ್ಷಮಾದಾನ ಹಾಗೂ ಇತರ ವಿಷಯಗಳಲ್ಲಿನ ಅಧಿಕಾರಗಳಲ್ಲಿ ಭಾಗಿಯಾಗಲು ಅವರು ಬಯಸದೇ ಇರಬಹುದಾಗಿದ್ದರೂ

ಇದು ತೋರಿಸುತ್ತದೆ ಮತ್ತು ಮುಂದಿನ ಸೂಕ್ಷ್ಮಗ್ರಾಹಿತ್ವ ಏನೆಂದರೆ, ಒಂದು ವೇಳೆ ನೀವು ಆ ವಲಯದಲ್ಲಿನ ಯಾವುದೇ ಭಾಗದಲ್ಲಿ, ಹೊರಗಿನ ಅಧಿಕಾರದಲ್ಲಿ, ಏಕಾಭಿಪ್ರಾಯದ ಅಧಿಕಾರವನ್ನು ನೀಡಿದರೆ ಅದು, ರಾಜ್ಯದ ಆಳ್ವಿಕೆಗಾರ(ರಾಜ)ರು ಈ ಅಧಿಕಾರವನ್ನು ಬಳಸಲು ಆಯ್ಕೆ ಮಾಡಬಹುದಾದ ವಿಧಾನ ಮತ್ತು ಒಕ್ಕೂಟದ ರಾಷ್ಟ್ರಪತಿಯವರು ಬಳಸಲು ಆಯ್ಕೆಮಾಡಲು ಬಳಸಬಹುದಾದ ವಿಧಾನದ ನಡುವೆ, ನಿರ್ದಿಷ್ಟ ಪ್ರಮಾಣದ ಘರ್ಷಣೆ ಮತ್ತು ತಿಕ್ಕಾಟಕ್ಕೆ ದಾರಿ ಮಾಡಿಕೊಡುತ್ತದೆ.

ಆದ್ದರಿಂದ, ನಾನು ಪ್ರಭಾವಕ್ಕೊಳಗಾದ ಅಂಶವೇನೆಂದರೆ, ಒಂದು ವೇಳೆ ಸಾಧ್ಯವಾದರೆ, ಈ ಘರ್ಷಣೆಯ ಅವಕಾಶಗಳನ್ನು ತಪ್ಪಿಸಬೇಕು ಮತ್ತು ಆದ್ದರಿಂದ ನಾನು ಈ ತಿದ್ದುಪಡಿಯಲ್ಲಿ ಅಪರಾಧಗಳನ್ನು ಎರಡು ವಿವಿಧ ಪ್ರಕಾರಗಳಾಗಿ ವಿಭಾಗಿಸಿದ್ದೇನೆ; ಒಂದು ವಿಭಾಗದಲ್ಲಿ, ಒಕ್ಕೂಟದ ಕಾನೂನುಗಳಿಗೆ ಸಂಬಂಧಿಸಿದ ಅಪರಾಧಗಳಿಗೆ ಕ್ಷಮಾದಾನ ನೀಡುವ ಅಧಿಕಾರವನ್ನು ಒಕ್ಕೂಟದ ರಾಷ್ಟ್ರಪತಿಯವರು ಮಾತ್ರ ಹೊಂದಿರುತ್ತಾರೆ ಮತ್ತು ಇನ್ನೊಂದು ವಿಭಾಗದಲ್ಲಿ, ರಾಜ್ಯದ ಆಳ್ವಿಕೆಗಾರ(ರಾಜ)ರು ಅಥವಾ ಪ್ರಾಂತ್ಯದ ರಾಜ್ಯಪಾಲರು ಕ್ಷಮಾದಾನವನ್ನು ನೀಡುವ ಅಧಿಕಾರವನ್ನು ಹೊಂದಿರುತ್ತಾರೆ. ಈಗ, ಒಂದು ವೇಳೆ ಇದರ ಅರ್ಥ, ರಾಜ್ಯದ ಆಳ್ವಿಕೆಗಾರ(ರಾಜ)ರು ಹೊಂದಿರುವ ಕ್ಷಮಾದಾನದ ಅಧಿಕಾರವನ್ನು ಮೊಟಕುಗೊಳಿಸುವುದು ಎಂದಾದರೆ, ಇದರ ಅರ್ಥ ಪ್ರಾಂತೀಯ ಸರ್ಕಾರವು ಅಪರಾಧ ಕಾರ್ಯವಿಧಾನ ಕಾನೂನಿನ ಅಡಿಯಲ್ಲಿ ಈಗ ಹೊಂದುತ್ತಿರುವ ಕ್ಷಮಾದಾನ ನೀಡಿಕೆಯ ಅಧಿಕಾರವನ್ನು ಮೊಟಕುಗೊಳಿಸುವುದೂ ಕೂಡ ಆಗಿರುತ್ತದೆ. ಆದ್ದರಿಂದ, ಈ ಅಧಿಕಾರಕ್ಕೆ ಸಂಬಂಧಿಸಿದಂತೆ ಪ್ರಾಂತ್ಯಗಳನ್ನು ಮತ್ತು ರಾಜ್ಯಗಳನ್ನು ಈ ತಿದ್ದುಪಡಿಯು ಒಂದೇ ಸ್ಥಾನದಲ್ಲಿ ನೋಡಲು ಬಯಸುತ್ತದೆ. ಈ ಅಧಿಕಾರವನ್ನು ರಾಷ್ಟ್ರಪತಿಯವರ ಬಳಿಯಲ್ಲಿ ಇಡುವುದು ಆವಶ್ಯಕವಾಗಿದೆ; ಏಕೆಂದರೆ, ನಾವು ಒಕ್ಕೂಟವನ್ನು ರಚಿಸುತ್ತಿದ್ದೇವೆ ಮತ್ತು ಒಕ್ಕೂಟದ ರಾಷ್ಟ್ರಪತಿಯವರಿಂದ ಈ ಕ್ಷಮಾದಾನದ ಅಧಿಕಾರವನ್ನು ನಾವು ಹೊರತಾಗಿಸುವುದು ಸಾಧ್ಯವಿಲ್ಲ.

ಈಗ, ಮಾನ್ಯರೆ, ಗವರ್ನರ್ ಜನರಲ್ ಅವರು ಏಕಾಭಿಪ್ರಾಯದ ಮಾದರಿಯಲ್ಲಿ ಪ್ರಾಂತೀಯ ಸರ್ಕಾರದ ಅಭಿಪ್ರಾಯವನ್ನು ಪಡೆದು, ಅದರಲ್ಲೂ ಮರಣದಂಡನೆಯ ವಿಷಯದಲ್ಲಿ ಪ್ರಯೋಗಿಸಬಹುದಾದ, ಒಕ್ಕೂಟದ ಕಾನೂನಿಗೆ ವಿರುದ್ಧವಾದ ಎಲ್ಲ ಅಪರಾಧಗಳಲ್ಲಿ ಕ್ಷಮಾದಾನ ನೀಡುವ ಅಧಿಕಾರವನ್ನು ರಾಷ್ಟ್ರಪತಿಯವರ ಬಳಿಯಲ್ಲಿ ಏಕೆ ಇಡಬೇಕು ಎಂದು ನೀವು ನನ್ನನ್ನು ಪ್ರಶ್ನಿಸಬಹುದು. ಒಳ್ಳೆಯದು, ಆ ಪ್ರಶ್ನೆಗೆ ಉತ್ತರ ಬಹಳ ಸರಳವಾಗಿದೆ. ನಾವು ಹೊಸ ಸಂವಿಧಾನವನ್ನು ರಚಿಸುತ್ತಿದ್ದೇವೆ ಮತ್ತು ಈಗ ಏನಿದೆಯೋ ಅದಕ್ಕೇ ಅಂಟಿಕೊಳ್ಳಬೇಕಾದ ಆವಶ್ಯಕತೆಯಿಲ್ಲ. ನೂತನ ಸಂವಿಧಾನವನ್ನು ರಚಿಸುವಾಗ ನಮಗೆ ಮಾರ್ಗದರ್ಶನ ನೀಡುವುದಕ್ಕಾಗಿ ನಾವು ಕೆಲವು ನಿರ್ದಿಷ್ಟ ಮೂಲತತ್ತ್ವಗಳನ್ನು ಹೊಂದಿದ್ದೇವೆ.

ಒಂದು ವೇಳೆ ಈ ಸಂವಿಧಾನದ ಅಡಿಯಲ್ಲಿ, ಔಪಚಾರಿಕವಾಗಿ ರಾಜ್ಯಗಳಿಗೆ ಸೇರಿದ ಕೆಲವು ನಿರ್ದಿಷ್ಟ ಅಧಿಕಾರಗಳನ್ನು ಕೇಂದ್ರಕ್ಕೆ ವಹಿಸುವುದಾದರೆ, ಆ ವಿಷಯಗಳ ಆಡಳಿತಕ್ಕೆ ಸಂಬಂಧಪಟ್ಟ ಎಲ್ಲ ಅಧೀನ ಅಧಿಕಾರಗಳನ್ನೂ ಕೇಂದ್ರಕ್ಕೆ ವಹಿಸುವುದು ಸಮಂಜಸವಾಗಿದೆ ಮತ್ತು ಒಂದು ವೇಳೆ ಸಾಂದರ್ಭಿಕವಾಗಿ ಪ್ರಾಂತ್ಯಗಳಲ್ಲಿನ ಪ್ರಸ್ತುತದ ಅಭ್ಯಾಸಗಳಲ್ಲಿ ಮಧ್ಯಪ್ರವೇಶಿಸುವಂತಾದರೆ, ಈ ಮೊಟಕುಗೊಳಿಸುವಿಕೆಯನ್ನು ಎದುರಿಸಲು ನಾವು ಸ್ವಲ್ಪ ಸಿದ್ಧರಾಗಿರಬೇಕು. ನಿಜವಾಗಿಯೂ ಅದುವೇ ನಾನು ಸೂಚನೆ ನೀಡಿರುವ ತಿದ್ದುಪಡಿಯ ಹಿಂದಿರುವುದಾಗಿದೆ.

ಈಗ, ನಾನು ಮುಂದುವರಿಯುವಾಗ, ಈ ತಿದ್ದುಪಡಿಯ ಕೊನೆಯಲ್ಲಿ ನಾನು ಉಲ್ಲೇಖಿಸಬೇಕಾದ ಎರಡು ಅಥವಾ ಮೂರು ವಿಷಯಗಳಿವೆ. ಇದು, ಸೈನಿಕ ನ್ಯಾಯಾಲಯಗಳಲ್ಲಿ ನೀಡಲಾದ ಎಲ್ಲ ಅಪರಾಧಗಳ ದಂಡನೆಗಳಿಗೆ ಕ್ಷಮಾದಾನ ನೀಡುವ ಅಧಿಕಾರವನ್ನು ರಾಷ್ಟ್ರಪತಿಯವರಿಗೆ ನೀಡುತ್ತದೆ. ಸೈನಿಕ ನ್ಯಾಯಾಲಯಗಳು ಭಾರತೀಯ ಸೇನಾ ಅಧಿನಿಯಮದ ಅಡಿಯಲ್ಲಿ ರಚನೆಯಾಗಿವೆ ಮತ್ತು ಭಾರತೀಯ ಸೇನೆಯು ಕೇಂದ್ರ

ಸರ್ಕಾರದ ಹಿಡಿತದ ಅಡಿಯಲ್ಲಿರುತ್ತದೆ. ಇಂತಹ ಸೈನಿಕ ನ್ಯಾಯಾಲಯದಿಂದ ದಂಡನೆಗೊಳಗಾದ ಭಾರತೀಯ ಸೇನೆಯ ಯಾವುದೇ ವ್ಯಕ್ತಿಯು ಕ್ಷಮಾದಾನ, ಶಿಕ್ಷೆಯ ಬದಲಾವಣೆಗಳು ಅಥವಾ ಅಂತಹುದೇ ರಿಯಾಯಿತಿಗಳಿಗಾಗಿ ಒಕ್ಕೂಟದ ರಾಷ್ಟ್ರಪತಿಯವರನ್ನು ಮಾತ್ರ ನೋಡಬಹುದಾಗಿದೆ.

ನಾನು ಉಲ್ಲೇಖಿಸಲೇಬೇಕಾದ ಎರಡನೇ ವಿಷಯವೇನೆಂದರೆ, ಕರಡಿನ ಕೊನೆಯಲ್ಲಿರುವ ನಿಬಂಧನೆ. ಇದನ್ನು ಭಾರತ ಸರ್ಕಾರ ಅಧಿನಿಯಮ ೧೯೩೫ರ ಪ್ರಕರಣ ೨೯೫ರಿಂದ ತೆಗೆದುಕೊಳ್ಳಲಾಗಿದೆ. ಇದು ಏನು ಹೇಳುತ್ತದೆಂದರೆ, "ಸೈನಿಕ ನ್ಯಾಯಾಲಯದಲ್ಲಿ ವಿಧಿಸಲಾದ ದಂಡನೆಯನ್ನು ರದ್ದುಮಾಡುವ, ಮನ್ನಿಸುವ ಅಥವಾ  ಬದಲಿಸುವುದಕ್ಕೆ ಸಂಬಂಧಪಟ್ಟಂತೆ ಭಾರತ ಸರ್ಕಾರ ಅಧಿನಿಯಮದಲ್ಲಿ ಸಾರ್ವಭೌಮ ಶಕ್ತಿಗಾಗಿ ಸೇರಿಸಲಾದ ಅಭಿಪ್ರಾಯದಂತೆ, ಒಕ್ಕೂಟದ ಸಶಸ್ತ್ರ ಪಡೆಯ ಯಾವುದೇ ಅಧಿಕಾರಿಯ ಯಾವುದೇ ಅಧಿಕಾರದ ಮೇಲೆ ಈ ಉಪಖಂಡವು ಪರಿಣಾಮ ಬೀರುವುದಿಲ್ಲ." ಭಾರತೀಯ ಸೈನಿಕ ಅಧಿನಿಯಮದಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಭಾರತೀಯ ಸೇನೆಯ ನಿರ್ದಿಷ್ಟ ಅಧಿಕಾರಿಗಳಿಗೆ, ಶಿಕ್ಷೆಗಳನ್ನು ಮನ್ನಿಸುವ ಅಧಿಕಾರವನ್ನು ನೀಡಲಾಗಿದೆ ಮತ್ತು ಈ ಅಧಿಕಾರಗಳು ಈ ನಿಬಂಧನೆಯಿಂದ ರಕ್ಷಿಸಲ್ಪಟ್ಟಿವೆ.

ನನಗನ್ನಿಸುತ್ತದೆ, ಮಾನ್ಯರೆ, ಈ ನಿರ್ದಿಷ್ಟ ತಿದ್ದುಪಡಿಯು ಸಂಪೂರ್ಣವಾಗಿ ಯಾವುದೇ ಒಕ್ಕೂಟದ ಸಂವಿಧಾನದ ರಚನೆಯಲ್ಲಿನ ಮೂಲತತ್ತ್ವಗಳಿಗೆ ಪೂರ್ತಿಯಾಗಿ ಅನುಗುಣವಾಗಿದೆ ಮತ್ತು ಈ ತಿದ್ದುಪಡಿಯಲ್ಲಿ ಅಳವಡಿಸಲಾಗಿರುವ, ರಾಜ್ಯದ ಆಡಳಿತಗಾರ(ರಾಜ)ರ ಮತ್ತು ಪ್ರಾಂತ್ಯಗಳ ರಾಜ್ಯಪಾಲರುಗಳ ಅಧಿಕಾರಗಳ ಮೊಟಕುಗೊಳಿಸುವಿಕೆಯು ಕೇವಲ ಯಾವುದೇ ಒಕ್ಕೂಟದ ಸಂವಿಧಾನದಲ್ಲಿ ಸಹಜವಾಗಿ ನಿರೀಕ್ಷಿಸಲೇಬೇಕಾದ ವಿಷಯವಾಗಿದೆ. ಮಾನ್ಯರೆ, ನಾನು ಈ ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ನಾನು ಮಂಡಿಸಲು ಅನುಮತಿ ಕೋರುತ್ತೇನೆ :

"ಕರಡು ತಿದ್ದುಪಡಿಗೊಳಗಾದಂತೆ ಉಪಖಂಡ (೨) (ಬಿ)ಯಲ್ಲಿ, ಕೊನೆಯಲ್ಲಿ, ಈ ಕೆಳಗಿನದು ಸೇರ್ಪಡೆಯಾಗಬಹುದು."

ನಾನು ಸದಸ್ಯರಿಗೆ ವಿತರಿಸಲಾದ ಕರಡು ತಿದ್ದುಪಡಿಯನ್ನು ಉಲ್ಲೇಖಿಸುತ್ತಿದ್ದೇನೆ ಮತ್ತು ಇದು ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಗೆ ತಿದ್ದುಪಡಿಯಾಗಿದೆ. ಈ ತಿದ್ದುಪಡಿಯು, ಯಾವುದೇ ಪ್ರಾಂತ್ಯದಲ್ಲಿ ವಿಧಿಸಲಾದ ಮರಣದಂಡನೆಗೆ ಕ್ಷಮಾದಾನ ನೀಡುವ ಅಧಿಕಾರವನ್ನು ರಾಷ್ಟ್ರಪತಿಯವರಿಗೆ ಸೇರಿಸುವುದನ್ನು ಕುರಿತದ್ದಾಗಿದೆ.  ನಾನು ನನ್ನ ತಿದ್ದುಪಡಿಯ ಪಠ್ಯವನ್ನು ಓದುತ್ತೇನೆ :

"ಪ್ರಾಂತ್ಯಗಳಲ್ಲಿ ಎಲ್ಲಿಯಾದರೂ ಯಾವುದೇ ವ್ಯಕ್ತಿಯು ಮರಣ ದಂಡನೆಗೆ ಗುರಿಯಾದರೆ, ಅದನ್ನು (ಶಿಕ್ಷೆಯನ್ನು) ರದ್ದುಪಡಿಸುವ, ಮನ್ನಿಸುವ ಅಥವಾ ಬದಲಿಸುವ ಅಧಿಕಾರವನ್ನು ಪ್ರಾಂತ್ಯಗಳ ರಾಜ್ಯಪಾಲರು ಹೊಂದಿರುವಂತೆ, ರಾಷ್ಟ್ರಪತಿಯವರು  ಹೊಂದಿರುತ್ತಾರೆ."

ಮಾನ್ಯರೆ, ಪ್ರಾಂತ್ಯಗಳಲ್ಲಿ ವಿಧಿಸಲಾದ ಮರಣದಂಡನೆ ಪ್ರಕರಣಗಳಲ್ಲಿ ಕ್ಷಮಾದಾನ ನೀಡುವ ಅಧಿಕಾರಕ್ಕೆ ನಾನು ಇದನ್ನು ಸೀಮಿತಗೊಳಿಸುತ್ತಿದ್ದೇನೆ. ರಾಜ್ಯಗಳಲ್ಲಿ ವಿಧಿಸಲಾದ ಮರಣದಂಡನೆ ಪ್ರಕರಣಗಳಿಗೂ ಈ ಅಧಿಕಾರವನ್ನು ವಿಸ್ತರಿಸಿದರೆ ನಾನು ಸಂತೋಷಪಡುತ್ತೇನೆ. ಮರಣದಂಡನೆಗಳು ವಿಶ್ವದ ಅನೇಕ ರಾಷ್ಟ್ರಗಳಲ್ಲಿ ನಿರ್ಮೂಲನೆಯಾಗುತ್ತಿವೆ. ನಾರ್ವೆಯಲ್ಲಿ, ಮರಣ ಶಿಕ್ಷೆಯನ್ನು ನಿಲ್ಲಿಸಲಾಗಿದೆ. ಬಹುಕಾಲದ ಹಿಂದೆ ನಾವು ರಕ್ತಪಾತದ ಬಗ್ಗೆ ಕೇಳಿದ ರಷ್ಯಾದಂತಹ ದೇಶದಲ್ಲಿಯೂ ಕೂಡ ಮರಣದಂಡನೆಯನ್ನು ನಿರ್ಮೂಲನೆ ಮಾಡಲಾಗಿದೆ. ವಿಶ್ವದ ಅನೇಕ ಮುಂದುವರಿದ ರಾಷ್ಟ್ರಗಳು ಮರಣದಂಡನೆಯನ್ನು ರದ್ದುಗೊಳಿಸಿವೆ. ಪ್ರಸ್ತುತ ಅಸ್ತಿತ್ವದಲ್ಲಿರುವ ಭಾರತ ಸರ್ಕಾರ ಅಧಿನಿಯಮದ ಅಡಿಯಲ್ಲಿ, ಎಲ್ಲ ಮರಣದಂಡನೆ ಪ್ರಕರಣಗಳಲ್ಲಿ ಕ್ಷಮಾದಾನ ನೀಡುವ ಅಧಿಕಾರವನ್ನು ಗವರ್ನರ್ ಜನರಲ್ ಅವರು ರಾಜ್ಯಪಾಲರ ಜೊತೆ ಏಕಾಭಿಪ್ರಾಯದಲ್ಲಿ ಹೊಂದಿದ್ದಾರೆ. ಇತರ ಪ್ರಕರಣಗಳಲ್ಲಿ, ಎಲ್ಲ ಪ್ರಾಂತ್ಯಗಳ ರಾಜ್ಯಪಾಲರು ಯಾವುದೇ ವಿಧಾನದಲ್ಲಿ ಮನ್ನಿಸುವ, ಶಿಕ್ಷೆಯನ್ನು

ತಡೆಗೊಳಿಸುವ ಅಥವಾ ಕ್ಷಮಾದಾನ ನೀಡುವ ಪ್ರತ್ಯೇಕ ಅಧಿಕಾರವನ್ನು ಸಾಮಾನ್ಯ ಅಪರಾಧ ಕಾನೂನಿನ ಅಡಿಯಲ್ಲಿ ಹೊಂದಿರುತ್ತಾರೆ. ಗವರ್ನರ್ ಜನರಲ್ ಅವರು ಮರಣದಂಡನೆ ಪ್ರಕರಣಗಳಲ್ಲಿ ಮಾತ್ರ ಮಧ್ಯೆ ಪ್ರವೇಶಿಸಬಹುದಾಗಿದೆ. ೧೯೩೫ರ ಅಧಿನಿಯಮ ಅಂಗೀಕಾರಗೊಳ್ಳುವುದಕ್ಕೆ ಮೊದಲು, ರಾಜ್ಯಪಾಲರ ಹಾಗೆ ಎಲ್ಲ ರೀತಿಯ ಶಿಕ್ಷೆಗಳ ಪ್ರಕರಣಗಳಲ್ಲಿ ಕ್ಷಮಾದಾನ ನೀಡುವ ಅಧಿಕಾರವನ್ನು ಗವರ್ನರ್ ಜನರಲ್ ಅವರು ಹೊಂದಿದ್ದರು. ಆದರೆ, ೧೯೩೫ರ ಅಧಿನಿಯಮದ ಅನಂತರ, ಪ್ರಾಂತೀಯ ಸ್ವಾಯತ್ತತೆಯನ್ನು ಸಾಧಿಸುವುದಕ್ಕಾಗಿ, ಗವರ್ನರ್ ಜನರಲ್ ಅವರ ಅಧಿಕಾರ ವ್ಯಾಪ್ತಿಯನ್ನು ಏಕಾಭಿಪ್ರಾಯದ ಕಾನೂನು ಪರಿಧಿಗೆ ಒಳಪಡಿಸಿದ್ದರಿಂದ, ಮರಣದಂಡನೆಯನ್ನು ಹೊರತುಪಡಿಸಿ ಮತ್ತೆಲ್ಲ ಪ್ರಕರಣಗಳಲ್ಲಿ ಕ್ಷಮದಾನ ನೀಡುವ ಅಧಿಕಾರವನ್ನು ಅವರಿಂದ ಹಿಂದಕ್ಕೆ ಪಡೆದುಕೊಳ್ಳಲಾಯಿತು. ಅದೊಂದನ್ನು ಮಾತ್ರ ಕಾಯ್ದಿರಿಸಲಾಯಿತು. ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರಿಂದ ಇದೀಗ ಸದನದ ಮುಂದೆ ಮಂಡಿಸಲಾಗಿರುವ ಕರಡು ತಿದ್ದುಪಡಿಯ ಅಡಿಯಲ್ಲಿ, ಸಂಪೂರ್ಣವಾಗಿ ಒಕ್ಕೂಟದ ಕ್ಷಮತೆಯಲ್ಲಿ ಬರುವ ವಿಷಯಗಳನ್ನು ಹೊರತುಪಡಿಸಿ, ಅಂದರೆ, ಎಲ್ಲೆಲ್ಲಿ ಒಕ್ಕೂಟದ ಶಾಸನಸಭೆಯು ಕಾನೂನನ್ನು ಮಾಡಬಹುದೋ ಆ ವಿಷಯಗಳನ್ನು ಹೊರತುಪಡಿಸಿ, ಬೇರೆಲ್ಲಿಯೂ ರಾಷ್ಟ್ರಪತಿಯವರಿಗೆ ಕ್ಷಮಾದಾನದ ಅಧಿಕಾರವನ್ನು ನೀಡಲಾಗಿಲ್ಲ. ಈ ವಿಷಯಗಳಲ್ಲಿ ಮಾತ್ರ ರಾಷ್ಟ್ರಪತಿಯವರು ಕ್ಷಮಾದಾನ ನೀಡುವ ಅಧಿಕಾರವನ್ನು ಹೊಂದಿರುತ್ತಾರೆ. ಇದು, ೧೯೩೫ರ ಅಧಿನಿಯಮದ ಮೇಲಿನ ಸುಧಾರಣೆಯಾಗಿದೆ ಎಂಬುದರಲ್ಲಿ ಅನುಮಾನವೇ ಇಲ್ಲ. ಆದರೆ, ಮರಣದಂಡನೆಯ ಪ್ರಕರಣಗಳಲ್ಲಿ, ಕ್ಷಮಾದಾನವನ್ನು ನೀಡುವ ವಿಷಯದಲ್ಲಿ, ಎಲ್ಲೆಲ್ಲಿ ಶಿಕ್ಷೆಯನ್ನು ನಿಡಲಾಗಿದೆಯೋ ಅಲ್ಲಿ, ಕ್ಷಮಾದಾನ ನೀಡುವ ಅಧಿಕಾರವನ್ನು ಹಿಂದಕ್ಕೆ ಪಡೆಯಲಾಗಿದೆ. ಜೀವಾವಧಿ ಶಿಕ್ಷೆಯು ಬಹಳ ಗಂಭಿರವಾದುದು ಮತ್ತು ಆದ್ದರಿಂದ, ಕ್ಷಮಾದಾನವನ್ನು ನೀಡಬೇಕಾದ ಇತರ ಯಾವುದಾದರೂ ಪ್ರಕರಣಗಳು ಇವೆಯೇ ಎಂದು ಪರಿಗಣಿಸಲು ಇನ್ನೊಂದು ಸಂಸ್ಥೆ ಇರಬೇಕು. ಒಂದು ವೇಳೆ ಕೆಲವು ನಿರ್ದಿಷ್ಟ ವಿಷಯಗಳಲ್ಲಿ ರಾಷ್ಟ್ರಪತಿಯವರು ಅಧಿಕಾರಿಯಾಗಿದ್ದರೆ ಇಲ್ಲಿ ಸ್ವಲ್ಪ ಅನುಮಾನ ಇರಬಹುದು. ರಾಷ್ಟ್ರಪತಿಯವರು ಹೊಂದಿರುವ, ಮೇಲ್ಮನವಿ ವಿಚಾರಿಸುವ ಕಾನೂನು ಅಧಿಕಾರವ್ಯಾಪ್ತಿಯ ಬಗ್ಗೆ ಯಾವುದೇ ಪ್ರಶ್ನೆಯಿಲ್ಲ. ಅವರು ಏಕಾಭಿಪ್ರಾಯದ ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದಾರೆ. ರಾಜ್ಯಪಾಲರು ಸ್ವತಃ ಕ್ಷಮಾದಾನವನ್ನು ನೀಡುವ ಅಧಿಕಾರವನ್ನು ಹೊಂದಿದ್ದಾರೆ. ಒಂದು ವೇಳೆ ರಾಜ್ಯಪಾಲರು ಕ್ಷಮಾದಾನ ನೀಡಿದ್ದು ರಾಷ್ಟ್ರಪತಿಯವರಿಗೆ ಇಷ್ಟವಾಗದಿದ್ದರೆ, ಆ ಕ್ಷಮಾದಾನವನ್ನು ತೆಗೆದುಹಾಕಿ, ರದ್ದುಪಡಿಸಿ, ಆ ಅಪರಾಧಿಗೆ ಶಿಕ್ಷೆ ವಿಧಿಸುವ ಅಧಿಕಾರವು ರಾಷ್ಟ್ರಪತಿಯವರಿಗೆ ಇರುವುದಿಲ್ಲ. ಯಾವುದೇ ವಲಯದಲ್ಲಿ ಉಳಿದಿರಬಹುದಾದ ಅನುಮಾನವನ್ನು ಹೋಗಲಾಡಿಸುವುದಕ್ಕೆ ಮತ್ತು ಎಚ್ಚರಿಕೆ ನೀಡುವುದಕ್ಕೆ ನಾನು ಪ್ರಯತ್ನಿಸುತ್ತೇನೆ. ಯಾವುದೇ ಅಪರಾಧ ಪ್ರಕರಣಗಳಲ್ಲಿ, ಯಾವುದೇ ವ್ಯಕ್ತಿಯು ರಾಜ್ಯಪಾಲರಿಂದ ಕ್ಷಮಾದಾನವನ್ನು ಪಡೆದರೆ, ಆತ ಶಿಕ್ಷೆಯಿಂದ ಮುಕ್ತನಾಗಿ ಹೋಗುತ್ತಾನೆ. ಒಂದು ವೇಳೆ ಮರಣದಂಡನೆಯ ಪ್ರಕರಣಗಳಲ್ಲಿ ಒಂದು ವೇಳೆ ರಾಜ್ಯಪಾಲರಿಂದ ಕ್ಷಮಾದಾನವು ದೊರಕದೇ ಹೋದರೆ, ಇದರಲ್ಲಿ ಮಧ್ಯೆ ಪ್ರವೇಶಮಾಡುವ ಮತ್ತು ಕ್ಷಮಾದಾನವನ್ನು ನೀಡುವ ಅಧಿಕಾರವನ್ನು ಹೊಂದಿರುವ ರಾಷ್ಟ್ರಪತಿಯವರ ಬಳಿಗೆ ಆತನು ಹೋಗುವ ಅವಕಾಶವನ್ನು ಹೊಂದಿರುತ್ತಾನೆ. ಗವರ್ನರ್ ಜನರಲ್ ಅವರು ಪ್ರಸ್ತುತ ಬಳಸುತ್ತಿರುವ ಈ ಅಧಿಕಾರವನ್ನು ಸರ್ ಗೋಪಾಲಸ್ವಾಮಿಯವರ ತಿದ್ದುಪಡಿಯಲ್ಲಿ ಅಳವಡಿಸಲು ಪ್ರಯತ್ನಿಸುವ ನನ್ನ ಈ ತಿದ್ದುಪಡಿಯನ್ನು ಈ ಸದನವು ಅಂಗೀಕರಿಸುತ್ತದೆಂದು ನಾನು ಭಾವಿಸುತ್ತೇನೆ.

ಮಾನ್ಯರೆ, ಒಕ್ಕೂಟದ ಕಾನೂನಿಗೆ ವಿರುದ್ಧವಾದ ವಿಷಯಗಳಲ್ಲಿನ ಅಪರಾಧ ಪ್ರಕರಣಗಳಲ್ಲಿ ಕ್ಷಮಾದಾನ ನೀಡುವ ಪ್ರತ್ಯೇಕ ಅಧಿಕಾರಕ್ಕೆ ಸಂಬಂಧಪಟ್ಟಂತೆ ರಾಷ್ಟ್ರಪತಿಯವರಿಗೆ ನೀಡಲಾದ ಇತರ ಅಧಿಕಾರಗಳನ್ನು ಕುರಿತಾಗಿ, ರಾಜ್ಯಗಳ ಬಳಿ ನಾನು ಕೇವಲ ಮನವಿ ಮಾಡುವುದೇನೆಂದರೆ, ಅವು ಒಕ್ಕೂಟದ ಕಾನೂನಿಗೆ ವಿರುದ್ಧವಾದ ಅಪರಾಧಗಳಾಗಿರುವುದರಿಂದ, ರಾಷ್ಟ್ರಪತಿಯವರ ಈ ಅಧಿಕಾರವನ್ನು ಹಿಂದಕ್ಕೆ ಪಡೆಯಲು

ಪ್ರಯತ್ನಿಸಬಾರದು. ತಾವು ತೆರೆದ ನೇತ್ರಗಳಿಂದ ಮುಂದೆ ಬರುವುದಾಗಿ ರಾಜ್ಯಗಳು ಪ್ರಕಟಿಸಿವೆ ಮತ್ತು ಅವು ರಕ್ಷಣೆ, ವಿದೇಶಾಂಗ ವ್ಯವಹಾರ ಹಾಗೂ ಸಂವಹನ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕೇಂದ್ರದೊಂದಿಗೆ ಸಾಗಲು ಸಮ್ಮತಿಸಿವೆ. ಈ ಇಲಾಖೆಗಳು ಮುಂದುವರಿಯಲು ಇತರ ತೆರಿಗೆ ವಿಧಾನಗಳೂ ಜೊತೆಗೂಡಲಿವೆ. ಒಂದು ವೇಳೆ ಈ ವಿಭಾಗ (ಇಲಾಖೆ)ಗಳ ವಿರುದ್ಧ ಅಥವಾ ಈ ಕಾನೂನುಗಳ ವಿರುದ್ಧ ಅಪರಾಧಗಳು ನಡೆದರೆ, ಸಹಜವಾಗಿ ರಾಷ್ಟ್ರಪತಿಯವರು ತಮ್ಮ ಅಧಿಕಾರವನ್ನು ಬಳಸುವುದಕ್ಕೆ ಅವಕಾಶ ಇರುತ್ತದೆ. ಹಾಗಾಗಿ ರಾಜ್ಯಗಳ ಆಡಳಿತಗಾರ(ರಾಜ)ರು ಕ್ಷಮಾದಾನ ನೀಡುವ ತಮ್ಮ ಅಧಿಕಾರವನ್ನು ಕಿತ್ತುಕೊಳ್ಳಲಾಯಿತು ಎಂದು ಭಾವಿಸುವಂತಿಲ್ಲ. ರಾಜ್ಯಗಳ ಆಡಳಿತಗಾರ(ರಾಜ)ರು ತಮ್ಮ ಸಮ್ಮತಿ ನೀಡುವ ಮೂಲಕ ತಮ್ಮ ರಾಜ್ಯಕ್ಕೆ ಸಂಬಂಧಿಸಿದ ಮೂರು ಒಕ್ಕೂಟದ ವಿಷಯಗಳಲ್ಲಿ ರಾಷ್ಟ್ರಪತಿಯವರು ಮಧ್ಯೆ ಪ್ರವೇಶಮಾಡುವುದಕ್ಕೆ ತಾವೇ ಒಪ್ಪಿಗೆ ಸೂಚಿಸಿದಂತಾಗಿದೆ. ಆದ್ದರಿಂದ ತಕರಾರು ತೆಗೆಯುವುದರಲ್ಲಿ ಯಾವುದೇ ಅರ್ಥವಿಲ್ಲ. ಒಂದು ವೇಳೆ ಇದು ಪ್ರಭುತ್ವ ಪಡೆಯಲೇಬೇಕು ಎಂದಾದರೆ, ಅದು ಒಂದು ಕೈಯಿಂದ ನೀಡಿ ಇನ್ನೊಂದು ಕೈಯಿಂದ ಅದನ್ನೇ ಹಿಂದಕ್ಕೆ ತೆಗೆದುಕೊಂಡಂತೆ (ಕಿತ್ತುಕೊಂಡಂತೆ) ಆಗುತ್ತದೆ. ಒಂದು ವೇಳೆ ರಕ್ಷಣೆಯನ್ನು ಒಕ್ಕೂಟಕ್ಕೆ ಒಪ್ಪಿಸಿದರೆ, ಆ ವಿಷಯದಲ್ಲಿನ ಯಾವುದೇ ರೀತಿಯ ಮಧ್ಯಪ್ರವೇಶ ಅಥವಾ ಅತಿಕ್ರಮಣವು, ರಾಷ್ಟ್ರಪತಿಯವರಿಂದ ಆಕ್ಷೇಪ ವ್ಯಕ್ತವಾದರೆ, ದೂರು ಬಂದರೆ, ಅದು ದಂಡನಾರ್ಹವಾಗುತ್ತದೆ. ಈ ವಿಷಯದಲ್ಲಿ ಘನತೆಯ, ಸ್ವಪ್ರತಿಷ್ಠೆಯ ಪ್ರಶ್ನೆ ಬರುವುದಿಲ್ಲ; ಅದರಲ್ಲೂ ನಿರ್ದಿಷ್ಟವಾಗಿ, ರಾಜ್ಯಗಳ ಜನರೂ ಸಹ ಈ ತಿದ್ದುಪಡಿಯ ಪರವಾಗಿ ಇದ್ದಾರೆ. ಈ ಸದನದಲ್ಲಿ ರಾಜ್ಯಗಳನ್ನು ಪ್ರತಿನಿಧಿಸುವ ಮಂತ್ರಿಗಳ ಬಳಿಯಲ್ಲಿ ನಾನು ಮನವಿ ಮಾಡುವುದೇನೆಂದರೆ, ಒಕ್ಕೂಟದ ವಿಷಯಗಳಿಗೆ ಸಂಬಂಧಪಟ್ಟಂತೆ ಕ್ಷಮಾದಾನದ ಅಧಿಕಾರವನ್ನು ಸಂಪೂರ್ಣವಾಗಿ ಒಕ್ಕೂಟದ ರಾಷ್ಟ್ರಪತಿಯವರಿಗೆ ಬಿಟ್ಟುಕೊಡುವುದನ್ನು ತಡೆಯುವುದಕ್ಕೆ ಯಾವುದೇ ರೀತಿಯ ಪ್ರಯತ್ನಮಾಡಬಾರದು; ಯಾವ ಕಾರಣಕ್ಕಾಗಿ ಎಂದರೆ, ರಕ್ಷಣೆ ಮತ್ತು ಇತರ ವಿಷಯಗಳು ರಾಜ್ಯದ ಆಡಳಿತಗಾರ(ರಾಜ)ರುಗಳಿಂದ ಒಕ್ಕೂಟಕ್ಕೆ ಒಪ್ಪಿಸಲ್ಪಟ್ಟಿವೆ. ಹಾಗಲ್ಲದೇ, ಮಂಜೂರಾತಿಯಿಲ್ಲದಿದ್ದರೆ ಮತ್ತು ಮಂಜೂರಾತಿಯನ್ನು ಒತ್ತಾಯಪಡಿಸದೇ, ಕೇವಲ ಕಾನೂನನ್ನು ಅಂಗೀಕರಿಸುವುದರಿಂದ ಪ್ರಯೋಜನವಾಗಲಾರದು. ಒಂದು ವೇಳೆ ಒಕ್ಕೂಟದ ರಾಷ್ಟ್ರಪತಿಯವರು ಅಥವಾ ಒಕ್ಕೂಟದ ಕಾರ್ಯನಿರ್ವಾಹಕರು, ರಾಜ್ಯಗಳ ಆಡಳಿತಗಾರ(ರಾಜ)ರು ತಾವೇ ಒಪ್ಪಿಸಿದ ಹಕ್ಕಿಗೆ ಸಂಬಂಧಿಸಿದ ಕಾನೂನನ್ನು ಜಾರಿಮಾಡಲು ಪ್ರಯತ್ನಿಸಿದರೆ, ಇಂತಹ ಸಂದರ್ಭದಲ್ಲಿ ರಾಜ್ಯದ ಆಡಳಿತಗಾರ(ರಾಜ)ರು ಮಧ್ಯೆ ಪ್ರವೇಶಿಸಿದರೆ, ಅವರು ರಾಷ್ಟ್ರಪತಿಯವರಿಗೆ ಒಪ್ಪಿಸಿದ ಅಧಿಕಾರಗಳಲ್ಲಿ ಮಧ್ಯಪ್ರವೇಶ ಮಾಡಿದಂತಾಗುತ್ತದೆ. ಈ ವಿಷಯವನ್ನು ದಯವಿಟ್ಟು ಗಮನಿಸಬೇಕು ಮತ್ತು ಈ ದಾರಿಗೆ ಬರಬೇಕು ಮತ್ತು ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಪ್ರಸ್ತಾವಿಸಿದ ಕರಡಿಗೆ ಯಾವುದೇ ತಿದ್ದುಪಡಿಯನ್ನು ತರಬಾರದೆಂದು ನಾನು ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಈ ಎಲ್ಲ ಕಾರಣಗಳಿಂದಾಗಿ ಇದನ್ನು ಪ್ರತಿಷ್ಠೆಯ ವಿಷಯವಾಗಿ ತೆಗೆದುಕೊಳ್ಳಬಾರದೆಂದು ನಾನು ಅವರನ್ನು ಒತ್ತಾಯಿಸುತ್ತೇನೆ. ಅವರು ಒಂದು ನಿರ್ದಿಷ್ಟ ಕ್ರಮವನ್ನು ತೆಗೆದುಕೊಂಡಿದ್ದಾರೆ; ಇದು ರಾಷ್ಟ್ರಪತಿಯವರಿಗೆ ನೀಡಲೇಬೇಕಾದ ಅಧೀನ, ಪೂರಕ ಅಧಿಕಾರವಾಗಿದೆ. ಹಾಗಿಲ್ಲದಿದ್ದರೆ, ಎರಡರ ನಡುವೆ ಘರ್ಷಣೆ ಉಂಟಾಗಬಹುದು ಮತ್ತು ಈ ಹಕ್ಕನ್ನು ಕೇಂದ್ರಕ್ಕೆ ಒಪ್ಪಿಸುವುದು ನಿಷ್ಪ್ರಯೋಜಕವಾಗುತ್ತದೆ.

**ಮಾನ್ಯ ಸಭಾಧ್ಯಕ್ಷರು** : ಮೂಲ ಖಂಡ ಮತ್ತು ತಿದ್ದುಪಡಿಗಳು ಈಗ ಚರ್ಚೆಗೆ ಮುಕ್ತವಾಗಿವೆ. ನಾನು ಗಮನಿಸಿದಂತೆ ಬೇರೆ ಯಾವುದೇ ತಿದ್ದುಪಡಿಗಳಿರುವ ಹಾಗೆ ನಾನು ಭಾವಿಸುವುದಿಲ್ಲ.

**ಶ್ರೀ ಮಹಮ್ಮದ್ ಷರೀಫ್** (ಮೈಸೂರು ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ಈ ಗಹನವಾದ ಅಂಶಕ್ಕೆ ಸಂಬಂಧಿಸಿದಂತೆ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಮತ್ತು ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರ ಪ್ರಶಂಸಾರ್ಹ ಭಾಷಣವನ್ನು ತನ್ಮಯನಾಗಿ ಭಾವಪರವಶತೆಯಿಂದ ಆಲಿಸಿದ್ದೇನೆ.

ಇದು ಯಾವುದೇ ವಿವಾದವಿಲ್ಲದ, ಆದರೆ ಸಂಪೂರ್ಣ ಜಟಿಲತೆ, ಗೊಂದಲಗಳಿಂದ ಕೂಡಿದ ಅಂಶವಾಗಿದೆ. ಇದರ ಗೊಂದಲಮಯ, ಜಟಿಲ ಸ್ವಭಾವವನ್ನು ಪರಿಗಣಿಸಿ, ಈ ಪ್ರಶ್ನೆಯ ಸಾಧಕ–ಬಾಧಕಗಳನ್ನು ಅಧ್ಯಯನ ಮಾಡುವುದಕ್ಕಾಗಿ ನಮಗೆ ಹೆಚ್ಚಿನ ಸಮಯಾವಕಾಶ ನೀಡಬೇಕೆಂದು ನಾನು ಬಯಸಿದ್ದೆ; ಆದರೆ, ಇದು ನಮ್ಮ ಮುಂದೆ ಬಂದುಬಿಟ್ಟಿದೆ ಮತ್ತು ಇದನ್ನು ಕುರಿತಾಗಿ ನಮ್ಮ ಅಭಿಪ್ರಾಯವನ್ನು ನೀವು ಬಯಸಿರುವುದರಿಂದ, ರಾಜ್ಯಗಳ ಪ್ರತಿನಿಧಿಗಳಾಗಿ ಈ ವಿಷಯವನ್ನು ಕುರಿತು ನಮ್ಮ ಅಭಿಪ್ರಾಯ ಏನೆಂಬುದನ್ನು ನಮ್ಮ ಸಾಮರ್ಥ್ಯಕ್ಕನುಗುಣವಾಗಿ ಹೇಳಬೇಕಾದುದು ಆವಶ್ಯಕವಾಗಿದೆ.

ಮಾನ್ಯರೆ, ರಾಷ್ಟ್ರಪತಿಯವರಿಗೆ ಸಂಬಂಧಪಟ್ಟಂತೆ, ಅವರು ಆಡಳಿತದ ಚುಕ್ಕಾಣಿಯ ಸ್ಥಾನದಲ್ಲಿದ್ದಾರೆ ಎಂಬ ಅಂಶದ ಆಧಾರದ ಮೇಲೆ ಹೇಳುವುದಾದರೆ, ಅವರು ಕ್ಷಮಾದಾನದ ಅಧಿಕಾರವನ್ನು ಹೊಂದಿರಬೇಕು ಮತ್ತು ಅಪರಾಧ ಕಾನೂನು ಪರಿಧಿಯ ಹೊರತಾಗಿ ಹುಟ್ಟಿಕೊಳ್ಳುವ ಅಪರಾಧಗಳಲ್ಲಿನ ದಂಡನೆಯನ್ನು ಮುಂದೂಡುವ ಮತ್ತು ಅಂತಹ ಸಂದರ್ಭದಲ್ಲಿ ದಂಡನೆಯನ್ನು ಮನ್ನಿಸುವ ಅಧಿಕಾರವನ್ನು ಹೊಂದಿರಬೇಕು. ಆದರೆ, ನಿಮಗೆ ತಿಳಿಸುವುದೇನೆಂದರೆ, ಮಾನ್ಯರೇ, ಈ ಅಧಿಕಾರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಇದು ಪ್ರಾಂತ್ಯಗಳಿಗೆ ಮಾತ್ರ ಸೀಮಿತಗೊಳ್ಳಬೇಕು. ಒಂದು ವೇಳೆ ಇದನ್ನು ಆಳ್ವಿಕೆಗಾರ(ರಾಜ)ರ ಸಾರ್ವಭೌಮತ್ವಕ್ಕೆ, ಪರಮಾಧಿಕಾರಕ್ಕೆ ಧಕ್ಕೆ ತರುವ ರೀತಿಯಲ್ಲಿ ಮಾಡಿದರೆ, ನಾನು ಹೇಳುತ್ತೇನೆ, ಅಲ್ಲಿ ಖಂಡಿತ ಘರ್ಷಣೆ ಉಂಟಾಗುತ್ತದೆ. ಜನರ ಪರಮಾಧಿಕಾರಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಇದಕ್ಕೆ ಯಾವುದೇ ರೀತಿಯ ತೊಂದರೆ ಉಂಟಾಗಬಾರದೆಂದು ಕಾಂಗ್ರೆಸ್ ಪಕ್ಷವು ಹೇಳಿದೆ. ಘನತೆವೆತ್ತ ವೈಸ್‌ರಾಯ್ ಅವರು ೨೫ರಂದು ನೀಡಿದ ತಮ್ಮ ಹೇಳಿಕೆಯಲ್ಲಿ ಆಳ್ವಿಕೆಗಾರ(ರಾಜ)ರಿಗೆ ಸಂಬಂಧಿಸಿದಂತೆ ಮುಖ್ಯವಾಗಿ ಹೇಳಿದ್ದೇನೆಂದರೆ, ಅವರು ಯಾವುದೇ ಅಪಾಯಕ್ಕೆ ಹೆದರಬೇಕಾಗಿಲ್ಲ. ಇಲ್ಲಿ ವಾದಿಸಲಾಗಿರುವುದು ಏನೆಂದರೆ, ಈ ಅಧಿಕಾರಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಇದು ಕೇವಲ ಒಕ್ಕೂಟದ ವಿಷಯಗಳಿಗೆ ಸೀಮಿತಗೊಳ್ಳುತ್ತದೆ. ನಿನ್ನೆ ನಾವು ಭಾಗ ೬ನ್ನು ಕುರಿತು ಚರ್ಚಿಸಿದ್ದೇವೆ ಮತ್ತು ಅಲ್ಲಿ ಖಂಡ ೧ ಈ ರೀತಿ ಇದೆ :

> "ಒಕ್ಕೂಟದ ಸಂಸತ್ತು ಸಂಪೂರ್ಣವಾಗಿ ಒಕ್ಕೂಟದ ವಿಷಯಗಳಿಗೆ ಶಾಸನವನ್ನು ರೂಪಿಸುವಾಗ ಅದು ಘಟಕ ಸರ್ಕಾರದ ಮೇಲೆ, ಅದು ಪ್ರಾಂತ್ಯವಿರಬಹುದು, ಭಾರತೀಯ ರಾಜ್ಯವಿರಬಹುದು ಅಥವಾ ಇತರ ಪ್ರದೇಶವಿರಬಹುದು ಅಥವಾ ಆ ಸರ್ಕಾರದ ಯಾವುದೇ ಅಧಿಕಾರಿಯ ಮೇಲಿರಬಹುದು, ಆ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ಕಾರ್ಯಾಚರಣೆಯನ್ನು ಒಕ್ಕೂಟ ಸರ್ಕಾರದ ಪರವಾಗಿ ನಡೆಸಬಹುದು."

ಆದ್ದರಿಂದ, ಒಕ್ಕೂಟದ ವಿಷಯಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಅವು ಆಳ್ವಿಕೆಗಾರ(ರಾಜ)ರ ಆಡಳಿತಕ್ಕೊಳಪಡಬಹುದಾಗಿದೆ; ಅಪರಾಧ ಕಾನೂನು ಪರಿಧಿಯಲ್ಲಿ ಕ್ಷಮಾದಾನಮಾಡುವ ಹಕ್ಕನ್ನು, ದಂಡನೆಯನ್ನು ಬದಲಾಯಿಸುವ ಹಕ್ಕನ್ನು ಅವರಿಂದ ಏಕೆ ಹಿಂದಕ್ಕೆ ಪಡೆಯಲಾಗುತ್ತಿದೆ ಎಂಬುದು ನನಗೆ ತೋಚುತ್ತಿಲ್ಲ. ಮೈಸೂರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಮಹಾಪ್ರಭುಗಳಾದ ಮಹಾರಾಜರು ಈ ವಿಶೇಷಾಧಿಕಾರವನ್ನು ಬಹಳ ಅಪರೂಪವಾಗಿ ಬಳಸಿದ್ದಾರೆ. ಪ್ರತಿಯೊಂದನ್ನೂ ಕೂಡ ಉಚ್ಚನ್ಯಾಯಾಲಯಕ್ಕೆ ಬಿಡಲಾಗಿದೆ. ಅವರು ಯಾವತ್ತೂ ಮಧ್ಯೆ ಪ್ರವೇಶಮಾಡುವುದಿಲ್ಲ. ಆದ್ದರಿಂದ, ಈ ಅಧಿಕಾರವು ಅವರ ಬಳಿಯಲ್ಲಿ ಇರುವಂತಾದರೂ ಸಹ, ಇದರ ದುರುಪಯೋಗವಾಗುವ ಸಾಧ್ಯತೆಗಳಿಲ್ಲ. ಈ ದೃಷ್ಟಿಯಿಂದ, ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರಿಂದ ಪ್ರಸ್ತಾವಿಸಲ್ಪಟ್ಟ ತಿದ್ದುಪಡಿಯನ್ನು ಒಪ್ಪಿಕೊಳ್ಳುವ ರೀತಿಯಲ್ಲಿ ನನ್ನ ಮನಸ್ಸನ್ನು ನಾನು ಬದಲಾಯಿಸಿಕೊಳ್ಳಲಾರೆ.

**ಶ್ರೀ ಗೋಪಿಕೃಷ್ಣ ವಿಜಯವರ್ಗೀಯ** (ಗ್ವಾಲಿಯರ್ ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಇಲ್ಲಿಗೆ ಬಂದಿದ್ದೇನೆ. ನಾನೂ ಕೂಡ ರಾಜ್ಯದಿಂದ ಬಂದಿದ್ದೇನೆ ಮತ್ತು ಒಕ್ಕೂಟದಲ್ಲಿ ಸಾರ್ವಭೌಮತ್ವ ಅಥವಾ ಪರಮಾಧಿಕಾರವು ವಿಭಾಗಿಸಲ್ಪಟ್ಟಿವೆ ಮತ್ತು ಕೆಲವು ಪರಮಾಧಿಕಾರವನ್ನು

ಒಕ್ಕೂಟಕ್ಕೂ ಕೂಡ ನೀಡಲಾಗಿದೆ ಎಂದು ನಾನು ಭಾವಿಸುತ್ತೇನೆ. ಆದ್ದರಿಂದ, ಕ್ಷಮಾದಾನದ ಅಧಿಕಾರವನ್ನು ಒಕ್ಕೂಟದ ರಾಷ್ಟ್ರಪತಿಯವರಿಗೆ ನೀಡಿರುವುದು ಔಚಿತ್ಯಪೂರ್ಣವಾದ ವಿಷಯವಾಗಿದ್ದು, ಇದು ಹಾಗೆಯೇ ಉಳಿಯಬೇಕು ಮತ್ತು ರಾಜ್ಯಗಳ ಆಳ್ವಿಕೆಗಾರ(ರಾಜ)ರು ಪರಮಾಧಿಕಾರವನ್ನು ತಮ್ಮ ಕೈಯಲ್ಲಿ ಇಟ್ಟುಕೊಳ್ಳುವುದು ಸೂಕ್ತವೂ ಅಲ್ಲ. ಅವರು ತಮ್ಮ ಬಳಿಯಿದ್ದ ಇತರ ವಿಷಯಗಳಲ್ಲಿನ ಪರಮಾಧಿಕಾರಗಳು ಒಕ್ಕೂಟದ ಬಳಿ ಇರುವುದಕ್ಕೆ ಸಮ್ಮತಿಸಿದಂತೆ, ಈ ಹಕ್ಕನ್ನೂ ಕೂಡ ಸಮರ್ಪಿಸಬೇಕು. ಆದ್ದರಿಂದ ನಾನು ಸಲಹೆ ಮಾಡುವುದೇನೆಂದರೆ, ಶ್ರೀ ಅನಂತಶಯನಮ್ ಅಯ್ಯಂಗಾರ್ ಮತ್ತು ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯು ಅಂಗೀಕಾರವಾಗಬೇಕು.

**ಶ್ರೀ ಕೆ. ಚೆಂಗಲರಾಯ ರೆಡ್ಡಿ :** ಮಾನ್ಯ ಸಭಾಧ್ಯಕ್ಷರೆ, ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ಸ್ಪಷ್ಟವಾದ ಮತ್ತು ಮನದಟ್ಟು ಮಾಡಿಕೊಡುವಂತಹ ಭಾಷಣದ ಅನಂತರ, ಅವರು ಪ್ರಸ್ತುತಪಡಿಸಿದ ಕರಡಿನ ಮೇಲೆ ಯಾವುದೇ ಚರ್ಚೆ ನಡೆಯಲಾರದೆಂದು ನಾನು ಭಾವಿಸಿದ್ದೆ; ಆದರೆ, ನನ್ನ ಗೌರವಾನ್ವಿತ ಸ್ನೇಹಿತರುಗಳಲ್ಲೊಬ್ಬರಾದ ಮೈಸೂರಿನ ಸ್ನೇಹಿತರು ಇದೀಗ ವ್ಯಕ್ತಪಡಿಸಿದ ಅಭಿಪ್ರಾಯದಲ್ಲಿ ನಿರ್ದಿಷ್ಟ ಭಿನ್ನತೆಯನ್ನು ನಾನು ಕಂಡಿದ್ದೇನೆ. ಮೂಲತಃ ಜ್ಞಾಪಕಪತ್ರದ ರೂಪದಲ್ಲಿ ಇದ್ದಾಗ ಈ ಕರಡು ತುಂಬ ವಿಸ್ತಾರವಾದುದಾಗಿತ್ತು. ಇದು ಎಲ್ಲ ಅಪರಾಧಗಳಲ್ಲಿ ಕ್ಷಮಾದಾನ ಹಾಗೂ ಇತರವುಗಳನ್ನು ನೀಡುವ ಅಧಿಕಾರವನ್ನು ವಿಸ್ತರಿಸಿತ್ತು ಮತ್ತು ಒಕ್ಕೂಟದ ರಾಷ್ಟ್ರಪತಿಯವರ ಬಳಿ ವ್ಯಾಪಕ ಅಧಿಕಾರ ಇರುವ ಹಾಗೆ ಮಾಡಿದಂತೆ ಕಂಡುಬಂದಿತ್ತು; ಈ ಕರಡು ಖಂಡವು ಖಂಡಗಳಾದ ೮ ಹಾಗೂ ೯ರಲ್ಲಿ ಓದಲ್ಪಟ್ಟಂತೆ ಕಂಡುಬಂದರೂ ಕೂಡ ವಾಸ್ತವವಾಗಿ ಇದು ವಿಸ್ತಾರವಾದ, ವ್ಯಾಪಕವಾದ ಅಧಿಕಾರವನ್ನು ನೀಡುವುದಿಲ್ಲ ಹಾಗೂ ನಿರ್ದಿಷ್ಟ ಪರಿಸ್ಥಿತಿಗಳಲ್ಲಿ ಇವು ನಿರೀಕ್ಷಣೆಗೆ ಒಳಪಡುತ್ತವೆ ಎಂದು ಭಾವಿಸಿದವರಲ್ಲಿ ನಾನೂ ಸಹ ಒಬ್ಬನಾಗಿದ್ದೇನೆ. ಆದರೆ, ರಾಜ್ಯಗಳ ನಿರ್ದಿಷ್ಟ ಪ್ರತಿನಿಧಿಗಳು, ರಾಷ್ಟ್ರಪತಿಯವರಿಗೆ ವಹಿಸಲಾದ ಕ್ಷಮಾದಾನ ಹಾಗೂ ಅದಕ್ಕೆ ಸಂಬಂಧಿಸಿದ ಇತರ ಅಧಿಕಾರಗಳು ಪ್ರಾಂತ್ಯಗಳಲ್ಲಿ ಸಂಭವಿಸಿದ ಅಪರಾಧಗಳಿಗೆ ಮಾತ್ರ ಸೀಮಿತಗೊಳ್ಳಬೇಕು ಎಂದು ಅಭಿಪ್ರಾಯಪಡುವ ತಿದ್ದುಪಡಿಯನ್ನು ಪಟ್ಟಿ ಮಾಡಿದ್ದಾರೆ. ಒಳ್ಳೆಯದು, ಮಾನ್ಯರೆ, ಇದಕ್ಕೆ ಪ್ರತ್ಯಾಘಾತವಾಗಿ, ವಿರುದ್ಧವಾಗಿ, ಒಂದು ವೇಳೆ ನಾನು ಒಂದು ಶಬ್ದವನ್ನು ಬಳಸಬಹುದಾದರೆ, ಒಕ್ಕೂಟದ ಕಾನೂನಿಗೆ ವಿರುದ್ಧವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಈ ಅಧಿಕಾರವು ರಾಷ್ಟ್ರಪತಿಯವರ ಬಳಿಯಲ್ಲಿ ಇರಬೇಕು ಎಂಬ ತಿದ್ದುಪಡಿಯನ್ನು ನಾನು ಪಟ್ಟಿ ಮಾಡುತ್ತೇನೆ.

ಮಾನ್ಯರೆ, ನಾನು ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರಿಂದ ಮಂಡಿಸಲಾದ ಕರಡನ್ನು ಗಮನಿಸಿದ್ದೇನೆ; ಇದೊಂದು ಸಂಧಾನಮಾಡಿಕೊಳ್ಳುವಂತಹ ರೀತಿಯ ಕರಡಾಗಿದ್ದು, ಸದನದ ಎಲ್ಲ ವರ್ಗವನ್ನೂ ತೃಪ್ತಿಪಡಿಸುವಂತಿದೆ. ಒಳ್ಳೆಯದು, ಮಾನ್ಯರೆ, ದೇಶದಲ್ಲಿ ಇದುವರೆಗೆ ಅಸ್ತಿತ್ವದಲ್ಲಿರುವ ರಾಜನಿಷ್ಠೆಯಿಂದ ನಾವು ದೂರ ಸರಿಯಬಾರದು. ಹೊಸ ರಾಜನಿಷ್ಠೆಯು ಅಸ್ತಿತ್ವಕ್ಕೆ ಬರುತ್ತಿದೆ. ನಾವು ಬಂದಿರುವ ರಾಜ್ಯದ ಬಗೆಗಿನ ರಾಜನಿಷ್ಠೆಯನ್ನು ಕುರಿತು ಚಿಂತಿಸುವಾಗ, ನಾವು ಈ ದೇಶದಲ್ಲಿ ಈಗ ರಚಿಸುತ್ತಿರುವ ಒಕ್ಕೂಟದ ಬಗ್ಗೆ ನಿಷ್ಠರಾಗಿರಬೇಕಾಗುತ್ತದೆ ಎಂಬ ಅಂಶವನ್ನು ಮರೆಯಬಾರದು. (ಕೇಳಿ, ಕೇಳಿ). ನಮ್ಮ ರಾಜನಿಷ್ಠೆಯು ಬದಲಾವಣೆಗೆ ಒಳಗಾಗಬೇಕಿದೆ; ನಮ್ಮ ರಾಜನಿಷ್ಠೆಗಳನ್ನು ಸಮರಸಗೊಳಿಸಬೇಕಿದೆ. ನಾವು ನೆನಪಿನಲ್ಲಿಡಬೇಕಾದುದು ಏನೆಂದರೆ, ಘಟಕಗಳ ಸಾಮರ್ಥ್ಯವು ಒಕ್ಕೂಟದ ಸಾಮರ್ಥ್ಯವನ್ನು ಒಳಗೊಂಡಿರುತ್ತದೆ ಮತ್ತು ಒಕ್ಕೂಟದ ಸಾಮರ್ಥ್ಯವೂ ಕೂಡ ಘಟಕಗಳ ಸಾಮರ್ಥ್ಯವನ್ನು ಒಳಗೊಂಡಿರುತ್ತದೆ. ಇವೆರಡೂ ಅನ್ಯೋನ್ಯವಾಗಿರುತ್ತವೆ. ನಾವು ಬೇರ್ಪಡಿಸುವ ಯೋಚನೆಗಳಿಂದ ಮುಂದುವರಿಯಬಾರದು ಮತ್ತು ಕೇವಲ ಘಟಕದ ಸಾಮರ್ಥ್ಯದ ಬಗ್ಗೆ ಅಥವಾ ಕೇವಲ ಒಕ್ಕೂಟದ ಸಾಮರ್ಥ್ಯದ ಬಗ್ಗೆ ಮಾತ್ರ ನಾವು ಯೋಚಿಸಬಾರದು. ನಾವು ಘಟಕಗಳ ಸಾಮರ್ಥ್ಯ ಮತ್ತು ಒಕ್ಕೂಟದ ಸಾಮರ್ಥ್ಯವನ್ನು ಏಕೀಕೃತ ಸಾಮರ್ಥ್ಯದ ರೀತಿಯಲ್ಲಿ

ಯೋಚಿಸಬೇಕೆಂದು ನಾನು ಒತ್ತಾಯಿಸುತ್ತೇನೆ. ರಾಜ್ಯಗಳು ಒಕ್ಕೂಟಕ್ಕೆ ಸಮರ್ಪಿಸಿದ ಅಧಿಕಾರದ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಅವು ಒಕ್ಕೂಟದ ಕಾನೂನಿಗೆ ವಿರುದ್ಧವಾದ ಅಪರಾಧಗಳಲ್ಲಿ ಕ್ಷಮಾದಾನ ಮಾಡುವುದು ಮುಂತಾದ ಅಧಿಕಾರವನ್ನು, ಹಕ್ಕನ್ನು ರಾಷ್ಟ್ರಪತಿಯವರಿಗೆ ನೀಡಬೇಕಾಗುತ್ತದೆ. ನಾನು ಎಲ್ಲಿಯವರೆಗೆ ಹೇಳಲು ಬಯಸುತ್ತೇನೆಂದರೆ, ಒಕ್ಕೂಟದ ರಾಷ್ಟ್ರಪತಿಯವರು ಒಕ್ಕೂಟದ ಕಾನೂನಿಗೆ ವಿರುದ್ಧವಾದ ಅಪರಾಧಗಳಿಗೆ ಸಂಬಂಧಪಟ್ಟಂತೆ, ಅಂತಿಮ, ಪರಮಶ್ರೇಷ್ಠ ಅಧಿಕಾರವಾಗಬೇಕು. ಆದ್ದರಿಂದ, ನಾನು ಒತ್ತಾಯಿಸುವುದೇನೆಂದರೆ, ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯು, ರಾಜಿ ಮಾಡಿಕೊಳ್ಳುವಂತಹ ಕರಡಾಗಿರುವುದರಿಂದ, ಸದನದ ಎಲ್ಲ ವಿಭಾಗಗಳಿಂದಲೂ ಸ್ವೀಕಾರಾರ್ಹವಾಗಬೇಕು. ಒಂದು ವೇಳೆ ನಾನು ಹಾಗೆ ಹೇಳಬಹುದಾದರೆ, ನಾವು ರಾಜರಿಗೆ ಹೆಚ್ಚು ನಿಷ್ಠುರರಾಗಿರಬೇಕಾಗಿಲ್ಲ; ಸ್ವತಃ ರಾಜರೂ ಕೂಡ. ಒಕ್ಕೂಟದೊಂದಿಗೆ ಸೇರ್ಪಡೆಯಾಗುವ ನಿಟ್ಟಿನಲ್ಲಿ, ಹೊರಹೋಗುತ್ತಿರುವ ರಾಜ್ಯಗಳ ಆಳ್ವಿಕೆಗಾರ(ರಾಜ)ರುಗಳೂ ಕೂಡ, ತಮ್ಮ ನೇತ್ರಗಳನ್ನು ತೆರೆದು ಹಾಗೆ ಮಾಡಬೇಕು ಮತ್ತು ಎಸ್‌ಆರ್‌ಐ ನೊಂದಿಗೆ ಒಕ್ಕೂಟವನ್ನು ಒಪ್ಪಿಕೊಳ್ಳಲು ತಯಾರಾಗಬೇಕು ಮತ್ತು ಇದು ಅಳವಡಿಸಿಕೊಳ್ಳುವುದರಲ್ಲಿಯೇ (ತೊಡಗಿಸಿಕೊಳ್ಳುವುದರಲ್ಲಿಯೇ) ಹೊರತು ಎಲ್ಲ ಪ್ರಕಾರದ ಮೀಸಲಾತಿಗಳೊಂದಿಗಲ್ಲ. ಇಂತಹ ಒಂದೆರಡು ವಿಷಯಗಳಲ್ಲಿ, ಮಾನ್ಯರೆ, ನಾವು ಬಹಳ ನೇರವಾಗಿ ಮಾತನಾಡಬೇಕಾಗುತ್ತದೆ. ನಾವು ಇಂತಹ ವಿಷಯಗಳಲ್ಲಿ ನುಣುಚಿಕೊಳ್ಳುವ ಪ್ರಯತ್ನಮಾಡಬಾರದು. ಒಕ್ಕೂಟದ ವಿಷಯಗಳಿಗೆ ಸಂಬಂಧಪಟ್ಟಂತೆ ಸದ್ಯಕ್ಕೆ ನನ್ನ ಗಮನದಲ್ಲಿರುವುದು ಕೇವಲ ರಕ್ಷಣೆ, ವಿದೇಶಾಂಗ ವ್ಯವಹಾರ ಹಾಗೂ ಸಂವಹನ ಮತ್ತು ಒಕ್ಕೂಟದ ಕಾನೂನುಗಳಿಗೆ ವಿರುದ್ಧವಾದ ಅಪರಾಧಗಳಿಗೆ ಸಂಬಂಧಪಟ್ಟಂತೆ, ಪರಮೋಚ್ಚ ಅಧಿಕಾರವು ರಾಷ್ಟ್ರಪತಿಯವರಾಗಿರಬೇಕು. ಒಂದು ವೇಳೆ ನಾವು ಸಂಪೂರ್ಣ ಸಮಸ್ಯೆಯನ್ನು ಮುಕ್ತವಾಗಿ, ರಾಜನೀತಿ ನಿಪುಣರ ರೀತಿಯಲ್ಲಿ ಮತ್ತು ರಾಷ್ಟ್ರಭಕ್ತಿಯ ದೃಷ್ಟಿಕೋನದಿಂದ ನೋಡಿದರೆ, ನಾವು ಈ ಸ್ಥಿತಿಯಲ್ಲಿರುತ್ತೇವೆ ಮತ್ತು ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಮಂಡಿಸಿದ ತಿದ್ದುಪಡಿಗೆ ಯಾವುದೇ ರೀತಿಯ ತಕರಾರು ವ್ಯಕ್ತವಾಗುವುದಿಲ್ಲವೆಂದು ಮತ್ತು ಅವರನ್ನು ಸ್ಪಷ್ಟವಾದ ಹಾಗೂ ಖಚಿತವಾದ ರೀತಿಯಲ್ಲಿ ಬೆಂಬಲಿಸಲಾಗುತ್ತದೆಂದು ನಾನು ಭಾವಿಸುತ್ತೇನೆ. ನಾನು ರಾಜ್ಯದ ಹಿತ ಅಥವಾ ಒಕ್ಕೂಟದ ಹಿತದ ಪರಿಮಿತಿಗೊಳಪಡದೇ ಮತ್ತು ಒಟ್ಟಾರೆಯಾಗಿ ಸಂಪೂರ್ಣ ಭಾರತದ ಹಿತದ ದೃಷ್ಟಿಯಿಂದ ಅವರ ಈ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.

**ಶ್ರೀ ಎಮ್. ಎಸ್. ಅನೆ** (ಡೆಕ್ಕನ್ ರಾಜ್ಯ) : ಮಾನ್ಯರೆ, ಖಂಡ ಮತ್ತು ತಿದ್ದುಪಡಿಗಳು ಚರ್ಚೆಯ ಅಡಿಯಲ್ಲಿವೆಯೇ?

**ಮಾನ್ಯ ಸಭಾಧ್ಯಕ್ಷರು** : ಹೌದು, ಖಂಡ ಮತ್ತು ತಿದ್ದುಪಡಿಗಳು.

**ಸರ್ ಬಿ. ಎಲ್. ಮಿಟ್ಟರ್** : ಮಾನ್ಯರೆ, ನಾನು ನನ್ನ ತಿದ್ದುಪಡಿಯನ್ನು ಒತ್ತಾಯಿಸಲು ಬಯಸುವುದಿಲ್ಲ ಮತ್ತು ಇದನ್ನು ಸದನದಿಂದ ಹಿಂದಕ್ಕೆ ಪಡೆಯುವಂತೆ ಕೇಳಿಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಸರ್ ಬಿ.ಎಲ್. ಮಿಟ್ಟರ್ ಅವರು ತಮ್ಮ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲು ಅನುಮತಿಸುವುದಕ್ಕೆ ಸದನವು ಸಿದ್ಧವಿದೆಯೇ?

**ಶ್ರೀ ಹಿಮ್ಮತ್ ಸಿಂಗ್ ಮಹೇಶ್ವರಿ** (ಸಿಕ್ಕಿಮ್ ಮತ್ತು ಕೂಚ್ ಬೇರಾರ್ ರಾಜ್ಯಗಳು) : ಆದರೆ ಮಾನ್ಯರೆ, ಇದೇ ರೀತಿಯ ತಿದ್ದುಪಡಿಗಳನ್ನು ಹೊಂದಿರುವ ಇತರರೂ ಇದ್ದಾರೆ; ಸರ್ ಮಿಟ್ಟರ್ ಅವರು ತಮ್ಮದನ್ನು ಮಂಡಿಸಿದ್ದರಿಂದ ಅವರು ಅವನ್ನು ಮಂಡಿಸಿರಲಿಲ್ಲ. ಮಾನ್ಯರೇ, ನಾನು ಕೆಲವು ಮಾತುಗಳನ್ನು ಆಡಬಹುದೇ?

**ಮಾನ್ಯ ಸಭಾಧ್ಯಕ್ಷರು** : ಖಂಡಿತವಾಗಿ.

**ಶ್ರೀ ಹಿಮ್ಮತ್ ಸಿಂಗ್ ಮಹೇಶ್ವರಿ** : ಮಾನ್ಯರೆ, ನನ್ನ ಗುರು ಸರ್ ಗೋಪಾಲಸ್ವಾಮಿ ಅಯ್ಯಂಗಾರ್

ಅವರ ಪ್ರಶಂಸನೀಯ ಭಾಷಣವನ್ನು ನಾನು ವಿಶೇಷ ಗಮನ ಮತ್ತು ಗೌರವದೊಂದಿಗೆ ಆಲಿಸಿದ್ದೇನೆ; ಆದರೆ, ಅವರೊಂದಿಗೆ ಸ್ವಲ್ಪ ಭಿನ್ನಾಭಿಪ್ರಾಯವಿದೆ; ನನಗೆ ಸರಿಯಾಗಿ ಮನದಟ್ಟಾಗಿಲ್ಲವೆಂದು ನಾನು ಹೇಳಲೇಬೇಕಾಗಿದೆ. ಅವರು ಮಾಡಿದ ಮುಖ್ಯ ವಾದ, ನನಗನ್ನಿಸುತ್ತದೆ, ಪ್ರಾಂತ್ಯಗಳ ರಾಜ್ಯಪಾಲರುಗಳು ಕ್ಷಮಾದಾನ ನೀಡುವ ಅಧಿಕಾರವನ್ನು ಹೊಂದಿರುವುದಿಲ್ಲವಾದ ಕಾರಣದಿಂದಾಗಿ, ಪ್ರಸ್ತುತ ರಾಜ್ಯಗಳ ಆಳ್ವಿಕೆಗಾರ(ರಾಜ)ರು ಅನುಭವಿಸುತ್ತಿರುವ ಕ್ಷಮಾದಾನ ನೀಡುವ ಅಧಿಕಾರವೂ ಸಹ ಮೊಟಕುಗೊಳ್ಳಬೇಕು ಅಥವಾ ಹಿಂದಕ್ಕೆ ಪಡೆಯಲ್ಪಡಬೇಕು.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ನಾನು ಆ ರೀತಿಯಲ್ಲಿ ಹೇಳಿದ್ದೇನೆಂದು ನನಗೆ ಖಾತರಿಯಿಲ್ಲ.

**ಶ್ರೀ ಹಿಮ್ಮತ್ ಸಿಂಗ್ ಮಹೇಶ್ವರಿ** : ನಾನು ತಪ್ಪನ್ನು ತಿದ್ದಿಕೊಳ್ಳುತ್ತೇನೆ. ಅವರು ಇದನ್ನು ಹೆಚ್ಚುಕಡಿಮೆ ಸೂಕ್ಷ್ಮವಾದ ಪ್ರಶ್ನೆಯೆಂದು ಭಾವಿಸಿದಂತೆ ಕಾಣುತ್ತದೆ. ಆ ಅಂಶದಿಂದಾಗಿಯೇ ನಾನು ಅವರೊಂದಿಗೆ ಸಹಮತ ವ್ಯಕ್ತಪಡಿಸಲು ನಿರಾಕರಿಸುತ್ತೇನೆ. ಅಷ್ಟಕ್ಕೂ, ರಾಜ್ಯದ ಗಡಿಯೊಳಗೆ ಆಳ್ವಿಕೆಗಾರ(ರಾಜ)ರ ಘನತೆಯು ಕಾಪಾಡಲ್ಪಡಬೇಕಾಗುತ್ತದೆ ಮತ್ತು ಒಂದು ವೇಳೆ ನೀವು ಅವರು ಇಲ್ಲಿಯವರೆಗೆ ಅನುಭವಿಸಿಕೊಂಡು ಬಂದಿರುವ ನ್ಯಾಯದಾನದ ಅಧಿಕಾರವನ್ನು ಹಿಂದಕ್ಕೆ ತೆಗೆದುಕೊಂಡರೆ, ರಾಜ್ಯದ ಆದೇಶದೊಳಗೂ ಸಹ ಘನತೆಯ ಮೇಲೆ ಪರಿಣಾಮ ಉಂಟಾಗುತ್ತದೆ. ಸರ್ದಾರ್ ಪಟೇಲ್ ಅವರು ತಮ್ಮ ಜುಲೈ ೫ರ ಹೇಳಿಕೆಯಲ್ಲಿ, ರಾಜರುಗಳಿಗೆ ಆಶ್ವಾಸನೆ ನೀಡುತ್ತ ಏನು ಹೇಳಿದ್ದಾರೆಂದರೆ, ನಮ್ಮ ಸಾಮಾನ್ಯ ಉದ್ದೇಶವು ಪರಸ್ಪರರ ಅಭಿಪ್ರಾಯವನ್ನು ಅರ್ಥಮಾಡಿಕೊಳ್ಳುವುದು ಮತ್ತು ಎಲ್ಲರಿಗೂ ಸಮ್ಮತವಾಗುವ ನಿರ್ಧಾರವನ್ನು ತೆಗೆದುಕೊಳ್ಳುವುದು ಮತ್ತು ದೇಶದ ಹಿತಾಸಕ್ತಿಯನ್ನು ಕಾಪಾಡುವುದಾಗಿದೆ. ಈ ಆಶ್ವಾಸನೆಯ ಪ್ರಕಾಶದ ಅಡಿಯಲ್ಲಿ, ಮಾನ್ಯರೆ, ಕರಡು ರಚನೆಗಾರರು ಸಂಪೂರ್ಣ ಪರಿಸ್ಥಿತಿಯನ್ನು ಮರುಪರಿಶೀಲಿಸಬೇಕು ಮತ್ತು ಸಂತೋಷಕರ ಪರಿಹಾರವನ್ನು ಕಂಡುಕೊಳ್ಳಬೇಕು ಎಂದು ಸಲಹೆ ನೀಡುವ ಧೈರ್ಯ ಮಾಡುತ್ತೇನೆ. ತೊಂದರೆಯು ಉದ್ಭವಿಸುವುದು ಮುಖ್ಯವಾಗಿ ಒಂದು ವಿಷಯದಲ್ಲಿ. ಒಕ್ಕೂಟದ ಕಾನೂನಿನ ಅಡಿಯಲ್ಲಿ ಪ್ರಕರಣಗಳನ್ನು ಕೈಗೆತ್ತಿಕೊಳ್ಳುವ ನ್ಯಾಯಾಲಯವು ರಾಜ್ಯ ನ್ಯಾಯಾಲಯಗಳಾಗಿರುತ್ತವೆ. ಒಕ್ಕೂಟದ ಕಾನೂನಿಗೆ ವಿರುದ್ಧವಾಗಿ ಅಪರಾಧ ಮಾಡಿದ ವ್ಯಕ್ತಿಗೆ ರಾಜ್ಯ ನ್ಯಾಯಾಲಯವು ಶಿಕ್ಷೆ ವಿಧಿಸುತ್ತದೆ ಮತ್ತು ಆ ಶಿಕ್ಷೆಯನ್ನು ರಾಜ್ಯದ ಉಚ್ಚ ನ್ಯಾಯಾಲಯವು ಎತ್ತಿ ಹಿಡಿಯುತ್ತದೆ ಮತ್ತು ಅನಂತರ ಎಲ್ಲಕ್ಕಿಂತ ಕೊನೆಯಲ್ಲಿ, ಹೊರಗಿನ ಅಧಿಕಾರ(ಪ್ರಾಧಿಕಾರ)ವು ಕ್ಷಮಾದಾನ ನೀಡುತ್ತದೆ. ಇಂತಹ ಪ್ರಕರಣದಲ್ಲಿ, ನಿರ್ದಿಷ್ಟ ಪ್ರಮಾಣದ ಜಟಿಲತೆ ಮತ್ತು ನಿರ್ದಿಷ್ಟ ಪ್ರಮಾಣದ ಅಸಹಜತೆ, ಚಡಪಡಿಸುವಿಕೆ ಮತ್ತು ಬಹುಮಟ್ಟಿಗೆ ಸಂಘರ್ಷ ಉಂಟಾಗುತ್ತದೆ. ಇದನ್ನು ತಪ್ಪಿಸುವುದಕ್ಕಾಗಿ, ಮಾನ್ಯರೆ, ಸಂವಿಧಾನತಜ್ಞರು ಮತ್ತೊಮ್ಮೆ ಒಟ್ಟಾಗಿ, ಒಂದೆಡೆ ಸೇರಿ ಚಿಂತನೆ ನಡೆಸಬೇಕಿದೆ. ಆದ್ದರಿಂದ, ಈ ವಿಷಯದಲ್ಲಿ ಯಾವುದೇ ಅಸಂತೋಷಕರ ಭಾವನೆಯನ್ನು ಮೂಡಿಸುವಂತಹ ಅಥವಾ ಯಾವುದೇ ತಪ್ಪು ತಿಳಿವಳಿಕೆಗೆ ಕಾರಣವಾಗುವಂತಹ ಯಾವುದೇ ಅಂತಿಮ ತೀರ್ಪನ್ನು ಅಥವಾ ನಿರ್ಧಾರವನ್ನು ನಾನು ಅಪೇಕ್ಷಿಸುವುದಿಲ್ಲ; ವಿಶೇಷವಾಗಿ ಏಕೆಂದರೆ, ನನಗಿಂತ ಮೊದಲು ಮಾತನಾಡಿದ ಭಾಷಣಕಾರರು ತಮ್ಮ ಭಾಷಣದಲ್ಲಿ ಈ ವಿಷಯದಲ್ಲಿ ನಿರ್ದಿಷ್ಟ ಪ್ರಮಾಣದ ಭಾವೋದ್ವಿಗ್ನತೆಯಿರುವ ಸುಳಿವು ಅಥವಾ ಸಲಹೆ ನೀಡಿದ್ದಾರೆ. ಆದ್ದರಿಂದ, ಸಾಮಾನ್ಯ ಕಾನೂನಿನ ಅಡಿಯಲ್ಲಿನ ಅಪರಾಧಗಳಿಗೆ ಸಂಬಂಧಪಟ್ಟಂತೆ, ಅಧಿಕಾರಗಳ ಪ್ರಶ್ನೆಯೇ ಎಂದಿಗೂ ಉದ್ಭವಿಸುವುದಿಲ್ಲ. ಮೂಲ ಕರಡು ಆ ಅಧಿಕಾರವನ್ನೂ ಕೂಡ ಹೊರಗಾಗಿಸಿದೆ. ಈಗ ಕರಡು ತಿದ್ದುಪಡಿಗೆ ಒಳಗಾಗಿದೆ ಮತ್ತು ಸಾಮಾನ್ಯ ಕಾನೂನಿನ ಅಡಿಯಲ್ಲಿನ ಅಪರಾಧಗಳು ಸಂಪೂರ್ಣವಾಗಿ ಆಳ್ವಿಕೆಗಾರ(ರಾಜ)ರ ವಿವೇಚನೆಗೆ ಒಳಪಟ್ಟು ಉಳಿದುಕೊಳ್ಳುತ್ತವೆ ಹಾಗೂ ಸಾಮಾನ್ಯ ಕಾನೂನಿನ ಅಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದ ಕ್ಷಮಾದಾನವು ಸಂಪೂರ್ಣವಾಗಿ ಆಳ್ವಿಕೆಗಾರ(ರಾಜ)ರ ವಿವೇಚನೆಗೆ ಒಳಪಟ್ಟು

ಉಳಿದುಕೊಳ್ಳುತ್ತವೆ ಎಂದು ಸ್ಪಷ್ಟಪಡಿಸಿದೆ. ಆದರೆ, ಇದೂ ಕೂಡ ಪರಿಸ್ಥಿತಿಯನ್ನು ಗಣನೀಯವಾಗಿ ಸುಧಾರಿಸಿಲ್ಲ. ತಿದ್ದುಪಡಿಗೊಳಗಾದ ಕರಡಿನಲ್ಲಿ ಒಂದು ಖಂಡವಿದ್ದು ಅದು ಹೀಗಿದೆ :

"ಅಂತಹ ಅಧಿಕಾರವನ್ನು ಒಕ್ಕೂಟದ ಕಾನೂನಿನ ಮೂಲಕ ಇತರ ಅಧಿಕಾರಗಳಿಗೂ ಕೂಡ ವಹಿಸಬಹುದು."

ಈ ಅಧಿಕಾರವನ್ನು ಏಕಾಭಿಪ್ರಾಯದಲ್ಲಿ ಪ್ರಾಂತ್ಯಗಳ ರಾಜ್ಯಪಾಲರಿಗೂ ವಹಿಸುವ ಉದ್ದೇಶವನ್ನು ಹೊಂದಿರುವಂತೆ ಕಂಡುಬರುತ್ತದೆ. ರಾಜ್ಯಗಳ ಆಳ್ವಿಕೆಗಾರ(ರಾಜ)ರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಅವರಿಗೆ ಇಂತಹ ಯಾವುದೇ ಅಧಿಕಾರವನ್ನು ನೀಡುವಂತಹ ಯಾವುದೇ ಪ್ರಶ್ನೆಯಿಲ್ಲ; ಏಕೆಂದರೆ, ಅವರು ಇಂತಹ ಅಧಿಕಾರವನ್ನು ಈಗಾಗಲೇ ಅನುಭವಿಸುತ್ತಿದ್ದಾರೆ. ಆದ್ದರಿಂದ, ಈ ಖಂಡದ ಬೆಳಕಿನಡಿಯಲ್ಲಿ, ಸಂಪೂರ್ಣ ಪರಿಸ್ಥಿತಿಯನ್ನು ಮರುಪರೀಕ್ಷಿಸಬೇಕಾದುದು ಹೆಚ್ಚು ಅನಿವಾರ್ಯವಾಗುತ್ತದೆ. ಒಂದು ವೇಳೆ ಪ್ರತಿಯೊಬ್ಬರೂ ತಮ್ಮ ವರ್ತನೆಯನ್ನು ಮರುಪರಿಗಣಿಸುವುದಕ್ಕೆ ಸಾಧ್ಯವಾಗುವ ರೀತಿಯಲ್ಲಿ ಈ ಖಂಡವನ್ನು ಮುಂದೂಡಲು ಸದನವು ಒಪ್ಪಿಕೊಂಡರೆ, ನಾನು ತುಂಬ ಆಭಾರಿಯಾಗುತ್ತೇನೆ.

**ಶ್ರೀ ಕೆ.ಎಮ್. ಮುನ್ಷಿ** (ಬಾಂಬೆ : ಸಾಮಾನ್ಯ) : ಮಾನ್ಯರೆ, ಇದು ಸಾಂವಿಧಾನಿಕವಾಗಿ ಬಹಳ ಮಹತ್ತ್ವದ ವಿಷಯವಾಗಿದೆ ಮತ್ತು ನಾನು ಏನು ಹೇಳುತ್ತೇನೆಂದರೆ, ರಾಜ್ಯದ ಆಳ್ವಿಕೆಗಾರ(ರಾಜ)ರುಗಳ ಹಕ್ಕು ಅಥವಾ ಪ್ರಾಂತ್ಯದ ರಾಜ್ಯಪಾಲರುಗಳ ಹಕ್ಕು ಅಥವಾ ಅಪರಾಧ ವಿಧಾನ ಕಾನೂನು ಅಥವಾ ಪ್ರಸಕ್ತ ಭಾರತ ಸರ್ಕಾರ ಕಾಯ್ದೆಯಲ್ಲಿನ ಉಪಬಂಧಗಳ ಆ ವಿಷಯಕ್ಕಾಗಿ ಎಂಬ ದೃಷ್ಟಕೋನದಲ್ಲಿ ಇದನ್ನು ಚರ್ಚೆ ಮಾಡಬಾರದು. ವಾಸ್ತವ ಅಂಶದ ಪ್ರಕಾರ, ಮಾನ್ಯರೆ, ಹಕ್ಕುಗಳು ಮತ್ತು ಆಭಾರಗಳಿಗೆ ಸಂಬಂಧಪಟ್ಟಂತೆ, ಒಕ್ಕೂಟದಲ್ಲಿ ಪ್ರಜೆಗಳು ಕೇಂದ್ರದೊಂದಿಗೆ ನೇರವಾದ ಸಂಬಂಧ ಹೊಂದಿದ್ದಾರೆ ಎಂಬುದು ಚೆನ್ನಾಗಿ ತಿಳಿದಿದೆ. ಪ್ರತಿಯೊಬ್ಬ ಪ್ರಜೆಯ ಆರೋಪವು, ಆತ ಭಾರತೀಯ ರಾಜ್ಯದಲ್ಲಿರಲಿ ಅಥವಾ ಪ್ರಾಂತ್ಯದಲ್ಲಿರಲಿ, ಕೇಂದ್ರಕ್ಕೆ ಸಂಬಂಧಪಟ್ಟಂತೆ ನೇರ ಸಂಬಂಧ ಹೊಂದಿರುತ್ತಾನೆ. ಒಕ್ಕೂಟ ಕಾನೂನುಗಳು ಪ್ರತಿಯೊಬ್ಬ ಪ್ರಜೆಯ ಮೇಲೆ ನೇರವಾದ ಪ್ರಭಾವ ಬೀರುತ್ತವೆ ಮತ್ತು ಅಂತಹ ಕಾನೂನಿಗೆ ಸಂಬಂಧಪಟ್ಟಂತೆ ನಡೆಯುವ ಅಪರಾಧವು, ಕೇವಲ ರಾಜ್ಯ ಅಥವಾ ಪ್ರಾಂತ್ಯಕ್ಕೆ ವಿರುದ್ಧವಾದ ಅಪರಾಧವಾಗಿರುವುದಿಲ್ಲ; ಬದಲಿಗೆ ಅದು ಒಕ್ಕೂಟದ ಸರ್ಕಾರಕ್ಕೆ ವಿರುದ್ಧವಾದ ಅಪರಾಧವಾಗಿರುತ್ತದೆ. ಆದ್ದರಿಂದ, ಅಂತಹ ಅಪರಾಧಕ್ಕೆ ನೀಡಲಾದ ಶಿಕ್ಷೆಗೆ ತಡೆ ಅಥವಾ ಕ್ಷಮಾದಾನದ ಅಧಿಕಾರವು, ಸಂವಿಧಾನದ ಮೂಲತತ್ತ್ವಗಳ ಪ್ರಕಾರ, ಒಕ್ಕೂಟದ ಮುಖ್ಯಸ್ಥರು, ಅಂದರೆ, ರಾಷ್ಟ್ರಪತಿಯವರ ಬಳಿಯಲ್ಲಿಯೇ ಇರಬೇಕು ಮತ್ತು ಆ ಮಟ್ಟಿಗೆ ಪರಿಸ್ಥಿತಿಯು ನಿರ್ವಿವಾದವಾಗಿದೆ ಎಂದು ನಾನು ಮಂಡಿಸುತ್ತೇನೆ.

ಒಕ್ಕೂಟಕ್ಕೆ ಸೇರ್ಪಡೆಯಾಗುತ್ತಿರುವ, ಒಕ್ಕೂಟದ ಅಂಗವಾಗುತ್ತಿರುವ, ತಮ್ಮ ರಾಜ್ಯಗಳಲ್ಲಿ ಒಕ್ಕೂಟದ ಕಾನೂನಿನ ಜಾರಿಗೆ ಸಮ್ಮತಿಸುತ್ತಿರುವ ಎಲ್ಲ ರಾಜ್ಯಗಳು, ಯಾವ ಮಟ್ಟಿಗೆ ಒಪ್ಪಿಗೆ ಸೂಚಿಸಬೇಕೆಂದರೆ, ಒಕ್ಕೂಟದ ಕಾನೂನಿನ ವಲಯದಲ್ಲಿ ಒಕ್ಕೂಟದ ಸರ್ಕಾರವೇ ಪರಮಶ್ರೇಷ್ಠವಾದುದು ಮತ್ತು ರಾಷ್ಟ್ರಪತಿಯವರು – ಅವರು ಒಕ್ಕೂಟದ ಸರ್ಕಾರವನ್ನು ಪ್ರತಿನಿಧಿಸುವುದರಿಂದ – ಮಾತ್ರ ಶಿಕ್ಷೆಗೆ ತಡೆಯಾಜ್ಞೆ ಅಥವಾ ಕ್ಷಮಾದಾನ ನೀಡುವ ಅಧಿಕಾರದ ಮೊದಲ ಹಾಗೂ ಕೊನೆಯ ಹಕ್ಕುದಾರರಾಗಿರುತ್ತಾರೆ. ಆದ್ದರಿಂದಲೇ, ಅಮೆರಿಕದ ಸಂವಿಧಾನದಲ್ಲಿ, ಎಲ್ಲರೂ ತಿಳಿದಿರುವಂತೆ, ಸಂಯುಕ್ತ ಸಂಸ್ಥಾನಗಳ ವಿರುದ್ಧವಾದ ಅಪರಾಧಗಳಲ್ಲಿನ ಶಿಕ್ಷೆಗೆ ತಡೆಯಾಜ್ಞೆ ನೀಡುವ ಅಥವಾ ಕ್ಷಮಾದಾನ ನೀಡುವ ಅಧಿಕಾರಕ್ಕೆ ರಾಷ್ಟ್ರಾಧ್ಯಕ್ಷರೇ ಹಕ್ಕುದಾರರಾಗಿರುತ್ತಾರೆ.

ಅಂತಹುದೇ ಉಪಬಂಧವು, ಸಂವಿಧಾನದ ಮೂಲತತ್ತ್ವದ ದೃಷ್ಟಿಕೋನದಿಂದ ಮಾತ್ರವಲ್ಲ, ಯಥೋಚಿತತೆಯ ದೃಷ್ಟಿಕೋನದಿಂದಲೂ ಕೂಡ ಆವಶ್ಯಕವಾಗಿದೆ ಎಂದು ನಾನು ಹೇಳುತ್ತೇನೆ. ಮಾನ್ಯರೆ, ಪರಿಸ್ಥಿತಿಯು ಈ ರೀತಿ ಇದೆ. ನನ್ನ ಗೌರವಾನ್ವಿತ ಸ್ನೇಹಿತರಾದ ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಆದಾಯ ತೆರಿಗೆ ನಿಯಮಗಳನ್ನು ಉಲ್ಲೇಖಿಸಿದ್ದಾರೆ. ಆದರೆ ಇಲ್ಲಿ ಇತರ ಒಕ್ಕೂಟದ ಕಾನೂನುಗಳು

– ದೇಶಭ್ರಷ್ಟತೆಗೆ ಸಂಬಂಧಿಸಿದ್ದು, ಪರಕೀಯರಿಗೆ ಪ್ರಜಾಹಕ್ಕುಗಳನ್ನು ನೀಡುವುದಕ್ಕೆ ಸಂಬಂಧಿಸಿದ್ದು, ರಕ್ಷಣೆಗೆ ಸಂಬಂಧಿಸಿದ್ದು, ವಿದೇಶಾಂಗ ವ್ಯವಹಾರಕ್ಕೆ ಸಂಬಂಧಿಸಿದ್ದು, ಒಕ್ಕೂಟದ ಸರ್ಕಾರಕ್ಕೆ ವಿರುದ್ಧವಾದ ರಾಜದ್ರೋಹಕ್ಕೆ ಸಂಬಂಧಿಸಿದ್ದು – ಸಹ, ಕೇಂದ್ರದ ಅಸ್ತಿತ್ವಕ್ಕೆ ಅತ್ಯಂತ ಪ್ರಮುಖವಾದ ವಿಷಯಗಳಾಗಿವೆ ಮತ್ತು ಆದ್ದರಿಂದ, ನಾನು ಸೂಚಿಸುತ್ತೇನೆ, ಕ್ಷಮಾದಾನ ನೀಡುವ ಅಧಿಕಾರವನ್ನು ಒಕ್ಕೂಟದ ಸರ್ಕಾರದ ಮುಖ್ಯಸ್ಥರನ್ನು ಹೊರತುಪಡಿಸಿ ಇತರ ಯಾರಿಗೂ ಸಹ ನೀಡಬಾರದು. ಒಂದು ವೇಳೆ ಈ ಅಧಿಕಾರವನ್ನು ರಾಜ್ಯದ ಆಳ್ವಿಕೆಗಾರ(ರಾಜ)ರಿಗೆ ಅಥವಾ ಪ್ರಾಂತ್ಯದ ರಾಜ್ಯಪಾಲರಿಗೆ ನೀಡಿದರೆ, ಇದರ ಪರಿಣಾಮವು, ಆಕಸ್ಮಿಕ ಪ್ರಸಂಗ (ಅನಿರೀಕ್ಷಿತ ಘಟನೆ) ಮತ್ತು ವಿಪತ್ಕಾರಕ(ಘೋರ)ವಾಗಿರುತ್ತದೆ. ಉದಾಹರಣೆಗೆ: ಇದನ್ನು ತೆಗೆದುಕೊಳ್ಳಿ. ಸಾಮಾನ್ಯ ನಿಯಮದಲ್ಲಿ ರಾಜ್ಯಪಾಲರು ಅಥವಾ ಆಳ್ವಿಕೆಗಾರ(ರಾಜ)ರಿಗೆ – ಏಕೆಂದರೆ, ಅವರಿಬ್ಬರೂ ಸಮಾನಸ್ಥಾನದಲ್ಲಿ ಇರುವುದರಿಂದ – ಒಕ್ಕೂಟದ ಮುಖ್ಯಸ್ಥರ ಬಳಿಯಲ್ಲಿ ಸಂಪೂರ್ಣವಾಗಿ ಇರಬೇಕಾದ ವಿಶೇಷಾಧಿಕಾರದ ಸ್ವಲ್ಪ ಭಾಗವನ್ನು ಒಪ್ಪಿಸಲಾಗುತ್ತದೆ ಮತ್ತು ಇದರ ಯಾವುದೇ ಭಾಗವು ಈ ಸಾಮಾನ್ಯ ನಿಯಮಕ್ಕೆ ಅಸಂಬದ್ಧವೆನಿಸುತ್ತದೆಂದು ನಾನು ಹೇಳುತ್ತೇನೆ. ಆದರೆ, ಅದನ್ನು ಹೊರತುಪಡಿಸಿ ನಡೆದುಕೊಳ್ಳುವ ವರ್ತನೆಯಲ್ಲಿ ಅಸಮಾನತೆಯಿದೆ. ಹೀಗೆ ಊಹಿಸುವುದಾದರೆ, ಪ್ರಾಂತ್ಯ 'ಎ'ನಲ್ಲಿ ಸಂಬಂಧಪಟ್ಟ ಮಂತ್ರಾಲಯವು ನಿರ್ದಿಷ್ಟ ದೃಷ್ಟಿಕೋನ ಹೊಂದುತ್ತದೆ ಮತ್ತು ನಿರ್ದಿಷ್ಟ ವ್ಯಕ್ತಿಯನ್ನು ಬಿಡುಗಡೆ ಮಾಡುವಂತೆ ರಾಷ್ಟ್ರಪತಿಯವರಿಗೆ ಸಲಹೆಯನ್ನು ಮಾಡುತ್ತದೆ; ಇದರಿಂದ ಯಾವುದೇ ಅಪೀಲು ಇರುವುದಿಲ್ಲ; ಆದರೆ, ಬೇರೊಂದು ಪ್ರಾಂತ್ಯದಲ್ಲಿ ಇದಕ್ಕೆ ಬೇರೆಯದೇ ಅಭಿಪ್ರಾಯ ಇರಬಹುದು. ಆದ್ದರಿಂದ, ಒಂದೇ ರೀತಿಯ ಅಪರಾಧಕ್ಕೆ ಒಂದು ಪ್ರಾಂತ್ಯದ ರಾಜ್ಯಪಾಲರು ಕ್ಷಮಾದಾನ ನೀಡುವುದನ್ನು ಮತ್ತು ಇನ್ನೊಂದು ಪ್ರಾಂತ್ಯದ ರಾಜ್ಯಪಾಲರು ಕ್ಷಮಾದಾನ ನೀಡದಿರುವುದನ್ನು ನೀವು ನೋಡಬಹುದು ಮತ್ತು ರಾಜ್ಯಗಳ ಆಳ್ವಿಕೆಗಾರ(ರಾಜ)ರು ತಾವು ಹೊಂದಿರುವುದಾಗಿ ಭಾವಿಸುತ್ತಿರುವ ಸಂಪೂರ್ಣ ವಿಶೇಷಾಧಿಕಾರವು ಸದಾ ಕಾಲಕ್ಕೆ ಇರುತ್ತದೆಂದು ನಾವು ಊಹಿಸಬೇಕಾಗಿಲ್ಲ. ಅನೇಕ ರಾಜ್ಯಗಳು ಜವಾಬ್ದಾರಿಯ ಮೂಲಪಾಠವನ್ನು ಪರಿಚಯಿಸಿವೆ; ದೇಶದ ಸಾಮಾನ್ಯ ಪ್ರಗತಿಯು ಸದ್ಯದಲ್ಲೇ ತನ್ನ ಸರ್ಕಾರದಲ್ಲಿ ಕೆಲವು ಜವಾಬ್ದಾರಿಯ ಮೂಲಪಾಠವನ್ನು ಹೊಂದಿರುವಂತೆ ಪ್ರತಿ ರಾಜ್ಯವನ್ನೂ ಒತ್ತಾಯಿಸುತ್ತದೆ ಎನ್ನುವುದರಲ್ಲಿ ನನಗೆ ಯಾವುದೇ ಅನುಮಾನವಿಲ್ಲ. ಅದು ಹಾಗಾದರೆ, ಶಿಕ್ಷೆಗೆ ತಡೆಯಾಜ್ಞೆ ನೀಡುವ ಮತ್ತು ಕ್ಷಮಾದಾನ ನೀಡುವ ಅಧಿಕಾರವನ್ನು ಬಳಸುವುದು ಆಳ್ವಿಕೆಗಾರ(ರಾಜ)ರಿಗೆ ಸಾಧ್ಯವಾಗುವುದಿಲ್ಲ. ಆದರೆ, ಆಳ್ವಿಕೆಗಾರ(ರಾಜ)ರಿಗೆ ಸಲಹೆ ನೀಡುವ ಆ ರಾಜ್ಯದ ಸಚಿವಸಂಪುಟವು ಕ್ಷಮಾದಾನ ನೀಡುತ್ತದೆ. ಈ ರೀತಿ ಹುಟ್ಟುವ ಸಂದರ್ಭಗಳಲ್ಲಿ, ಆದ್ದರಿಂದ, ಪ್ರಾಂತ್ಯ ಅಥವಾ ರಾಜ್ಯವು ನಿರ್ದಿಷ್ಟ ಮಾದರಿಯ ಅಪರಾಧಿಯನ್ನು ಜೈಲಿನಲ್ಲಿಯೇ ಉಳಿಯುವಂತೆ ಮಾಡುವುದು ಅಷ್ಟೊಂದು ಸರಿಹೋಗದೇ ಇರಬಹುದು. ಯುದ್ಧದ ಪ್ರಕರಣವನ್ನು ತೆಗೆದುಕೊಳ್ಳಿ; ಇದು ಐರ್ಲೆಂಡ್ ಮತ್ತು ಇಂಗ್ಲೆಂಡ್‌ಗಳಲ್ಲಿ ಸಂಭವಿಸಿವೆ ಮತ್ತು ನಾನು ಈ ಪ್ರಕರಣಗಳಲ್ಲಿ ಮುಂದುವರಿಸಲು ಬಯಸುವುದಿಲ್ಲ. ಯುದ್ಧದಲ್ಲಿ, ರಾಜ್ಯಕ್ಕೆ ವಿರುದ್ಧವಾದ ನಿರ್ದಿಷ್ಟ ಪ್ರಕರಣಗಳಿಗೆ ಸಂಬಂಧಪಟ್ಟಂತೆ, ವಿಭಿನ್ನ ದೃಷ್ಟಿಕೋನದಿಂದ ನೋಡಿದಂತಹ ಘಟನೆಗಳು ಹಲವಾರು ಬಾರಿ ಸಂಭವಿಸಿವೆ. ಒಂದು ವೇಳೆ ಕೇಂದ್ರದ ಅಪೇಕ್ಷೆಗೆ ಅಥವಾ ನೀತಿಗೆ ವಿರುದ್ಧವಾಗಿ, ಘಟಕಗಳ ಮುಖ್ಯಸ್ಥರುಗಳು ಅಥವಾ ಘಟಕಗಳ ಮಂತ್ರಿಗಳು ಶಿಕ್ಷೆಗೆ ತಡೆ ಅಥವಾ ಕ್ಷಮಾದಾನ ನೀಡುವಿಕೆಯಲ್ಲಿ ಸ್ವತಂತ್ರ ನಿರ್ಧಾರ ತೆಗೆದುಕೊಂಡರೆ ಏನಾಗುತ್ತದೆ? ಒಂದು ವೇಳೆ ರಾಜ್ಯ ಹಾಗೂ ಕೇಂದ್ರಗಳ ನೀತಿಗಳು ವಿಭಿನ್ನವಾಗಿದ್ದರೆ ಮತ್ತು ಒಂದಿಷ್ಟು ಅಪರಾಧಗಳಿಗೆ 'ರಾಜ್ಯವು' ತಡೆ ನೀಡಲು ಬಯಸಿದರೆ ಮತ್ತು ತಡೆ ನೀಡಿದರೆ (ನಿಮಗೆಲ್ಲ ತಿಳಿದಂತೆ, ಶಿಕ್ಷೆಯ ಮುಂದೂಡಿಕೆ) ಮತ್ತು ಒಂದು ವೇಳೆ ಈ ಅಧಿಕಾರವು ರಾಷ್ಟ್ರಪತಿಯವರ ಬಳಿಯಲ್ಲಿರುವ ಬದಲು ರಾಜ್ಯಪಾಲರು ಅಥವಾ ಆಳ್ವಿಕೆಗಾರ(ರಾಜ)ರ ಬಳಿಯಲ್ಲಿದ್ದರೆ, ಗಂಭೀರ ಬಿಕ್ಕಟ್ಟುಗಳು ತಲೆ ಎತ್ತುತ್ತವೆ. ಆದ್ದರಿಂದ, ನಾನು ಮಂಡಿಸುವುದೇನೆಂದರೆ, ಒಕ್ಕೂಟದ ಸರ್ಕಾರದ ವಿರುದ್ಧದ ಅಪರಾಧವು,

ನಿಜವಾಗಿ ಹೇಳಬೇಕೆಂದರೆ, ಒಕ್ಕೂಟದ ಸರ್ಕಾರದ ಪ್ರತಿಯೊಬ್ಬ ಪ್ರಜೆ(ಇಡೀ ಒಕ್ಕೂಟದ ಪ್ರಜೆಯಾಗಿ ತೆಗೆದುಕೊಂಡಂತೆ)ಯ ರಾಜನಿಷ್ಠೆಯನ್ನು ಆಧರಿಸಿರುತ್ತದೆ. ಆದ್ದರಿಂದ, ಆ ನಿಯಮವನ್ನು ಅನುಸರಿಸಿದಂತೆ ಹೇಳುವುದಾದರೆ, ಶಿಕ್ಷೆಗೆ ತಡೆ ಅಥವಾ ಕ್ಷಮಾದಾನ ನೀಡುವ ಅಧಿಕಾರವು ಒಕ್ಕೂಟ ಸರ್ಕಾರದ ರಾಷ್ಟ್ರಪತಿಯವರ ಬಳಿಯಲ್ಲಿಯೇ ಇರಬೇಕು ಮತ್ತು ಇದು ವಿಭಜನೆಗೆ ಒಳಗಾಗಬಾರದು.

ಇತರ ವಿಷಯಗಳಿಗೆ ಸಂಬಂಧಪಟ್ಟಂತೆ, ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರ ತಿದ್ದುಪಡಿಯಿದೆ. ಮರಣ ದಂಡನೆಗೆ ಸಂಬಂಧಿಸಿದಂತೆ, ಪ್ರಾಂತ್ಯಗಳು ರಾಷ್ಟ್ರಪತಿಯವರೊಂದಿಗೆ ಏಕಾಭಿಪ್ರಾಯದ ಅಧಿಕಾರವನ್ನು ಹೊಂದಿರಬೇಕೆಂದು ಸದಸ್ಯರು ಅಪೇಕ್ಷಿಸಿದರೆ, ತೊಂದರೆಯೇನೂ ಇಲ್ಲ. ಆದರೆ ರಾಜ್ಯಗಳಿಗೆ ಸಂಬಂಧಪಟ್ಟಂತೆ, ರಾಜ್ಯದ ಕಾನೂನುಗಳಿಗೆ ಸಂಬಂಧಿಸಿದಂತೆ ರಾಷ್ಟ್ರಪತಿಯವರು ಯಾವುದೇ ಏಕಾಭಿಪ್ರಾಯದ ಅಧಿಕಾರ ಹೊಂದಿರಬೇಕೆಂಬ ವಿಷಯದಲ್ಲಿ ನಾನು ಹೆಚ್ಚು ಉತ್ಸುಕನಾಗಿಲ್ಲ. ಆದರೆ, ನಾವು ತುಂಬ ಮುಖ್ಯವಾದ ವಿಷಯವನ್ನು ಮರೆಯಬಾರದು. ಇಲ್ಲಿ ಸಣ್ಣ ಮತ್ತು ದೊಡ್ಡ ರಾಜ್ಯಗಳಿವೆ. ಅಂಗೀಕೃತ ರಾಜ್ಯಗಳೆಲ್ಲವೂ ದೊಡ್ಡ ರಾಜ್ಯಗಳಷ್ಟು ಗಾತ್ರವನ್ನು ಹೊಂದಿಲ್ಲ (ದೊಡ್ಡ ರಾಜ್ಯಗಳ ಪ್ರತಿನಿಧಿಗಳನ್ನು ನಾವು ಇಲ್ಲಿ ಮುಂದಿನ ಸಾಲಿನಲ್ಲಿ ಕಾಣಬಹುದು). ಪ್ರಸ್ತುತ ಆಡಳಿತ ಯಂತ್ರದಲ್ಲಿ, ಶ್ರೇಷ್ಠ ಅಧಿಕಾರದ ಕೆಲವು ಪ್ರತಿನಿಧಿಗಳನ್ನು ಸಂಪರ್ಕಿಸದೇ, ಅವರ ಅನುಮತಿ ಪಡೆಯದೇ, ಮರಣದಂಡನೆಯನ್ನು ವಿಧಿಸುವ ಅಧಿಕಾರವನ್ನೂ ಸಹ ಕೆಲವು ರಾಜ್ಯಗಳು ಹೊಂದಿಲ್ಲ. ಕೆಲವು ಸಣ್ಣ ರಾಜ್ಯಗಳು, ಅಂಕಿ ಅಂಶದ ಪ್ರಕಾರ ನಾನು ತಿಳಿದಿದ್ದೇನೆ, ಒಂದು ವೇಳೆ ಅವು ಮರಣದಂಡನೆ ಶಿಕ್ಷೆಯನ್ನು ಜಾರಿಗೊಳಿಸಿದರೂ ಕೂಡ, ಅವುಗಳ ಮೇಲೆ ಶ್ರೇಷ್ಠ ಅಧಿಕಾರದ ಪ್ರಭಾವ ಬೀರುವ ಸಾಧ್ಯತೆಗಳಿವೆ. ಆದ್ದರಿಂದ, ದೇಶವನ್ನು ಇಡಿಯಾಗಿ ಪರಿಗಣಿಸಬೇಕಾಗುತ್ತದೆ; ಯಾವ ಸಣ್ಣ ರಾಜ್ಯಗಳು ಇಂತಹ ಅಧಿಕಾರವನ್ನು ಅನುಭವಿಸುತ್ತಿಲ್ಲವೋ, ಅವುಗಳಿಗೆ ಅಮಿತವಾಗಿ ಮರಣದಂಡನೆಯನ್ನು ಜಾರಿ ಮಾಡುವ, ತಮ್ಮ ಇಚ್ಛೆಗೆ ಅನುಗುಣವಾಗಿ ಮತ್ತು ಯಾವುದೇ ಹಿಡಿತವಿಲ್ಲದೇ ಶಿಕ್ಷೆಗೆ ತಡೆ ಮತ್ತು ಕ್ಷಮಾದಾನವನ್ನು ನೀಡುವ ಅಧಿಕಾರವನ್ನು ನೀಡಬೇಕಾಗುತ್ತದೆ. ಇಲ್ಲಿ ಗೊಂದಲಗಳಿರುವುದರಿಂದ, ಇದನ್ನು ಸಮಿತಿಗೆ ಪರಿಶೀಲನೆಗಾಗಿ ಒಪ್ಪಿಸಿ ಸಂಪೂರ್ಣವಾಗಿ ಚರ್ಚಿಸಬಹುದಾಗಿದೆ. ಆದರೆ, ಪ್ರಥಮ ಹಾಗೂ ಮೂಲಭೂತ ಪ್ರಶ್ನೆಯ ಮೇರೆಗೆ ನಾನು ಮಂಡಿಸುವುದೇನೆಂದರೆ, ಶಿಕ್ಷೆಗೆ ತಡೆ ಹಾಗೂ ಕ್ಷಮಾದಾನ ನೀಡುವ ಅಧಿಕಾರವನ್ನು ರಾಷ್ಟ್ರಪತಿಯವರಿಂದ ಹಿಂದಕ್ಕೆ ಪಡೆಯುವುದಕ್ಕೆ ಸಂಬಂಧಿಸಿದಂತೆ, ಒಕ್ಕೂಟದ ಸರ್ಕಾರದ ಪ್ರಜೆಗಳ ರಾಜನಿಷ್ಠೆಯಲ್ಲಿ ನೇರವಾಗಿ ಮಧ್ಯೆ ಪ್ರವೇಶ ಮಾಡಿದಂತಾಗುತ್ತದೆ. ಮಾನ್ಯರೆ, ಇದುವೇ ನಾನು ಮಂಡಿಸಬೇಕಾಗಿರುವುದಾಗಿದೆ.

**ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ :** ಮಾನ್ಯರೆ, ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರಿಂದ ಸಮರ್ಥವಾಗಿ ಮಂಡಿಸಲ್ಪಟ್ಟ ಪ್ರಸ್ತಾವವನ್ನು ಬೆಂಬಲಿಸುವ ನಿಟ್ಟಿನಲ್ಲಿ ಮತ್ತು ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರ ತಿದ್ದುಪಡಿಯನ್ನು ಬೆಂಬಲಿಸುವ ನಿಟ್ಟಿನಲ್ಲಿ ನಾನು ಕೆಲವು ಮಾತುಗಳನ್ನು ಆಡಬಯಸುತ್ತೇನೆ. ಮೊದಲ ಸ್ಥಾನದಲ್ಲಿ, ಕೆಲವು ರಾಜ್ಯಗಳ ಜನಪ್ರಿಯ ಪ್ರತಿನಿಧಿಗಳು ಮುಂದೆ ಬಂದಿದ್ದನ್ನು ಮತ್ತು ಪ್ರಸ್ತಾವಕ್ಕೆ ತಮ್ಮ ಬೆಂಬಲ ನೀಡಿರುವುದನ್ನು ಗಮನಿಸಿದಾಗ ನನಗೆ ತುಂಬ ಸಂತೋಷವಾಗಿದೆ; ಹೆಸರಿಸುವುದಾದರೆ, ಒಕ್ಕೂಟದ ರಾಷ್ಟ್ರಪತಿಯವರು ಕ್ಷಮಾದಾನದ ಸಹಜ ಹಕ್ಕನ್ನು ಹೊಂದಿರುವುದು ಒಕ್ಕೂಟದ ವ್ಯವಸ್ಥೆಯಲ್ಲಿ ಸ್ವಾಭಾವಿಕವಾದ ಪ್ರಾಮುಖ್ಯವಾಗಿದೆ.

**ಗೌರವಾನ್ವಿತ ಸದಸ್ಯರು :** ಮಾನ್ಯರೆ, 'ಜನಪ್ರಿಯ ಪ್ರತಿನಿಧಿಗಳು' ಶಬ್ದಗಳ ಹಿಂದಿರುವ ವ್ಯಂಗ್ಯವನ್ನು ನಾನು ತಿಳಿದುಕೊಳ್ಳಬಹುದೇ? ಹಾಗಾದರೆ, ಇತರರು ಜನಪ್ರಿಯರಲ್ಲವೇ?

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ :** ಇತರರು ಜನಪ್ರಿಯ ಪ್ರತಿನಿಧಿಗಳಲ್ಲ ಎಂದು ಹೇಳುವುದು ನನ್ನ ಮಾತಿನ ಉದ್ದೇಶವಲ್ಲ; ಆದರೆ, ಅಧಿಕಾರಿಗಳು ಜನಪ್ರಿಯ ಪ್ರತಿನಿಧಿಗಳು ಎಂದು ನಾನು ಗುರುತಿಸುವುದಿಲ್ಲ;

ಏಕೆಂದರೆ, ಕೆಲವು ರಾಜ್ಯಗಳ ಪ್ರಕರಣಗಳಲ್ಲಿ, ಆಳ್ವಿಕೆಗಾರ(ರಾಜ)ರ ಕೆಲವು ನಿರ್ದಿಷ್ಟ ಪ್ರತಿನಿಧಿಗಳು ಮತ್ತು ಜನರ ಪ್ರತಿನಿಧಿಗಳ ನಡುವೆ, ಪ್ರತಿನಿಧಿತ್ವದಲ್ಲಿ ವಿಭಾಗಗಳಿವೆ ಎಂದು ನಾನು ನಂಬಿದ್ದೇನೆ. ಈ ಎರಡೂ ಸಹ ರಾಜ್ಯವನ್ನು ಪ್ರತಿನಿಧಿಸುತ್ತವೆ; ಆದರೆ ಇಲ್ಲಿ, ವಾಸ್ತವ ಹಾಗೂ ಸಾಮಾನ್ಯಜ್ಞಾನದ ದೃಷ್ಟಿಯಲ್ಲಿ, ಈ ಎರಡು ರೀತಿಯ ಪ್ರತಿನಿಧಿಗಳಲ್ಲಿ ವ್ಯತ್ಯಾಸವಿದೆ. ಒಂದು ವೇಳೆ ನೀವು ಬಯಸಿದರೆ, ನೀವು ಇದನ್ನು ಆ ಅರ್ಹತೆ, ಯೋಗ್ಯತೆ ಅಥವಾ ತಿದ್ದುಪಡಿಯೊಂದಿಗೆ ತೆಗೆದುಕೊಳ್ಳಬಹುದು; ಆದರೆ, ನಾನು ಬಳಸಿದ ಭಾವಾರ್ಥದ ರೀತಿಯಲ್ಲಿ, ಈ ಜನಪ್ರಿಯ ಪ್ರತಿನಿಧಿಗಳ ನಡುವೆ ಬಹಳ ವ್ಯತ್ಯಾಸವಿದೆ ಎಂಬುದನ್ನು ತಿರಸ್ಕರಿಸುವ ಯಾವುದೇ ಅಂಶವಿಲ್ಲ ಮತ್ತು ಎಲ್ಲ ಪ್ರತಿನಿಧಿಗಳು ಸರ್ಕಾರ ಅಥವಾ ಆಳ್ವಿಕೆಗಾರ(ರಾಜ)ರಿಂದ ಆಯ್ಕೆಯಾಗುತ್ತಾರೆ.

**ಶ್ರೀ ಎಚ್. ಆರ್. ಗುರುವಾ ರೆಡ್ಡಿ** (ಮೈಸೂರು ರಾಜ್ಯ) : ನಾವು ಎಲ್ಲ ಚುನಾಯಿತ ವ್ಯಕ್ತಿಗಳು ಮತ್ತು ನಾಮಕರಣಗೊಂಡ ವ್ಯಕ್ತಿಗಳಲ್ಲ.

**ಡಾ. ಬಿ. ಪಟ್ಟಾಭಿ ಸೀತಾರಾಮಯ್ಯ** (ಮದ್ರಾಸ್ : ಸಾಮಾನ್ಯ) : ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಇವು ಗೌಣ ವಿಷಯಗಳು. ಅಮುಖ್ಯ ವಿಷಯಗಳು ಉದ್ಭವಿಸಬಾರದು ಮತ್ತು ಚರ್ಚಿಸಲ್ಪಡಬಾರದು ಮತ್ತು ನೀವು, ಮಾನ್ಯರೆ, ಇಂತಹ ವಿಷಯಗಳನ್ನು ನಿಲ್ಲಿಸಬಹುದು.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ರಾಜ್ಯಗಳು ಒಕ್ಕೂಟದ ಸದಸ್ಯರಾಗಿ ಪ್ರವೇಶಿಸುತ್ತಿವೆ.

**ಸರ್. ಬಿ.ಎಲ್. ಮಿಟ್ಟರ್** : ಒಂದು ಕ್ರಿಯಾಲೋಪ, ಮಾನ್ಯರೆ, ನಾನು ನನ್ನ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯುವುದಕ್ಕೆ ಕೇಳಿಕೊಂಡಿದ್ದೇನೆ. ಆದ್ದರಿಂದ, ರಾಜ್ಯವು ಈ ಅಧಿಕಾರವನ್ನು ಹೊಂದಿರಬೇಕೇ ಬೇಡವೇ ಎಂಬ ವಿಷಯವನ್ನು ಮುಂದುವರಿಸುವುದು ಬೇಕಾಗಿಲ್ಲ.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ಉದಾಹರಣೆಗೆ: ಕಥೈವಾರ್ ರಾಜ್ಯಗಳ ಪ್ರತಿನಿಧಿಗಳು, ರಾಷ್ಟ್ರಪತಿಯವರು ಈ ಅಧಿಕಾರವನ್ನು ಹೊಂದಿರಬಾರದು ಎಂಬ ಬಗ್ಗೆ ಕೆಲವು ಭಾಷಣಗಳನ್ನು ಮಾಡಿದ್ದಾರೆ.

**ಮಾನ್ಯ ಸಭಾಧ್ಯಕ್ಷರು** : ತೊಂದರೆ ಏನೆಂದರೆ, ಸರ್ ಬಿ. ಎಲ್. ಮಿಟ್ಟರ್ ಅವರು ತಮ್ಮ ತಿದ್ದುಪಡಿಯನ್ನು ಹಿಂದಕ್ಕೆ ಪಡೆದುಕೊಳ್ಳಲು ಸದನದ ಅನುಮತಿಯನ್ನು ಕೇಳಿದ್ದರೂ ಕೂಡ, ಇದನ್ನು ಬಿಟ್ಟುಬಿಡುವುದಕ್ಕೆ ಸಮ್ಮತಿ ಸೂಚಿಸಲು ಒಬ್ಬ ಸದಸ್ಯರು ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ವಿಷಯವು ಅಲ್ಲಿಯೇ ನಿಂತುಹೋಗಿದೆ.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ಒಂದು ವೇಳೆ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲು ಅನುಮತಿ ದೊರಕಿದರೆ, ಮಾಡಲಾದ ಬಹುತೇಕ ಭಾಷಣಗಳು, ಮುನ್ಷಿಯವರ ಭಾಷಣವನ್ನು ಒಳಗೊಂಡಂತೆ, ಎಲ್ಲವೂ ಅವಧಿ ಮೀರಿದ್ದಾಗಿಬಿಡುತ್ತವೆ. ಆ ವಿಷಯದಲ್ಲಿ ಒಂದು ವೇಳೆ ಸಾಮಾನ್ಯ ಒಪ್ಪಂದವಿದ್ದರೆ, ಇಲ್ಲಿ ಯಾವತ್ತೂ ಚರ್ಚೆ ನಡೆಸುವ ಅಗತ್ಯವೇ ಇರುತ್ತಿರಲಿಲ್ಲ.

ಒಕ್ಕೂಟದ ವ್ಯವಸ್ಥೆಯ ಪ್ರಥಮ ನಿಯಮ ಏನೆಂದರೆ, ಒಕ್ಕೂಟದ ಕಾನೂನು ಪ್ರತಿಯೊಬ್ಬ ಪ್ರಜೆಗೂ ಬಂಧನಕಾರಕವಾಗಿದೆ (ಪ್ರತಿಯೊಬ್ಬ ಪ್ರಜೆಯನ್ನೂ ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುತ್ತದೆ) ಮತ್ತು ಇಲ್ಲಿ ಪ್ರಜೆ ಹಾಗೂ ಒಕ್ಕೂಟದ ಸರ್ಕಾರದ ನಡುವೆ ನೇರ ಸಂಬಂಧ ಇರುತ್ತದೆ ಮತ್ತು ಒಕ್ಕೂಟದ ಕಾನೂನಿನ ಭಂಗ ಉಂಟಾದರೆ, ಒಕ್ಕೂಟದ ಪ್ರತಿನಿಧಿಗೆ, ಹೆಸರಿಸುವುದಾದರೆ, ಒಕ್ಕೂಟದ ಅಧ್ಯಕ್ಷ (ರಾಷ್ಟ್ರಪತಿ)ರು, ಒಕ್ಕೂಟದ ಕಾನೂನಿಗೆ ವಿರುದ್ಧವಾದ ಯಾವುದೇ ಅಪರಾಧವನ್ನು ಮನ್ನಿಸುವ ಸಹಜ ಹಕ್ಕನ್ನು ಹೊಂದಿರಬೇಕು. ಇದು ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯ ಮೂಲತತ್ತ್ವ. ಇಲ್ಲಿ ಸಾರ್ವಭೌಮತ್ವಕ್ಕೆ, ಪರಮಾಧಿಕಾರಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆ ಎತ್ತುವುದರಲ್ಲಿ ಯಾವುದೇ ಅರ್ಥವಿಲ್ಲ; ಏಕೆಂದರೆ, ಯಾವುದೇ ರಾಜ್ಯ ಇರಬಹುದು, ಒಂದು ಬಾರಿ ಅದು ಒಕ್ಕೂಟದಲ್ಲಿ ಸೇರುವುದಕ್ಕೆ ತನ್ನನ್ನು ಸಮರ್ಪಿಸಿಕೊಂಡ ಅನಂತರ, ಕೇಂದ್ರಕ್ಕೆ ಸಮರ್ಪಿಸಲಾದ ವಿಷಯಗಳಿಗೆ ಸಂಬಂಧಪಟ್ಟಂತೆ ಅದು ತನ್ನ ಪರಮಾಧಿಕಾರವನ್ನು ತ್ಯಾಗ ಮಾಡಬೇಕಾಗುತ್ತದೆ. ರಾಜ್ಯಗಳು ತಮ್ಮ ಬಳಿ ಇರುವ ಇತರ ಪರಮಾಧಿಕಾರಗಳಿಗೆ ತೃಪ್ತಿ

ಪಟ್ಟುಕೊಳ್ಳಬೇಕಾಗುತ್ತದೆ; ಆದರೆ, ಕೇಂದ್ರಕ್ಕೆ ತಾವು ಸಮರ್ಪಿಸಿದ ವಿಷಯಗಳಲ್ಲಿನ ಪರಮಾಧಿಕಾರವನ್ನು ಅವು ಕಳೆದುಕೊಳ್ಳಬೇಕಾಗುತ್ತದೆ, ಆ ವಿಷಯಗಳಲ್ಲಿ ನಿರ್ಬಂಧಕ್ಕೊಳಗಾಗುತ್ತವೆ. ಈ ವಿಷಯಗಳಿಗೆ ಸಂಬಂಧಪಟ್ಟಂತೆ ತಮ್ಮ ಸಾರ್ವಭೌಮತ್ವಕ್ಕೆ ಧಕ್ಕೆಯಾಯಿತು ಅಥವಾ ತಮಗೆ ಅವಮಾನ ಮಾಡಲಾಯಿತು ಎಂದು ಯಾವುದೇ ರಾಜ್ಯಾಡಳಿತ ಅಥವಾ ರಾಜ್ಯದ ಜನರು ಭಾವಿಸಬೇಕಾಗಿಲ್ಲ; ಏಕೆಂದರೆ, ಇದು ಒಕ್ಕೂಟದ ಜೋಡಣೆಯ ಬಹುಮುಖ್ಯ ಮೂಲ ಗುಣವಾಗಿದೆ. ಅಮೆರಿಕ ಒಕ್ಕೂಟದ ದೊಡ್ಡ ರಾಜ್ಯಗಳು ಈಗಲೂ ಸಹ ಅನೇಕ ವಿಷಯಗಳಲ್ಲಿ ಸಾರ್ವಭೌಮವಾಗಿವೆ (ಪರಮಾಧಿಕಾರವನ್ನು ಹೊಂದಿವೆ); ಆದರೆ ಅವು ಒಕ್ಕೂಟದ ವಲಯದಲ್ಲಿ ಸಾರ್ವಭೌಮತ್ವವನ್ನು, ಪರಮಾಧಿಕಾರವನ್ನು ಹೊಂದಿಲ್ಲ. ಇದು ಎಲ್ಲ ಒಕ್ಕೂಟದ ಸಂವಿಧಾನಗಳಲ್ಲಿ ಅಂಗೀಕೃತ ಮೂಲತತ್ತ್ವವಾಗಿದೆ. ಈ ತಿದ್ದುಪಡಿಯು ಒಕ್ಕೂಟದ ಕಾನೂನಿಗೆ ವಿರುದ್ಧವಾದ ಅಪರಾಧಗಳನ್ನು ಮಾತ್ರ ಉಲ್ಲೇಖಿಸುತ್ತದೆ. ಒಂದು ವೇಳೆ ಯಾರಿಗೇ ಆದರೂ ಯಾವುದೇ ತಕರಾರು ಇದ್ದರೂ, ಇದು ಪ್ರಾಂತ್ಯವಾಗಿರಬೇಕು; ಏಕೆಂದರೆ, ಈಗಲೂ ಸಹ, ಒಕ್ಕೂಟದ ವಿಷಯಗಳಲ್ಲಿಯೂ ಸಹ, ಪ್ರಾಂತೀಯ ಸರ್ಕಾರಗಳು ಕ್ಷಮಾದಾನದ ಅಧಿಕಾರವನ್ನು ಹೊಂದಿವೆ. ಕೇವಲ ರಾಜ್ಯಗಳನ್ನು ಒಕ್ಕೂಟದ ತಳಹದಿಯ ಮೇಲೆ ಪ್ರಾಂತ್ಯಗಳ ಮಟ್ಟಕ್ಕೆ ತರುವುದಕ್ಕಾಗಿ, ಪ್ರಾಂತ್ಯಗಳ ಪ್ರತಿನಿಧಿಗಳು, ಒಕ್ಕೂಟದ ವಿಷಯಗಳಿಗೆ ಸಂಬಂಧಿಸಿದಂತೆ ಕ್ಷಮಾದಾನ ನೀಡುವ ಅಧಿಕಾರವು ಸಂಪೂರ್ಣವಾಗಿ ಒಕ್ಕೂಟದ ರಾಷ್ಟ್ರಪತಿಯವರ ಬಳಿಯಲ್ಲಿಯೇ ಇರಬೇಕೆಂದು ಬಯಸುತ್ತಿದ್ದಾರೆ. ಒಂದು ವೇಳೆ ಇಲ್ಲಿ ಶಾಸನದ ಹಕ್ಕು ಇದ್ದರೆ, ಅದು ಪ್ರಾಂತ್ಯಗಳ ಪರವಾಗಿ ನಿಂತುಹೋಗುತ್ತದೆ. ಅವರು ಇತ್ತೀಚಿನ ಭಾರತ ಸರ್ಕಾರ ಅಧಿನಿಯಮದ ಅಡಿಯಲ್ಲಿ ಇಂದಿನವರೆಗೂ ಬಳಸುತ್ತಿರುವ ಹಕ್ಕನ್ನು ಬಿಟ್ಟುಕೊಡುತ್ತಿದ್ದಾರೆ. ಅದೇ ವೇಳೆಯಲ್ಲಿ ಅತ್ಯಂತ ಸ್ಪಷ್ಟವಾಗಿ ಅರ್ಥವಾಗಬೇಕಾಗಿರುವುದು ಏನೆಂದರೆ, ಪ್ರಾಂತೀಯ ಸಂವಿಧಾನವನ್ನು ರಚಿಸುವ ಸಂದರ್ಭದಲ್ಲಿ, ಏಕಾಭಿಪ್ರಾಯದ ವಿಷಯಗಳು ಮತ್ತು ಪ್ರಾಂತೀಯ ಪಟ್ಟಿಯ ವಿಷಯಗಳಿಗೆ ಸಂಬಂಧಪಟ್ಟಂತೆ ಪ್ರಾಂತೀಯ ರಾಜ್ಯಪಾಲರ ಬಳಿಯಲ್ಲಿ ಕ್ಷಮಾದಾನದ ಅಧಿಕಾರವನ್ನು ಇಡಬೇಕು; ಈ ವಿಷಯಗಳಿಗೆ ಸಂಬಂಧಪಟ್ಟಂತೆ, ಪ್ರಾಂತೀಯ ಸರ್ಕಾರಗಳ ಮುಖ್ಯಸ್ಥರ ಬಳಿಯಲ್ಲಿ ಕ್ಷಮಾದಾನದ ಅಧಿಕಾರವನ್ನು ಇಡುವುದಕ್ಕೆ ಸಂಬಂಧಪಟ್ಟಂತೆ ಪೂರಕ ಉಪಬಂಧವನ್ನು ಸೇರಿಸಬೇಕಾಗುತ್ತದೆ. ಯಾವುದೇ ಭಾಷಣಕಾರರು ಯಾವುದೇ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಏನನ್ನೇ ಸಲಹೆ ನೀಡಿದರೂ ಅದನ್ನು ಮುಂದಿನ ಹಂತಗಳಲ್ಲಿ ತೆಗೆದುಕೊಳ್ಳಲಾಗುವುದು ಮತ್ತು ಅದನ್ನು ಕುರಿತಾಗಿ ತಿದ್ದುಪಡಿಯನ್ನು ಮಂಡಿಸಲಾಗುವುದು ಎಂಬ ಅರ್ಥದಲ್ಲಿ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಭರವಸೆಯನ್ನು ನೀಡಿದ್ದಾರೆ. ಇದು ಪ್ರಾಂತೀಯ ವಲಯಕ್ಕೆ ಸಂಬಂಧಿಸಿದ್ದಾಗಿದೆ.

ಅನಂತರ ಉಳಿದುಕೊಂಡಿರುವ ಏಕೈಕ ವಿಷಯವೆಂದರೆ, ಮರಣದಂಡನೆಯನ್ನು ಕುರಿತಾಗಿದ್ದು. ಇದು ಹೇಗೆ ಭಾವಿಸಲ್ಪಟ್ಟಿದೆಯೆಂದರೆ, ಮರಣದಂಡನೆಗೆ ಸಂಬಂಧಪಟ್ಟಂತೆ ನೀವು ತರ್ಕಬದ್ಧವಾಗಿ ಯಾವುದೇ ಆಕ್ಷೇಪಣೆ ಮಾಡುವ ಆವಶ್ಯಕತೆ ಇಲ್ಲದಿದ್ದರೂ, ಪ್ರಾಂತ್ಯದ ಪ್ರಜೆಗಳು ಈ ದಿನದವರೆಗೂ ಈ ವಿಶೇಷ ಪ್ರಯೋಜನವನ್ನು ಅನುಭವಿಸಿದ್ದಾರೆ ಎಂಬ ವಾಸ್ತವಾಂಶ ಇದ್ದರೂ, ಕೇಂದ್ರ ಹಾಗೂ ಪ್ರಾಂತ್ಯಗಳೆರಡರಿಂದಲೂ ನೆರವನ್ನು ತೆಗೆದುಹಾಕುವ ಮೂಲಕ ಈ ವಿಶೇಷ ಪ್ರಯೋಜನವನ್ನು ಕಸಿದುಕೊಳ್ಳಬೇಕು ಎಂಬುದಕ್ಕೆ ಇಲ್ಲಿ ಯಾವುದೇ ಕಾರಣಗಳಿಲ್ಲ. ಇದುವೇ ನಾನು ಬೆಂಬಲಿಸುತ್ತಿರುವ ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರ ತಿದ್ದುಪಡಿ.

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯ ಸಭಾಧ್ಯಕ್ಷರೆ, ಸ್ವಲ್ಪ ಮಟ್ಟಿಗಿನ ನಿಗ್ರಹಿತ ಬಿಸಿಯನ್ನು ಹುಟ್ಟುಹಾಕಿದ ವಿಷಯವೊಂದನ್ನು ಕುರಿತು ಮಾತ್ರ ನಾನು ವ್ಯವಹರಿಸಲು ಬಯಸುತ್ತೇನೆ. ಅದು ಯಾವುದೆಂದರೆ, ರಕ್ಷಣೆ, ವಿದೇಶಾಂಗ ವ್ಯವಹಾರ ಹಾಗೂ ಸಂವಹನ – ಈ ಮೂರು ವಿಷಯಗಳಲ್ಲಿ ಒಕ್ಕೂಟದ ಅಧೀನದಲ್ಲಿರಲು

ಸಮ್ಮತಿಸಿರುವ ರಾಜ್ಯಗಳ ಪ್ರಕರಣವನ್ನು ನಾವು ಪರಿಗಣಿಸುತ್ತಿದ್ದೇವೆ. ಒಕ್ಕೂಟದ ಬಳಿಯಲ್ಲಿರುವ ಯಾವುದೇ ವಿಷಯದಲ್ಲಿ, ಆ ವಿಷಯಗಳಿಗೆ ಸಂಬಂಧಪಟ್ಟಂತೆ ಯಾವುದೇ ಅಪರಾಧ ಘಟಿಸಿದರೂ ಅದು ಒಕ್ಕೂಟದ ಕಾನೂನು ಪರಿಧಿಯೊಳಗೇ ಬರಬೇಕು ಎಂಬುದು ಎಲ್ಲ ಒಕ್ಕೂಟದ ಸಂವಿಧಾನಗಳ ಮೂಲತತ್ತ್ವವಾಗಿದೆ. ಒಕ್ಕೂಟದ ಬಳಿಯಲ್ಲಿರುವ ಕೆಲವು ವಿಷಯಗಳಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸುವ ಸಂಬಂಧ ಒಕ್ಕೂಟವು ನಿರ್ದಿಷ್ಟ ತೆರಿಗೆ ವಿಧಿಸುವುದನ್ನು ಅನಿವಾರ್ಯವಾಗಿಸಲಾಗಿದೆ. ವಾಸ್ತವಾಂಶದ ಪ್ರಕಾರ, ಈ ತೆರಿಗೆಗಳಿಗೆ ಸಂಬಂಧಿಸಿದ ಅಪರಾಧಗಳಲ್ಲಿ ಸಹಜವಾಗಿ ಒಕ್ಕೂಟವೇ ವ್ಯವಹರಿಸಬೇಕಾಗುತ್ತದೆ.

ಈಗ, ಮಾನ್ಯರೆ, ನಾನು ಮಂಡಿಸುತ್ತಿರುವುದು ಏನೆಂದರೆ, ರಾಜ್ಯವು ಒಕ್ಕೂಟಕ್ಕೆ ತನ್ನನ್ನು ಸಮರ್ಪಿಸಿಕೊಂಡಾಗ, ಅಂತಹ ರಾಜ್ಯಗಳು ತಮ್ಮ ಅಧಿಕಾರ ಹಾಗೂ ವಿಶೇಷಾಧಿಕಾರ (ಸಾರ್ವಭೌಮತ್ವ)ವನ್ನು ಒಕ್ಕೂಟಕ್ಕೆ ಅರ್ಪಿಸಬೇಕಾಗುತ್ತದೆ; ಆದ್ದರಿಂದ, ಆವಶ್ಯಕ ಕ್ರಮಗಳ ಮೂಲಕ, ಆ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಅಪರಾಧಗಳ ಮತ್ತು ಆ ವಿಷಯಗಳಿಗೆ ಸಂಬಂಧಿಸಿದ ತೆರಿಗೆ ವಿಧಿಸುವಿಕೆಗೆ ವಿರುದ್ಧವಾದ ಅಪರಾಧಗಳ ಕಾನೂನು ಪರಿಧಿಯನ್ನೂ ಸಹ ಸಮರ್ಪಿಸಬೇಕಾಗುತ್ತದೆ. ಒಂದು ವೇಳೆ ಇದು ವಿಷಯವಾದರೆ, ಇದು ಸ್ವಯಂಪ್ರೇರಿತವಾದ ತ್ಯಾಗದ ಕ್ರಮವಾಗಬೇಕು. ಈ ಅಧಿಕಾರದ ತ್ಯಾಗವು ಕ್ಷಮಾದಾನ ಹಾಗೂ ಶಿಕ್ಷೆಯ ಮುಂದೂಡಿಕೆಯ ವಿಶೇಷಾಧಿಕಾರದ ತ್ಯಾಗವನ್ನೂ ಒಳಗೊಂಡಿರುತ್ತದೆ ಎಂಬ ಬಗ್ಗೆ ಇಲ್ಲಿ ತಪ್ಪುಕಲ್ಪನೆ ಉಂಟಾಗಬಾರದು. ಇಂತಹ ಸನ್ನಿವೇಶದಲ್ಲಿ, ನಾನು ಮಂಡಿಸಲು ಪ್ರಾರ್ಥಿಸುವುದೇನೆಂದರೆ, ಸಂಪೂರ್ಣ ವಿವಾದ ಹಾಗೂ ಭಾವಾತಿರೇಕದ ಸಂಘರ್ಷವು ಹುಟ್ಟಿಕೊಂಡಿರುವುದು ಕೇವಲ ತಪ್ಪು ಕಲ್ಪನೆಯಿಂದ. ನಾನು ಮಂಡಿಸುವುದೇನೆಂದರೆ, ಈ ಸಮಸ್ಯೆಯನ್ನು ಆವಶ್ಯಕವಾದ ನಿರ್ದಿಷ್ಟ ಅಧಿಕಾರಗಳ ತ್ಯಾಗ ಎಂಬ ದೃಷ್ಟಿಕೋನದಿಂದ ನೋಡಿದಾಗ, ಇದು ಅನುಸರಿಸುವ ಉಪಸಿದ್ಧಾಂತವೇನೆಂದರೆ, ಕ್ಷಮಾದಾನ ಮತ್ತು ಇತರ ಅಧಿಕಾರಗಳು ಒಕ್ಕೂಟದ ರಾಷ್ಟ್ರಪತಿಯವರ ಬಳಿಯಲ್ಲಿಯೇ ಇರಬೇಕು. ಈ ವಿಷಯವನ್ನು ಕುರಿತು ನಾನು ಹೇಳಬೇಕಾಗಿರುವುದು ಇಷ್ಟೇ ಆಗಿದೆ.

**ಶ್ರೀ ಸತ್ಯನಾರಾಯಣ ಸಿನ್ಹ** (ಬಿಹಾರ : ಸಾಮಾನ್ಯ) : ಮಾನ್ಯರೆ, ಈಗ ಪ್ರಶ್ನೆಯನ್ನು ಮತಕ್ಕೆ ಹಾಕಬಹುದಾಗಿದೆ.

**ಮಾನ್ಯ ಸಭಾಧ್ಯಕ್ಷರು** : ಮುಂದಿಟ್ಟಿರುವ ವಿಷಯ :

"ಪ್ರಸ್ತಾವವನ್ನು ಈಗ ಮತಕ್ಕೆ ಹಾಕಬಹುದು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ಚರ್ಚೆಗೆ ಉತ್ತರ ನೀಡುವ ಮೂಲಕ ತುಂಬ ಕಡಿಮೆ ಹೇಳುವುದಿದೆ. ನಾನು ಮಂಡಿಸಿದ ತಿದ್ದುಪಡಿಯನ್ನು ಕುರಿತು ಕೆಲವು ಸದಸ್ಯರು ಮಾಡಿದ ಟೀಕೆಯ ಸಂದರ್ಭದಲ್ಲಿ ಎತ್ತಲಾದ ಅಂಶ(ಪ್ರಶ್ನೆ)ಗಳಿಗೆ ಇತರ ಸದಸ್ಯರು ಅತ್ಯಂತ ತೃಪ್ತಿದಾಯಕ ರೀತಿಯಲ್ಲಿ ಉತ್ತರ ನೀಡಿದ್ದಾರೆ. ಆದ್ದರಿಂದ, ಇಲ್ಲಿ ನಿಜವಾಗಿಯೂ ನಾನು ಹೇಳಬೇಕಾಗಿರುವುದು ಬಹಳ ಕಡಿಮೆ ಉಳಿದುಕೊಂಡಿದೆ.

ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರ ತಿದ್ದುಪಡಿಗೆ ಸಂಬಂಧಿಸಿದಂತೆ, ಇಲ್ಲಿ ಕೇವಲ ಎರಡು ಅಂಶಗಳನ್ನು ಮಾತ್ರ ಸೂಚಿಸಬೇಕಾಗಿದೆ. ಅವುಗಳಲ್ಲಿ ಮೊದಲನೆಯದು, ಅವರೇ ಸಲಹೆ ಮಾಡಿದಂತೆ, ಒಂದು ವೇಳೆ ಅವರ ತಿದ್ದುಪಡಿಯು ಪ್ರಾಂತ್ಯಗಳಿಗೆ ಮಾತ್ರ ಸೀಮಿತಗೊಂಡರೆ, ಪ್ರಾಂತ್ಯಗಳು ಮತ್ತು ರಾಜ್ಯಗಳ ನಡುವೆ ಭಿನ್ನತೆಯನ್ನು ಪರಿಚಯಿಸುತ್ತದೆ. ಇದು ಮೊದಲನೆಯದು. ನಾನು ಉಲ್ಲೇಖಿಸಬಹುದಾದ ಎರಡನೆಯ ಅಂಶವೇನೆಂದರೆ, ನನ್ನ ತಿದ್ದುಪಡಿಯು ಪ್ರಾಂತ್ಯಗಳಿಗೆ ಪ್ರತ್ಯೇಕವಾಗಿ ವಹಿಸುವ ಇನ್ನಷ್ಟು ಅಧಿಕಾರಗಳನ್ನು ನಾವು ಅವುಗಳಿಂದ ಹಿಂದಕ್ಕೆ ಪಡೆಯಬಹುದು; ಆದರೆ ಅದು ಸಣ್ಣ ವಿಷಯ. ಒಂದು ವೇಳೆ, ಮರಣದಂಡನೆಯ

ಪ್ರಕರಣಗಳಿಗೆ ಸಂಬಂಧಪಟ್ಟಂತೆ, ಒಕ್ಕೂಟದ ರಾಷ್ಟ್ರಪತಿಯವರು ಪ್ರಾಂತ್ಯಗಳೊಂದಿಗೆ ಮಾತ್ರ ಏಕಾಭಿಪ್ರಾಯದ ಅಧಿಕಾರ ಹೊಂದಿರಬೇಕು ಎಂಬುದನ್ನು ಸದನವು ಒಪ್ಪಿದರೆ, ಅದನ್ನು ವಿರೋಧಿಸದೇ ಇರುವವರಲ್ಲಿ ನಾನೂ ಕೂಡ ಒಬ್ಬನಾಗಿರುತ್ತೇನೆ. ಈ ವಿಷಯದಲ್ಲಿ ತಮ್ಮದೇ ಮಾರ್ಗದಲ್ಲಿ ಸಾಗುವುದಕ್ಕೆ ರಾಜ್ಯಗಳನ್ನು ಮಾತ್ರ ಬಿಡುತ್ತೇವೆ.

**ಮಾನ್ಯ ಸಭಾಧ್ಯಕ್ಷರು** : ನಾನು ಈಗ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ಮೊದಲ ತಿದ್ದುಪಡಿಯು ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರಿಂದ ಮಂಡಿಸಲ್ಪಟ್ಟಿದ್ದು, ಅದರ ಪ್ರಕಾರ, ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಮಂಡಿಸಿದ ತಿದ್ದುಪಡಿಯ ಕೊನೆಯಲ್ಲಿ ಈ ಕೆಳಗಿನದ್ದು ಸೇರ್ಪಡೆಯಾಗಬೇಕು :

"ಪ್ರಾಂತ್ಯಗಳಲ್ಲಿ ಎಲ್ಲಿಯಾದರೂ ಯಾವುದೇ ವ್ಯಕ್ತಿಯು ಮರಣದಂಡನೆಗೆ ಗುರಿಯಾದರೆ, ಅದನ್ನು (ಶಿಕ್ಷೆಯನ್ನು) ರದ್ದುಪಡಿಸುವ, ಮನ್ನಿಸುವ ಅಥವಾ ಬದಲಿಸುವ ಅಧಿಕಾರವನ್ನು ಪ್ರಾಂತ್ಯಗಳ ರಾಜ್ಯಪಾಲರು ಹೊಂದಿರುವಂತೆ, ರಾಷ್ಟ್ರಪತಿಯವರು ಹೊಂದಿರುತ್ತಾರೆ."

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಅನಂತರ, ನಾನು ಸರ್ ಗೋಪಾಲಸ್ವಾಮಿಯವರ ತಿದ್ದುಪಡಿಯನ್ನು, ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರಿಂದ ತಿದ್ದುಪಡಿಗೊಳಗಾದ ರೂಪದಲ್ಲಿ ಮತಕ್ಕೆ ಹಾಕುತ್ತೇನೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ನಾನು ಈಗ ಮೂಲ ಖಂಡವನ್ನು ತಿದ್ದುಪಡಿಗೆ ಒಳಗಾದ ರೂಪದಲ್ಲಿ ಮತಕ್ಕೆ ಹಾಕುತ್ತೇನೆ.

ಖಂಡ ೭ನ್ನು ತಿದ್ದುಪಡಿಗೊಳಗಾದ ರೂಪದಲ್ಲಿ, ಅಂಗೀಕರಿಸಲಾಯಿತು.

## ಖಂಡ – ೧೪

**ಮಾನ್ಯ ಸಭಾಧ್ಯಕ್ಷರು** : ನಾವು ಈಗ ಖಂಡ ೧೪ನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ನಾನು ಈ ಖಂಡವನ್ನು ಸದನದ ಮುಂದೆ ಈಗಾಗಲೇ ಓದಿದ್ದೇನೆ ಮತ್ತು ಇದನ್ನು ಮತ್ತೊಮ್ಮೆ ಓದಬೇಕಾದ ಅಗತ್ಯವಿಲ್ಲ ಎಂದು ನಾನು ಭಾವಿಸುತ್ತೇನೆ. ಈ ನಿರ್ದಿಷ್ಟ ಖಂಡಕ್ಕೆ ಸಂಬಂಧಪಟ್ಟಂತೆ, ಬಹಳ ದೊಡ್ಡ ಸಂಖ್ಯೆಯ ತಿದ್ದುಪಡಿಗಳು ಪಟ್ಟಿಮಾಡಲ್ಪಟ್ಟಿವೆ ಮತ್ತು ಸಹಜವಾಗಿ, ಒಂದು ವೇಳೆ ಈ ತಿದ್ದುಪಡಿಯಲ್ಲಿನ ವಿವಿಧ ದೃಷ್ಟಿಕೋನಗಳನ್ನು ಒಟ್ಟಾಗಿ ತರಲು ಸಾಧ್ಯವೇ ಎಂದು ನೋಡುವ ಮತ್ತು ಇದನ್ನು ಅವಿರೋಧವಾಗಿ ಅಂಗೀಕರಿಸುವುದಕ್ಕಾಗಿ ಒಂದು ರೀತಿಯ ಸಮ್ಮತ ಏರ್ಪಾಟನ್ನು ಇಡೀ ಸದನದ ಮುಂದೆ ತರುವ ಪ್ರಯತ್ನ ನಡೆದಿದೆ. ಮಾನ್ಯರೆ, ತೊಂದರೆಗಳ, ಬಿಕ್ಕಟ್ಟುಗಳ ಸಮ್ಮತ ಪರಿಹಾರವನ್ನು ಪ್ರತಿನಿಧಿಸುತ್ತದೆ ಎಂದು ನಾನು ಭಾವಿಸುವ ತಿದ್ದುಪಡಿಯೊಂದಕ್ಕೆ ಸೂಚನೆಯನ್ನು ಕಳುಹಿಸುವ ಅಧಿಕಾರವನ್ನು ನಾನು ಇಂದು ಬೆಳಗ್ಗೆ ಪಡೆದಿದ್ದೇನೆ ಮತ್ತು ಒಂದು ವೇಳೆ ನಾನು ಆ ನಿರ್ದಿಷ್ಟ ತಿದ್ದುಪಡಿಯನ್ನು ಮಂಡಿಸಬೇಕೆಂಬುದು ಸದನದ ಬಯಕೆಯಾದರೆ ಮತ್ತು ಒಂದು ವೇಳೆ ಅದು ಅಂಗೀಕಾರವಾದರೆ, ಇತರ ತಿದ್ದುಪಡಿಗಳನ್ನು ಮಂಡಿಸುವ ಅಗತ್ಯವಿರುವುದಿಲ್ಲ; ಇದನ್ನು ಮಂಡಿಸಲು ನಾನು ತಯಾರಾಗಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : ದಯವಿಟ್ಟು ಮಂಡಿಸಿ. ಅಥವಾ ಇತರ ತಿದ್ದುಪಡಿಗಳನ್ನು ನಾವು ತೆಗೆದುಕೊಳ್ಳಬೇಕೆಂದು ನೀವು ಭಾವಿಸುತ್ತೀರಾ?

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಒಂದು ವೇಳೆ ಇದನ್ನು ತೆಗೆದುಕೊಂಡರೆ, ನನಗನ್ನಿಸುತ್ತದೆ, ಇತರ ತಿದ್ದುಪಡಿಗಳನ್ನು ಮಂಡಿಸಬೇಕಾದ ಯಾವುದೇ ಆವಶ್ಯಕತೆ ಇರುವುದಿಲ್ಲ.

ಮಾನ್ಯರೆ, ನಾನು ಮಂಡಿಸಲು ಕೋರುತ್ತಿರುವ ತಿದ್ದುಪಡಿ ಇದು :

"ಖಂಡ ೧೪ರ ಉಪಖಂಡ (೧)ರ ಸಂಗತಿ (ಎ), (ಬಿ) ಮತ್ತು (ಸಿ)ಗಳಿಗೆ ಈ ಕೆಳಗಿನದ್ದು ಸೇರ್ಪಡೆಯಾಗಬೇಕು:

'(ಎ) ರಾಜ್ಯಗಳ ಸಮಿತಿ(ವಿಧಾನಪರಿಷತ್ತು)ಯ ಸಂಖ್ಯಾಬಲವು ಆ ರಾಜ್ಯದ ಪ್ರಜೆಗಳ ಸದನ(ವಿಧಾನ ಸಭೆ)ದ ಸಂಖ್ಯಾಬಲದ ಅರ್ಧವನ್ನು ಮೀರದಂತೆ ನಿಗದಿಯಾಗಬೇಕು. ಈ ಸಮಿತಿಯ ೨/೫ಕ್ಕಿಂತ ಕಡಿಮೆ ಸದಸ್ಯರು ಅಧಿಕಾರಿಕ ಮತಕ್ಷೇತ್ರಗಳಿಂದ ಅಥವಾ ೧೯೩೭ರ ಐರಿಷ್ ಸಂವಿಧಾನದ ಪ್ರಕರಣ ೧೮(೭)ರಲ್ಲಿನ ಉಪಬಂಧಗಳ ಆಧಾರದ ಮೇಲೆ ರಚಿತವಾದ ಪಂಚಾಯತರ ಪಟ್ಟಿಯವರ ಮತದಿಂದ ಆಯ್ಕೆಯಾಗಬೇಕು. ಸಮಿತಿಯ ಉಳಿದ ಸದಸ್ಯರು ಘಟಕಗಳನ್ನು ಪ್ರತಿನಿಧಿಸುವ ಮತಕ್ಷೇತ್ರಗಳಿಂದ ಆಯ್ಕೆಯಾಗಬೇಕು; ವಿಸ್ತಾರವಾಗಿ ಲೆಕ್ಕ ಹಾಕಲಾಗುವ ಪ್ರಮಾಣದ ಮೇಲೆ:

ಷರತ್ತು ಏನೆಂದರೆ, ಭಾರತೀಯ ರಾಜ್ಯಗಳ ಒಟ್ಟಾರೆ ಪ್ರಾತಿನಿಧ್ಯವು ಈ ಉಳಿಕೆಯ ಶೇಕಡಾ ೪೦ನ್ನು ಮೀರಬಾರದು.

**ವಿವರಣೆ :** ಘಟಕವೆಂದರೆ, ಪ್ರಾಂತ್ಯ ಅಥವಾ ಭಾರತೀಯ ರಾಜ್ಯಗಳು ತಮ್ಮ ವೈಯಕ್ತಿಕ ಹಕ್ಕಿನ ಮೂಲಕ ಒಕ್ಕೂಟದ ಸಂಸತ್ತಿಗೆ ಆಯ್ಕೆಮಾಡುವ ಸದಸ್ಯರು. ಭಾರತೀಯ ರಾಜ್ಯಗಳ ವಿಷಯದಲ್ಲಿ, ರಾಜ್ಯಗಳ ಸಮಿತಿಯ (ವಿಧಾನಪರಿಷತ್ತು) ಪ್ರತಿನಿಧಿಗಳನ್ನು ಆಯ್ಕೆಮಾಡುವ ಉದ್ದೇಶಕ್ಕಾಗಿ ಒಟ್ಟಾಗಿ ಗುಂಪನ್ನಾಗಿಸಲಾಗಿದೆ; ಇಲ್ಲಿ ಘಟಕವೆಂದರೆ, ಈ ರೀತಿ ರಚಿಸಲಾದ ಗುಂಪು.

(ಬಿ) ರಾಜ್ಯಗಳ ಸಮಿತಿ (ವಿಧಾನಪರಿಷತ್ತು)ಯಲ್ಲಿ ಪ್ರತಿ ಘಟಕದ ಪ್ರತಿನಿಧಿಗಳು ಇಂತಹ ಘಟಕದ ಶಾಸಕಾಂಗಸಭೆಯ ಚುನಾಯಿತ ಪ್ರತಿನಿಧಿಗಳಿಂದ ಆಯ್ಕೆಯಾಗುತ್ತಾರೆ ಮತ್ತು ಶಾಸಕಾಂಗಸಭೆಯು ಎರಡು ಸದನಗಳನ್ನು ಹೊಂದಿರುವ ಸಂದರ್ಭದಲ್ಲಿ, ಶಾಸಕಾಂಗಸಭೆಯ ಕೆಳಮನೆಯ ಚುನಾಯಿತ ಸದಸ್ಯರಿಂದ.

(ಸಿ) ಪ್ರಜೆಗಳ ಸದನದ ಸಂಖ್ಯಾಬಲವು ೫೦೦ಕ್ಕೆ ಮೀರದ ಹಾಗೆ ನಿಗದಿಯಾಗಬೇಕು. ಒಕ್ಕೂಟದ ಘಟಕಗಳು – ಅವು ಪ್ರಾಂತ್ಯಗಳಾಗಿರಬಹುದು, ಭಾರತೀಯ ರಾಜ್ಯಗಳಾಗಿರಬಹುದು ಅಥವಾ ರಾಜ್ಯಗಳ ಗುಂಪಾಗಿರಬಹುದು – ಮತಕ್ಷೇತ್ರಗಳಾಗಿ ವಿಂಗಡಿಸಲ್ಪಡಬೇಕು ಮತ್ತು ಪ್ರತಿ ಮತಕ್ಷೇತ್ರಕ್ಕೆ ಹಂಚಿಕೊಡಲಾಗುವ ಪ್ರತಿನಿಧಿಗಳ ಸಂಖ್ಯೆಯನ್ನು ಹೇಗೆ ನಿರ್ಧರಿಸಬೇಕೆಂದರೆ, ಪ್ರತಿ ೭,೫೦,೦೦೦ ಜನಸಂಖ್ಯೆಗೆ ಒಂದಕ್ಕಿಂತ ಕಡಿಮೆ ಇಲ್ಲದ ಪ್ರತಿನಿಧಿಗಳಿರಬೇಕು ಮತ್ತು ಪ್ರತಿ ೫,೦೦,೦೦೦ ಜನಸಂಖ್ಯೆಗೆ ಒಂದಕ್ಕಿಂತ ಹೆಚ್ಚು ಪ್ರತಿನಿಧಿಗಳಿರಬಾರದು:

ಷರತ್ತು ಏನೆಂದರೆ, ಒಟ್ಟು ಭಾರತೀಯ ರಾಜ್ಯಗಳು ಮತ್ತು ಅವುಗಳ ಒಟ್ಟು ಜನಸಂಖ್ಯೆಯ ಅನುಪಾತವು, ಪ್ರಾಂತ್ಯಗಳ ಒಟ್ಟು ಪ್ರತಿನಿಧಿಗಳು ಮತ್ತು ಅವುಗಳ ಒಟ್ಟು ಜನಸಂಖ್ಯೆಯ ಅನುಪಾತಕ್ಕಿಂತ ಅಧಿಕವಾಗಿರಬಾರದು.'

'೨. ಖಂಡ ೧೪ರ ಉಪಖಂಡ (೧)ರಲ್ಲಿ ಈ ಕೆಳಗಿನ ಹೊಸ ಸಂಗತಿ (ಇ) ಸೇರ್ಪಡೆಯಾಗಬೇಕು:

(ಇ) ರಾಜ್ಯಗಳ ಸಮಿತಿ (ವಿಧಾನಪರಿಷತ್ತು) ಮತ್ತು ರಾಜಮಾನ್ಯರ ಸದನದ ನೈಜ ಸಂಖ್ಯಾಬಲ ಮತ್ತು ಅದರ ಹಂಚಿಕೆಯು ಒಕ್ಕೂಟದ ಘಟಕಗಳ ನಡುವೆ ಹೇಗೆ ನಿಗದಿಯಾಗಿದೆ ಎಂದರೆ, ನಿರ್ಣಯದ ಸಂಖ್ಯೆ, ಅಧಿಕಾರಿಕ ಪಂಚಾಯತರ ಪಟ್ಟಿಯ ಸ್ವರೂಪ ಮತ್ತು ಸಂವಿಧಾನ ಅಥವಾ ರಾಜ್ಯಗಳ ಸಮಿತಿಯ (ವಿಧಾನಪರಿಷತ್ತು) ಮತಕ್ಷೇತ್ರಗಳು, ಎರಡು ಸದನಗಳ ಚುನಾವಣೆಯ ಉದ್ದೇಶಕ್ಕಾಗಿ ಸಣ್ಣ ರಾಜ್ಯಗಳನ್ನು ಗುಂಪಾಗಿಸಿ ಘಟಕಗಳಾಗಿ ಮಾಡುವ ವಿಧಾನ, ಎರಡು ಸದನಗಳಿಗೆ ಪ್ರಾದೇಶಿಕ ಮತಕ್ಷೇತ್ರಗಳನ್ನು ವಿಂಗಡಿಸುವುದಕ್ಕಾಗಿನ ಮೂಲತತ್ತ್ವ ಮತ್ತು ಇತರ ಅಧೀನ ವಿಷಯಗಳು ಕೇಂದ್ರ ಸಂವಿಧಾನಸಮಿತಿಗೆ ಸೂಚಿಸಲ್ಪಡಬೇಕು ಮತ್ತು ಅದರಿಂದ ಸಂಶೋಧನೆಗೊಳಪಡಬೇಕು. ಅಂತಹ ಸಂಶೋಧನೆಗಳ ಅನಂತರ, ಕೇಂದ್ರ ಸಂವಿಧಾನಸಮಿತಿಯು ಕೇಂದ್ರ ಸಂವಿಧಾನದ ಕರಡು ಮೂಲಪಾಠದಲ್ಲಿ ಸೇರಿಸಬೇಕಾದ ಈ ವಿಷಯಗಳನ್ನು ಕುರಿತಾದ ಉಪಬಂಧಗಳಿಗೆ ಸಂಬಂಧಿಸಿದಂತೆ ಸಂವಿಧಾನ ರಚನಾಸಭೆಯ ಅಧ್ಯಕ್ಷರಿಗೆ ಶಿಫಾರಸು ಮಾಡಬೇಕು."

ಮಾನ್ಯರೆ, ಈ ಕರಡು ತಿದ್ದುಪಡಿಯ ಬಹಳ ಮುಖ್ಯ ವಿಷಯಗಳನ್ನು ಕುರಿತು ಮಾತ್ರ ಗಮನ ಸೆಳೆಯಲು ಬಯಸುತ್ತೇನೆ. ಮಾನ್ಯರೆ, ಈ ತಿದ್ದುಪಡಿಯಲ್ಲಿ ನಾನು ಉಲ್ಲೇಖಿಸಲು ಬಯಸುವ ಮೊದಲ

ಅಂಶವೇನೆಂದರೆ, ನಾವು ರಾಜ್ಯಗಳ ಸಮಿತಿ (ವಿಧಾನಪರಿಷತ್ತು)ಯ ಸದಸ್ಯರ ಸಂಖ್ಯಾಬಲವನ್ನು ನಿರ್ದಿಷ್ಟವಾಗಿ ನಿಗದಿಪಡಿಸುತ್ತಿದ್ದೇವೆ ಮತ್ತು ಹಾಗೆ ಮಾಡುವಾಗ, ಈ ಸಂಖ್ಯಾಬಲವು ಪ್ರಜೆಗಳ ಸದನದ ಸಂಖ್ಯಾಬಲದ ಅರ್ಧಕ್ಕಿಂತ ಅಧಿಕವಾಗಿರಬಾರದು ಎಂದು ನಾವು ಹೇಳಿದ್ದೇವೆ. ನನಗನ್ನಿಸುತ್ತದೆ ಮಾನ್ಯರೆ, ಇದು ನಿಗದಿಪಡಿಸಲು ಯೋಗ್ಯವಾದ ಪ್ರಮಾಣವೆಂದು ಸದನವು ಒಪ್ಪಿಕೊಳ್ಳುತ್ತದೆ. ನಾವು ನಿಗದಿಪಡಿಸುತ್ತಿರುವ ಈ ಸಂಖ್ಯಾಬಲದ ಪೈಕಿ ಅಧಿಕಾರಕ ಮತಕ್ಷೇತ್ರಗಳಿಗೆ ೨೫ ಸದಸ್ಯರನ್ನು ಹಂಚಲು ನಾವು ಉದ್ದೇಶಿಸಿದ್ದೇವೆ. ನಾವು ಸದನದ ಮುಂದೆ ಮೂಲರೂಪದಲ್ಲಿ ಮಂಡಿಸಿರುವ ಕರಡಿನಲ್ಲಿ, ನೆನಪಿಡಬೇಕಾದ ಒಂದು ಅಂಶವೇನೆಂದರೆ, ಹತ್ತು ಸ್ಥಾನಗಳನ್ನು ರಾಷ್ಟ್ರಪತಿಯವರು ವಿಶ್ವವಿದ್ಯಾಲಯಗಳು ಹಾಗೂ ವೈಜ್ಞಾನಿಕ ಸಂಸ್ಥೆಗಳನ್ನು ಸಂಪರ್ಕಿಸಿ ನೇಮಕಮಾಡುತ್ತಾರೆ.

ಅಪಾರ ಸಂಖ್ಯೆಯ ಜನರಿಂದ ಭಾವಿಸಲಾದ ವಿಷಯವೇನೆಂದರೆ, ರಾಜ್ಯಗಳ ಸಮಿತಿಗೆ (ವಿಧಾನ ಪರಿಷತ್ತಿಗೆ) ಜನರನ್ನು ಆಯ್ಕೆಮಾಡಲು ಇದು ಪರಿಪೂರ್ಣ ಉಪಬಂಧವಲ್ಲ; ಏಕೆಂದರೆ, ಜನರು ವಿಶ್ವವಿದ್ಯಾಲಯಗಳು ಅಥವಾ ವೈಜ್ಞಾನಿಕ ಸಂಸ್ಥೆಗೆ ಸೇರಿಲ್ಲದೇ ಇರಬಹುದು; ಆದರೆ, ರಾಷ್ಟ್ರೀಯ ಚಟುವಟಿಕೆಗಳಲ್ಲಿ ಬಹಳ ಮುಖ್ಯವಾದ ಸಂಬಂಧವನ್ನು ಹೊಂದುವ ಮೂಲಕ ಅಧಿಕೃತ ವಿವರಣೆಯಲ್ಲಿರುವಂತೆ ಆ ಸ್ಥಾನಕ್ಕೆ ಯೋಗ್ಯವಾದ ಅರ್ಹತೆಯನ್ನು ಹೊಂದಿರಬಹುದು. ಇದಕ್ಕೆ ಸಂಬಂಧಪಟ್ಟಂತೆ, ಐರಿಷ್ ಸಂವಿಧಾನದ ಪ್ರಕರಣ ೧೮(೭)ರಲ್ಲಿ ಒಂದು ಉಲ್ಲೇಖವನ್ನು ಮಾಡಲಾಗಿದೆ. ನಿಮಗೇ ತಿಳಿದಿರುವಂತೆ, ಐರಿಷ್ ಸಂವಿಧಾನದಲ್ಲಿನ ಬಹುಪಾಲು ಶಾಸನಸಭೆಯು ಈ ವಿವರಣೆಯ ಅಧಿಕಾರಿಕ ಮತಕ್ಷೇತ್ರಗಳಿಂದ ತುಂಬಿದೆ. ಈ ಮತಕ್ಷೇತ್ರಗಳು, ಸಂಸ್ಕೃತಿ, ಶಿಕ್ಷಣ, ವಹಿವಾಟು ಹಾಗೂ ವಾಣಿಜ್ಯ, ಕೃಷಿ, ಕಾರ್ಮಿಕ, ಸಮಾಜ ಸೇವೆ ಮತ್ತು ವಿವರಣೆಯಲ್ಲಿನ ಇತರ ವಿವಿಧ ರಾಷ್ಟ್ರೀಯ ಚಟುವಟಿಕೆಯ ಪ್ರಾತಿನಿಧ್ಯಕ್ಕೆ ಸಂಬಂಧಿಸಿವೆ. ಈಗ, ಐರಿಷ್ ಸಂವಿಧಾನದಲ್ಲಿನ ಉಪಬಂಧ ಮತ್ತು ನಾವು ಇಲ್ಲಿ ಮಾಡಲು ಹೊರಟಿರುವ ಉಪಬಂಧಗಳ ನಡುವಣ ಒಂದು ಬಹುಮುಖ್ಯ ವ್ಯತ್ಯಾಸವೇನೆಂದರೆ, ಈ ತತ್ತ್ವವು ರಾಜ್ಯಗಳ ಸಮಿತಿಯ (ವಿಧಾನಪರಿಷತ್ತಿನ) ಅತ್ಯಂತ ಕಡಿಮೆ ಸಂಖ್ಯೆಯ ಸದಸ್ಯರಿಗೆ ಮಾತ್ರ ಅನ್ವಯಿಸುತ್ತದೆ. ಒಂದು ವೇಳೆ ನಾವು ಪ್ರಜೆಗಳ ಸಭೆ (ವಿಧಾನಸಭೆ)ಗಳ ಗರಿಷ್ಠ ಸಂಖ್ಯಾಬಲವನ್ನು ಐದು ನೂರಕ್ಕೆ ನಿಗದಿಪಡಿಸಿದರೆ, ರಾಜ್ಯಗಳ ಸಮಿತಿ(ವಿಧಾನ ಪರಿಷತ್ತು)ಯ ಗರಿಷ್ಠ ಸಾಮರ್ಥ್ಯವು ಎರಡು ನೂರಾ ಐವತ್ತು ಮಾತ್ರ ಆಗಬಹುದಾಗಿದೆ. ಆ ಪೈಕಿ, ನಾವು ಈ ವಿವರಣೆಯ ಮತಕ್ಷೇತ್ರಗಳ ಮೂಲಕ ಇಪ್ಪತ್ತೈದು ಸ್ಥಾನಗಳನ್ನು ತುಂಬಿದರೆ, ಅದು ಒಟ್ಟು ಸಂಖ್ಯಾಬಲದ ಶೇಕಡಾ ಹತ್ತರಷ್ಟು ಮಾತ್ರ ಆಗಲಿದ್ದು, ನಾವು ಮೂಲತಃ ಯೋಜಿಸಿದಂತೆ, ರಾಜ್ಯಗಳ ಸಮಿತಿಯ (ವಿಧಾನಪರಿಷತ್ತಿನ) ಆವಶ್ಯಕ ಸ್ವಭಾವಗಳನ್ನು ಉಳಿಸಿಕೊಂಡಂತಾಗುತ್ತದೆ. ಈ ಸಮಿತಿಯ ಬಹುತೇಕ ಸದಸ್ಯರು ಹೆಚ್ಚುಕಡಿಮೆ ಪ್ರಾದೇಶಿಕ ಆಧಾರದ ಮೇಲೆ ಘಟಕಗಳಿಂದ ಆಯ್ಕೆಯಾಗುತ್ತಾರೆ; ಆದರೆ, ಶೇಕಡಾ ಹತ್ತರಷ್ಟನ್ನೂ ಮೀರದ ಅತ್ಯಂತ ಕಡಿಮೆ ಸದಸ್ಯರು ಮಾತ್ರ ಈ ವಿಶೇಷ ವಿವರಣೆಯ ಮತಕ್ಷೇತ್ರಗಳಿಂದ ಆಯ್ಕೆಯಾಗುತ್ತಾರೆ. ಇಲ್ಲಿ ಇನ್ನೊಂದು ಮಿತಿಯೂ ಇದ್ದು, ರಾಜ್ಯಗಳ ಸಮಿತಿಯಲ್ಲಿ (ವಿಧಾನಪರಿಷತ್ತಿನಲ್ಲಿ) ಭಾರತೀಯ ರಾಜ್ಯಗಳ ಪ್ರಾತಿನಿಧ್ಯವನ್ನು ಆಧರಿಸಿದ್ದೇವೆ. ಭಾರತೀಯ ರಾಜ್ಯಗಳಿಗೆ ನೀಡಲಾದ ಒಟ್ಟೂ ಪ್ರಾತಿನಿಧ್ಯವು, ರಾಜ್ಯಗಳ ಸಮಿತಿ(ವಿಧಾನಪರಿಷತ್ತು)ಯ ಸಂಖ್ಯಾಬಲದ ಶೇಕಡಾ ೪೦ರಷ್ಟರಲ್ಲಿ ವಿಶೇಷ ಮತಕ್ಷೇತ್ರದ ಸಂಖ್ಯೆಯನ್ನು ಕಳೆದು ಉಳಿದ ಶೇಷಕ್ಕಿಂತ ಅಧಿಕವಾಗಿರಬಾರದು ಎಂದು ಈ ತಿದ್ದುಪಡಿಯು ಹೇಳುತ್ತದೆ.

ಅನಂತರ ಮಾನ್ಯರೆ, ಈ ಹೊಸ ಉಪಖಂಡದ ಸಂಗತಿ (ಬಿ)ಯನ್ನು ನಾನು ಉಲ್ಲೇಖಿಸುತ್ತೇನೆ. ವಾಸ್ತವವಾಗಿ ಇದು ಒಂದು ಪ್ರಮುಖ ವ್ಯತ್ಯಾಸವನ್ನು ಹೊರತುಪಡಿಸಿ, ಮೂಲ ಖಂಡದಲ್ಲಿನ ಸಂಗತಿ (ಬಿ)ಯನ್ನೇ ಪುನರುತ್ಪತ್ತಿಸುತ್ತದೆ; ಹೆಸರಿಸುವುದಾದರೆ, ಚುನಾವಣೆಯು ಶಾಸನಸಭೆಯ ಚುನಾಯಿತ ಸದಸ್ಯರಿಂದಲೇ ನಡೆಯಬೇಕು ಮತ್ತು ಒಂದು ವೇಳೆ, ಘಟಕ ಶಾಸನಸಭೆಯು ಎರಡು ಸದನಗಳನ್ನು

ವು ರಾಜ್ಯಗಳ ಸಮಿತಿ (ವಿಧಾನಪರಿಷತ್ತು)ಯ ಸದಸ್ಯ
ಮತ್ತು ಹಾಗೆ ಮಾಡುವಾಗ, ಈ ಸಂಖ್ಯಾಬಲವು
ಗಿರಬಾರದು ಎಂದು ನಾವು ಹೇಳಿದ್ದೇವೆ. ನನಗನ್ನಿಸುತ್ತ
ಣವೆಂದು ಸದನವು ಒಪ್ಪಿಕೊಳ್ಳುತ್ತದೆ. ನಾವು ನಿಗದಿ
ತಕ್ಷೇತ್ರಗಳಿಗೆ ೨೫ ಸದಸ್ಯರನ್ನು ಹಂಚಲು ನಾವು
ಪದಲ್ಲಿ ಮಂಡಿಸಿರುವ ಕರಡಿನಲ್ಲಿ, ನೆನಪಿಡಬೇಕಾದ
ಪತಿಯವರು ವಿಶ್ವವಿದ್ಯಾಲಯಗಳು ಹಾಗೂ ವೈ
ೆ.

ಖ್ಯೆಯ ಜನರಿಂದ ಭಾವಿಸಲಾದ ವಿಷಯವೇನೆಂದ
ನ್ನು ಆಯ್ಕೆಮಾಡಲು ಇದು ಪರಿಪೂರ್ಣ ಉಪ
ಅಥವಾ ವೈಜ್ಞಾನಿಕ ಸಂಸ್ಥೆಗೆ ಸೇರಿಲ್ಲದೇ ಇರಬಹುದು;
ದ ಸಂಬಂಧವನ್ನು ಹೊಂದುವ ಮೂಲಕ ಅಧಿಕೃತ
ರ್ಹತೆಯನ್ನು ಹೊಂದಿರಬಹುದು. ಇದಕ್ಕೆ ಸಂಬಂ
ರಲ್ಲಿ ಒಂದು ಉಲ್ಲೇಖವನ್ನು ಮಾಡಲಾಗಿದೆ.
ಬಹುಪಾಲು ಶಾಸನಸಭೆಯು ಈ ವಿವರಣೆಯ ಅಧಿ
, ಸಂಸ್ಕೃತಿ, ಶಿಕ್ಷಣ, ವಹಿವಾಟು ಹಾಗೂ ವಾಣಿಜ್ಯ,
ುಲ್ಲಿನ ಇತರ ವಿವಿಧ ರಾಷ್ಟ್ರೀಯ ಚಟುವಟಿಕೆಯ
ನದಲ್ಲಿನ ಉಪಬಂಧ ಮತ್ತು ನಾವು ಇಲ್ಲಿ ಮಾಡ
ಬಹುಮುಖ್ಯ ವ್ಯತ್ಯಾಸವೇನೆಂದರೆ, ಈ ತತ್ತ್ವವು ರಾಜ್ಯ
ಸಂಖ್ಯೆಯ ಸದಸ್ಯರಿಗೆ ಮಾತ್ರ ಅನ್ವಯಿಸುತ್ತದೆ. ಒಂ
ಗರಿಷ್ಠ ಸಂಖ್ಯಾಬಲವನ್ನು ಐದು ನೂರಕ್ಕೆ ನಿಗದಿಪಡಿ
ರಿಷ್ಠ ಸಾಮರ್ಥ್ಯವು ಎರಡು ನೂರಾ ಐವತ್ತು ಮಾತ್ರ
ಮತಕ್ಷೇತ್ರಗಳ ಮೂಲಕ ಇಪ್ಪತ್ತೈದು ಸ್ಥಾನಗಳನ್ನು ತುಂ
ಷ್ಟು ಮಾತ್ರ ಆಗಲಿದ್ದು, ನಾವು ಮೂಲತಃ ಯೋ
) ಆವಶ್ಯಕ ಸ್ವಭಾವಗಳನ್ನು ಉಳಿಸಿಕೊಂಡಂತಾಗುತ್ತದೆ.
ದೇಶಿಕ ಆಧಾರದ ಮೇಲೆ ಘಟಕಗಳಿಂದ ಆಯ್ಕೆಯಾಗು
ಕಡಿಮೆ ಸದಸ್ಯರು ಮಾತ್ರ ಈ ವಿಶೇಷ ವಿವರಣೆಯ ವ
ಮಿತಿಯೂ ಇದ್ದು, ರಾಜ್ಯಗಳ ಸಮಿತಿಯಲ್ಲಿ (ವಿಧಾನ
ಆಧರಿಸಿದ್ದೇವೆ. ಭಾರತೀಯ ರಾಜ್ಯಗಳಿಗೆ ನೀಡಲಾದ
ರಿಷತ್ತು)ಯ ಸಂಖ್ಯಾಬಲದ ಶೇಕಡಾ ೪೦ರಷ್ಟರಲ್ಲಿ
ಶೇಷಕ್ಕಿಂತ ಅಧಿಕವಾಗಿರಬಾರದು ಎಂದು ಈ ತಿದ್ದು
ಮಾನ್ಯರೆ, ಈ ಹೊಸ ಉಪಖಂಡದ ಸಂಗತಿ (ಬಿ
ದು ಒಂದು ಪ್ರಮುಖ ವ್ಯತ್ಯಾಸವನ್ನು ಹೊರತುಪಡಿ
ುನರುತ್ಪತ್ತಿಸುತ್ತದೆ; ಹೆಸರಿಸುವುದಾದರೆ, ಚುನಾವಣೆ
ನಡೆಯಬೇಕು ಮತ್ತು ಒಂದು ವೇಳೆ, ಘಟಕ ಶಾಸ



ಮನೆಯ ಚುನಾಯಿತ ಸದಸ್ಯರೆ ಮತದಾರರಾಗಿರಬೇಕು. ಪ್ರಾಯಃ ನಾನು
ಂದರೆ, ನಾನು ಇಲ್ಲಿ 'ಕೆಳಮನೆ' ಎಂಬ ಶಾಬ್ದಿಕ ವರ್ಣನೆಯನ್ನು
, ಈ ನಿರ್ದಿಷ್ಟ ಕರಡಿನ ಇತರ ಭಾಗಗಳಲ್ಲಿ ಇದೇ ಶಾಬ್ದಿಕ ವರ್ಣನೆಯನ್ನು
ೋಚಿಸಿರುವಂತೆ ಶಾಸನದ ಈ ಶಾಬ್ದಿಕ ವರ್ಣನೆಯನ್ನು ಉಳಿಸಿಕೊಳ್ಳುವ
ಇದೇ ಟೀಕೆಗೆ ಇನ್ನೊಂದು ಶಾಬ್ದಿಕ ವರ್ಣನೆಯನ್ನು ಕಂಡುಕೊಳ್ಳುವುದು

ಕೆಗಳ ಸದನದ ಗರಿಷ್ಠ ಸಂಖ್ಯಾಬಲವನ್ನು ೫೦೦ಕ್ಕೆ ನಿಗದಿಪಡಿಸಿರುವುದಕ್ಕೆ
ರರೆ, ಪ್ರಸ್ತುತ ಅಸ್ತಿತ್ವದಲ್ಲಿರುವ ಕರಡಿನಲ್ಲಿರುವ ಒಂದು ದಶಲಕ್ಷ ಮತ್ತು
ಮಿತಿಯನ್ನು ೭,೫೦,೦೦೦ ಮತ್ತು ೫,೦೦,೦೦೦ಕ್ಕೆ ಇಳಿಸಲಾಗಿದೆ.
ನೀಡಲಾದ ಸೂಚನೆಗಳಲ್ಲಿ ಹೆಚ್ಚುಕಡಿಮೆ ಎಲ್ಲವೂ ಇದೇ ವಿಷಯಗಳನ್ನು

ವು ಸಂಗತಿ (ಸಿ)ಯ ನಿಯಮಕ್ಕೆ ಬನ್ನಿ. ಬಹುಶಃ ಕೆಲವು ಜನರು ಇದು
ಗಣಿಸಬಹುದು; ಆದರೆ, ಭಯಗಳನ್ನು ಕಡಿಮೆ ಮಾಡುವುದಕ್ಕಾಗಿ, ಬಹುಶಃ
ರ್ಣನೆಯ ನಿಯಮದಲ್ಲಿ ಇದನ್ನು ಸೇರಿಸುವುದು ಅಪೇಕ್ಷಣೀಯವೆಂದು
ಸದನವು ಆವಶ್ಯಕವಾಗಿ ಸಂಪೂರ್ಣವಾಗಿ ಜನಸಂಖ್ಯೆಯನ್ನು ಆಧರಿಸಿ
ಚನಾ ಸಭೆಯಾಗಿದೆ ಮತ್ತು ಭಾರತೀಯ ರಾಜ್ಯಗಳನ್ನು ಪ್ರತಿನಿಧಿಸುವ
ಯ ರಾಜ್ಯಗಳಲ್ಲಿರುವ ಒಟ್ಟು ಜನಸಂಖ್ಯೆಯ ಅನುಪಾತವು, ಪ್ರಾಂತ್ಯಗಳನ್ನು
ಗೂ ಪ್ರಾಂತ್ಯಗಳಲ್ಲಿರುವ ಒಟ್ಟು ಜನಸಂಖ್ಯೆಯ ಅನುಪಾತವನ್ನು
ದ ಘಟಕಗಳಿಗೆ, ಅದು ಪ್ರಾಂತ್ಯವಿರಬಹುದು ಅಥವಾ ಭಾರತೀಯ
ಪಚಾರವನ್ನು ನೀಡಬೇಕೆಂದು ನಾವು ಅಪೇಕ್ಷಿಸಿದರೆ, ಆ ಉಪಚಾರವನ್ನು
ರಿಷತ್ತಿನ) ರಚನೆಯಲ್ಲಿ ಒದಗಿಸಲಾಗುವುದು.
ಸದನಗಳ ರಚನೆಗೆ ಸಂಬಂಧಪಟ್ಟಂತೆ ಕೆಲವು ಸಾಮಾನ್ಯ ಮೂಲತತ್ತ್ವಗಳನ್ನು
ಾತ್ಮಕವಾಗಿರುವುದು ಆವಶ್ಯಕ ಮತ್ತು ಭವಿಷ್ಯದಲ್ಲಿ ಕರಡು ಸಂವಿಧಾನಕ್ಕೆ
ಟ್ಟಿರಬೇಕು. ಈ ಸಂಬಂಧ ಕಠಿಣ ಕಾರ್ಯದ ಆರಂಭದ ಭಾಗದಂತೆ
ರಡು ಸದನಗಳ ನೈಜ ಸಂಖ್ಯಾಬಲದ ನಿರ್ಧಾರ, ಘಟಕಗಳ ನಡುವೆ ಈ
ನ, ವಿಶೇಷ ಮತಕ್ಷೇತ್ರಗಳ ಪ್ರಕಾರ ಹಾಗೂ ರಚನೆ ಮತ್ತು ಭಾರತೀಯ
ವಿಂಗಡಣೆಯ ಮೂಲತತ್ತ್ವಗಳು, ಇವೆಲ್ಲವೂ ಸಂವಿಧಾನವು ವಿಧಿಸಬೇಕಾದ
ಮುಖ್ಯವಾದ ಮೂಲತತ್ತ್ವಗಳಾಗಿವೆ ಮತ್ತು ಆ ಉದ್ದೇಶಕ್ಕಾಗಿ, ನಾನು
ಿಚಯಿಸಿದ್ದು, ಇದು, ಈ ಸಮಸ್ಯೆಗಳನ್ನು ವಿವರವಾಗಿ ಸಂಶೋಧಿಸುವ,
ಧಾನದಲ್ಲಿ ಅಳವಡಿಸಬಹುದಾದ ಖಂಡಗಳು ಅಥವಾ ವಿಭಾಗಗಳನ್ನು
ವನ್ನು ಕೇಂದ್ರ ಸಂವಿಧಾನ ಸಮಿತಿಗೆ ವಹಿಸುತ್ತದೆ.
ಚರ್ಚೆಗಾಗಿ ಸದನದ ಮುಂದೆ ಬರಲಿದೆ. ಕೇಂದ್ರ ಸಂವಿಧಾನಸಮಿತಿಯ
ನೀಡಲಾಗುತ್ತದೆ ಮತ್ತು ಅನಂತರ ಆ ವರದಿಯು ನಿಜವಾಗಿಯೂ
ವೇಳೆ, ಸಮಿತಿಯ ನೈಜ ಶಿಫಾರಸುಗಳನ್ನು ಕರಡಿನ ಮೂಲಗ್ರಂಥದಲ್ಲಿ
ಈ ವರದಿಯು ಸದನದಲ್ಲಿ ಚರ್ಚಿತವಾಬೇಕು ಎಂದು ನಿರ್ಧರಿಸಿದರೆ,

ಏಕೆಂದರೆ, ಕೆಲವು ರಾಜ್ಯಗಳ ಪ್ರಕರಣಗಳಲ್ಲಿ, ಆಳ್ವಿಕೆಗಾರ(ರಾಜ)ರ ಕೆಲವು ನಿರ್ದಿಷ್ಟ ಪ್ರತಿನಿಧಿಗಳು ಮತ್ತು ಜನರ ಪ್ರತಿನಿಧಿಗಳ ನಡುವೆ, ಪ್ರತಿನಿಧಿತ್ವದಲ್ಲಿ ವಿಭಾಗಗಳಿವೆ ಎಂದು ನಾನು ನಂಬಿದ್ದೇನೆ. ಈ ಎರಡೂ ಸಹ ರಾಜ್ಯವನ್ನು ಪ್ರತಿನಿಧಿಸುತ್ತವೆ; ಆದರೆ ಇಲ್ಲಿ, ವಾಸ್ತವ ಹಾಗೂ ಸಾಮಾನ್ಯಜ್ಞಾನದ ದೃಷ್ಟಿಯಲ್ಲಿ, ಈ ಎರಡು ರೀತಿಯ ಪ್ರತಿನಿಧಿಗಳಲ್ಲಿ ವ್ಯತ್ಯಾಸವಿದೆ. ಒಂದು ವೇಳೆ ನೀವು ಬಯಸಿದರೆ, ನೀವು ಇದನ್ನು ಆ ಅರ್ಹತೆ, ಯೋಗ್ಯತೆ ಅಥವಾ ತಿದ್ದುಪಡಿಯೊಂದಿಗೆ ತೆಗೆದುಕೊಳ್ಳಬಹುದು; ಆದರೆ, ನಾನು ಬಳಸಿದ ಭಾವಾರ್ಥದ ರೀತಿಯಲ್ಲಿ, ಈ ಜನಪ್ರಿಯ ಪ್ರತಿನಿಧಿಗಳ ನಡುವೆ ಬಹಳ ವ್ಯತ್ಯಾಸವಿದೆ ಎಂಬುದನ್ನು ತಿರಸ್ಕರಿಸುವ ಯಾವುದೇ ಅಂಶವಿಲ್ಲ ಮತ್ತು ಎಲ್ಲ ಪ್ರತಿನಿಧಿಗಳು ಸರ್ಕಾರ ಅಥವಾ ಆಳ್ವಿಕೆಗಾರ(ರಾಜ)ರಿಂದ ಆಯ್ಕೆಯಾಗುತ್ತಾರೆ.

**ಶ್ರೀ ಎಚ್. ಆರ್. ಗುರುವಾ ರೆಡ್ಡಿ** (ಮೈಸೂರು ರಾಜ್ಯ) : ನಾವು ಎಲ್ಲ ಚುನಾಯಿತ ವ್ಯಕ್ತಿಗಳು ಮತ್ತು ನಾಮಕರಣಗೊಂಡ ವ್ಯಕ್ತಿಗಳಲ್ಲ.

**ಡಾ. ಬಿ. ಪಟ್ಟಾಭಿ ಸೀತಾರಾಮಯ್ಯ** (ಮದ್ರಾಸ್ : ಸಾಮಾನ್ಯ) : ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಇವು ಗೌಣ ವಿಷಯಗಳು. ಅಮುಖ್ಯ ವಿಷಯಗಳು ಉದ್ಭವಿಸಬಾರದು ಮತ್ತು ಚರ್ಚಿಸಲ್ಪಡಬಾರದು ಮತ್ತು ನೀವು, ಮಾನ್ಯರೆ, ಇಂತಹ ವಿಷಯಗಳನ್ನು ನಿಲ್ಲಿಸಬಹುದು.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ರಾಜ್ಯಗಳು ಒಕ್ಕೂಟದ ಸದಸ್ಯರಾಗಿ ಪ್ರವೇಶಿಸುತ್ತಿವೆ.

**ಸರ್. ಬಿ.ಎಲ್. ಮಿಟ್ಟರ್** : ಒಂದು ಕ್ರಿಯಾಲೋಪ, ಮಾನ್ಯರೆ, ನಾನು ನನ್ನ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯುವುದಕ್ಕೆ ಕೇಳಿಕೊಂಡಿದ್ದೇನೆ. ಆದ್ದರಿಂದ, ರಾಜ್ಯವು ಈ ಅಧಿಕಾರವನ್ನು ಹೊಂದಿರಬೇಕೇ ಬೇಡವೇ ಎಂಬ ವಿಷಯವನ್ನು ಮುಂದುವರಿಸುವುದು ಬೇಕಾಗಿಲ್ಲ.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ಉದಾಹರಣೆಗೆ: ಕಥ್ಯವಾರ್ ರಾಜ್ಯಗಳ ಪ್ರತಿನಿಧಿಗಳು, ರಾಷ್ಟ್ರಪತಿಯವರು ಈ ಅಧಿಕಾರವನ್ನು ಹೊಂದಿರಬಾರದು ಎಂಬ ಬಗ್ಗೆ ಕೆಲವು ಭಾಷಣಗಳನ್ನು ಮಾಡಿದ್ದಾರೆ.

**ಮಾನ್ಯ ಸಭಾಧ್ಯಕ್ಷರು** : ತೊಂದರೆ ಏನೆಂದರೆ, ಸರ್ ಬಿ. ಎಲ್. ಮಿಟ್ಟರ್ ಅವರು ತಮ್ಮ ತಿದ್ದುಪಡಿಯನ್ನು ಹಿಂದಕ್ಕೆ ಪಡೆದುಕೊಳ್ಳಲು ಸದನದ ಅನುಮತಿಯನ್ನು ಕೇಳಿದ್ದರೂ ಕೂಡ, ಇದನ್ನು ಬಿಟ್ಟುಬಿಡುವುದಕ್ಕೆ ಸಮ್ಮತಿ ಸೂಚಿಸಲು ಒಬ್ಬ ಸದಸ್ಯರು ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ವಿಷಯವು ಅಲ್ಲಿಯೇ ನಿಂತುಹೋಗಿದೆ.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ಒಂದು ವೇಳೆ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲು ಅನುಮತಿ ದೊರಕಿದರೆ, ಮಾಡಲಾದ ಬಹುತೇಕ ಭಾಷಣಗಳು, ಮುನ್ಷಿಯವರ ಭಾಷಣವನ್ನು ಒಳಗೊಂಡಂತೆ, ಎಲ್ಲವೂ ಅವಧಿ ಮೀರಿದ್ದಾಗಿಬಿಡುತ್ತವೆ. ಆ ವಿಷಯದಲ್ಲಿ ಒಂದು ವೇಳೆ ಸಾಮಾನ್ಯ ಒಪ್ಪಂದವಿದ್ದರೆ, ಇಲ್ಲಿ ಯಾವತ್ತೂ ಚರ್ಚೆ ನಡೆಸುವ ಅಗತ್ಯವೇ ಇರುತ್ತಿರಲಿಲ್ಲ.

ಒಕ್ಕೂಟದ ವ್ಯವಸ್ಥೆಯ ಪ್ರಥಮ ನಿಯಮ ಏನೆಂದರೆ, ಒಕ್ಕೂಟದ ಕಾನೂನು ಪ್ರತಿಯೊಬ್ಬ ಪ್ರಜೆಗೂ ಬಂಧನಕಾರಕವಾಗಿದೆ (ಪ್ರತಿಯೊಬ್ಬ ಪ್ರಜೆಯನ್ನೂ ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುತ್ತದೆ) ಮತ್ತು ಇಲ್ಲಿ ಪ್ರಜೆ ಹಾಗೂ ಒಕ್ಕೂಟದ ಸರ್ಕಾರದ ನಡುವೆ ನೇರ ಸಂಬಂಧ ಇರುತ್ತದೆ ಮತ್ತು ಒಕ್ಕೂಟದ ಕಾನೂನಿನ ಭಂಗ ಉಂಟಾದರೆ, ಒಕ್ಕೂಟದ ಪ್ರತಿನಿಧಿಗೆ, ಹೆಸರಿಸುವುದಾದರೆ, ಒಕ್ಕೂಟದ ಅಧ್ಯಕ್ಷ (ರಾಷ್ಟ್ರಪತಿ)ರು, ಒಕ್ಕೂಟದ ಕಾನೂನಿಗೆ ವಿರುದ್ಧವಾದ ಯಾವುದೇ ಅಪರಾಧವನ್ನು ಮನ್ನಿಸುವ ಸಹಜ ಹಕ್ಕನ್ನು ಹೊಂದಿರಬೇಕು. ಇದು ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯ ಮೂಲತತ್ತ್ವ. ಇಲ್ಲಿ ಸಾರ್ವಭೌಮತ್ವಕ್ಕೆ, ಪರಮಾಧಿಕಾರಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆ ಎತ್ತುವುದರಲ್ಲಿ ಯಾವುದೇ ಅರ್ಥವಿಲ್ಲ; ಏಕೆಂದರೆ, ಯಾವುದೇ ರಾಜ್ಯ ಇರಬಹುದು, ಒಂದು ಬಾರಿ ಅದು ಒಕ್ಕೂಟದಲ್ಲಿ ಸೇರುವುದಕ್ಕೆ ತನ್ನನ್ನು ಸಮರ್ಪಿಸಿಕೊಂಡ ಅನಂತರ, ಕೇಂದ್ರಕ್ಕೆ ಸಮರ್ಪಿಸಲಾದ ವಿಷಯಗಳಿಗೆ ಸಂಬಂಧಪಟ್ಟಂತೆ ಅದು ತನ್ನ ಪರಮಾಧಿಕಾರವನ್ನು ತ್ಯಾಗ ಮಾಡಬೇಕಾಗುತ್ತದೆ. ರಾಜ್ಯಗಳು ತಮ್ಮ ಬಳಿ ಇರುವ ಇತರ ಪರಮಾಧಿಕಾರಗಳಿಗೆ ತೃಪ್ತಿ

ಪಟ್ಟುಕೊಳ್ಳಬೇಕಾಗುತ್ತದೆ; ಆದರೆ, ಕೇಂದ್ರಕ್ಕೆ ತಾವು ಸಮರ್ಪಿಸಿದ ವಿಷಯಗಳಲ್ಲಿನ ಪರಮಾಧಿಕಾರವನ್ನು ಅವು ಕಳೆದುಕೊಳ್ಳಬೇಕಾಗುತ್ತದೆ, ಆ ವಿಷಯಗಳಲ್ಲಿ ನಿರ್ಬಂಧಕ್ಕೊಳಗಾಗುತ್ತವೆ. ಈ ವಿಷಯಗಳಿಗೆ ಸಂಬಂಧಪಟ್ಟಂತೆ ತಮ್ಮ ಸಾರ್ವಭೌಮತ್ವಕ್ಕೆ ಧಕ್ಕೆಯಾಯಿತು ಅಥವಾ ತಮಗೆ ಅವಮಾನ ಮಾಡಲಾಯಿತು ಎಂದು ಯಾವುದೇ ರಾಜ್ಯಾಡಳಿತ ಅಥವಾ ರಾಜ್ಯದ ಜನರು ಭಾವಿಸಬೇಕಾಗಿಲ್ಲ; ಏಕೆಂದರೆ, ಇದು ಒಕ್ಕೂಟದ ಜೋಡಣೆಯ ಬಹುಮುಖ್ಯ ಮೂಲ ಗುಣವಾಗಿದೆ. ಅಮೆರಿಕ ಒಕ್ಕೂಟದ ದೊಡ್ಡ ರಾಜ್ಯಗಳು ಈಗಲೂ ಸಹ ಅನೇಕ ವಿಷಯಗಳಲ್ಲಿ ಸಾರ್ವಭೌಮವಾಗಿವೆ (ಪರಮಾಧಿಕಾರವನ್ನು ಹೊಂದಿವೆ); ಆದರೆ ಅವು ಒಕ್ಕೂಟದ ವಲಯದಲ್ಲಿ ಸಾರ್ವಭೌಮತ್ವವನ್ನು, ಪರಮಾಧಿಕಾರವನ್ನು ಹೊಂದಿಲ್ಲ. ಇದು ಎಲ್ಲ ಒಕ್ಕೂಟದ ಸಂವಿಧಾನಗಳಲ್ಲಿ ಅಂಗೀಕೃತ ಮೂಲತತ್ತ್ವವಾಗಿದೆ. ಈ ತಿದ್ದುಪಡಿಯು ಒಕ್ಕೂಟದ ಕಾನೂನಿಗೆ ವಿರುದ್ಧವಾದ ಅಪರಾಧಗಳನ್ನು ಮಾತ್ರ ಉಲ್ಲೇಖಿಸುತ್ತದೆ. ಒಂದು ವೇಳೆ ಯಾರಿಗೇ ಆದರೂ ಯಾವುದೇ ತಕರಾರು ಇದ್ದರೂ, ಇದು ಪ್ರಾಂತ್ಯವಾಗಿರಬೇಕು; ಏಕೆಂದರೆ, ಈಗಲೂ ಸಹ, ಒಕ್ಕೂಟದ ವಿಷಯಗಳಲ್ಲಿಯೂ ಸಹ, ಪ್ರಾಂತೀಯ ಸರ್ಕಾರಗಳು ಕ್ಷಮಾದಾನದ ಅಧಿಕಾರವನ್ನು ಹೊಂದಿವೆ. ಕೇವಲ ರಾಜ್ಯಗಳನ್ನು ಒಕ್ಕೂಟದ ತಳಹದಿಯ ಮೇಲೆ ಪ್ರಾಂತ್ಯಗಳ ಮಟ್ಟಕ್ಕೆ ತರುವುದಕ್ಕಾಗಿ, ಪ್ರಾಂತ್ಯಗಳ ಪ್ರತಿನಿಧಿಗಳು, ಒಕ್ಕೂಟದ ವಿಷಯಗಳಿಗೆ ಸಂಬಂಧಿಸಿದಂತೆ ಕ್ಷಮಾದಾನ ನೀಡುವ ಅಧಿಕಾರವು ಸಂಪೂರ್ಣವಾಗಿ ಒಕ್ಕೂಟದ ರಾಷ್ಟ್ರಪತಿಯವರ ಬಳಿಯಲ್ಲಿಯೇ ಇರಬೇಕೆಂದು ಬಯಸುತ್ತಿದ್ದಾರೆ. ಒಂದು ವೇಳೆ ಇಲ್ಲಿ ಶಾಸನದ ಹಕ್ಕು ಇದ್ದರೆ, ಅದು ಪ್ರಾಂತ್ಯಗಳ ಪರವಾಗಿ ನಿಂತುಹೋಗುತ್ತದೆ. ಅವರು ಇತ್ತೀಚಿನ ಭಾರತ ಸರ್ಕಾರ ಅಧಿನಿಯಮದ ಅಡಿಯಲ್ಲಿ ಇಂದಿನವರೆಗೂ ಬಳಸುತ್ತಿರುವ ಹಕ್ಕನ್ನು ಬಿಟ್ಟುಕೊಡುತ್ತಿದ್ದಾರೆ. ಅದೇ ವೇಳೆಯಲ್ಲಿ ಅತ್ಯಂತ ಸ್ಪಷ್ಟವಾಗಿ ಅರ್ಥವಾಗಬೇಕಾಗಿರುವುದು ಏನೆಂದರೆ, ಪ್ರಾಂತೀಯ ಸಂವಿಧಾನವನ್ನು ರಚಿಸುವ ಸಂದರ್ಭದಲ್ಲಿ, ಏಕಾಭಿಪ್ರಾಯದ ವಿಷಯಗಳು ಮತ್ತು ಪ್ರಾಂತೀಯ ಪಟ್ಟಿಯ ವಿಷಯಗಳಿಗೆ ಸಂಬಂಧಪಟ್ಟಂತೆ ಪ್ರಾಂತೀಯ ರಾಜ್ಯಪಾಲರ ಬಳಿಯಲ್ಲಿ ಕ್ಷಮಾದಾನದ ಅಧಿಕಾರವನ್ನು ಇಡಬೇಕು; ಈ ವಿಷಯಗಳಿಗೆ ಸಂಬಂಧಪಟ್ಟಂತೆ, ಪ್ರಾಂತೀಯ ಸರ್ಕಾರಗಳ ಮುಖ್ಯಸ್ಥರ ಬಳಿಯಲ್ಲಿ ಕ್ಷಮಾದಾನದ ಅಧಿಕಾರವನ್ನು ಇಡುವುದಕ್ಕೆ ಸಂಬಂಧಪಟ್ಟಂತೆ ಪೂರಕ ಉಪಬಂಧವನ್ನು ಸೇರಿಸಬೇಕಾಗುತ್ತದೆ. ಯಾವುದೇ ಭಾಷಣಕಾರರು ಯಾವುದೇ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಏನನ್ನೇ ಸಲಹೆ ನೀಡಿದರೂ ಅದನ್ನು ಮುಂದಿನ ಹಂತಗಳಲ್ಲಿ ತೆಗೆದುಕೊಳ್ಳಲಾಗುವುದು ಮತ್ತು ಅದನ್ನು ಕುರಿತಾಗಿ ತಿದ್ದುಪಡಿಯನ್ನು ಮಂಡಿಸಲಾಗುವುದು ಎಂಬ ಅರ್ಥದಲ್ಲಿ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಭರವಸೆಯನ್ನು ನೀಡಿದ್ದಾರೆ. ಇದು ಪ್ರಾಂತೀಯ ವಲಯಕ್ಕೆ ಸಂಬಂಧಿಸಿದ್ದಾಗಿದೆ.

ಅನಂತರ ಉಳಿದುಕೊಂಡಿರುವ ಏಕೈಕ ವಿಷಯವೆಂದರೆ, ಮರಣದಂಡನೆಯನ್ನು ಕುರಿತಾಗಿದ್ದು. ಇದು ಹೇಗೆ ಭಾವಿಸಲ್ಪಟ್ಟಿದೆಯೆಂದರೆ, ಮರಣದಂಡನೆಗೆ ಸಂಬಂಧಪಟ್ಟಂತೆ ನೀವು ತರ್ಕಬದ್ಧವಾಗಿ ಯಾವುದೇ ಆಕ್ಷೇಪಣೆ ಮಾಡುವ ಆವಶ್ಯಕತೆ ಇಲ್ಲದಿದ್ದರೂ, ಪ್ರಾಂತ್ಯದ ಪ್ರಜೆಗಳು ಈ ದಿನದವರೆಗೂ ಈ ವಿಶೇಷ ಪ್ರಯೋಜನವನ್ನು ಅನುಭವಿಸಿದ್ದಾರೆ ಎಂಬ ವಾಸ್ತವಾಂಶ ಇದ್ದರೂ, ಕೇಂದ್ರ ಹಾಗೂ ಪ್ರಾಂತ್ಯಗಳೆರಡರಿಂದಲೂ ನೆರವನ್ನು ತೆಗೆದುಹಾಕುವ ಮೂಲಕ ಈ ವಿಶೇಷ ಪ್ರಯೋಜನವನ್ನು ಕಸಿದುಕೊಳ್ಳಬೇಕು ಎಂಬುದಕ್ಕೆ ಇಲ್ಲಿ ಯಾವುದೇ ಕಾರಣಗಳಿಲ್ಲ. ಇದುವೇ ನಾನು ಬೆಂಬಲಿಸುತ್ತಿರುವ ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರ ತಿದ್ದುಪಡಿ.

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯ ಸಭಾಧ್ಯಕ್ಷರೆ, ಸ್ವಲ್ಪ ಮಟ್ಟಿಗಿನ ನಿಗ್ರಹಿತ ಬಿಸಿಯನ್ನು ಹುಟ್ಟುಹಾಕಿದ ವಿಷಯವೊಂದನ್ನು ಕುರಿತು ಮಾತ್ರ ನಾನು ವ್ಯವಹರಿಸಲು ಬಯಸುತ್ತೇನೆ. ಅದು ಯಾವುದೆಂದರೆ, ರಕ್ಷಣೆ, ವಿದೇಶಾಂಗ ವ್ಯವಹಾರ ಹಾಗೂ ಸಂವಹನ – ಈ ಮೂರು ವಿಷಯಗಳಲ್ಲಿ ಒಕ್ಕೂಟದ ಅಧೀನದಲ್ಲಿರಲು

ಸಮ್ಮತಿಸಿರುವ ರಾಜ್ಯಗಳ ಪ್ರಕರಣವನ್ನು ನಾವು ಪರಿಗಣಿಸುತ್ತಿದ್ದೇವೆ. ಒಕ್ಕೂಟದ ಬಳಿಯಲ್ಲಿರುವ ಯಾವುದೇ ವಿಷಯದಲ್ಲಿ, ಆ ವಿಷಯಗಳಿಗೆ ಸಂಬಂಧಪಟ್ಟಂತೆ ಯಾವುದೇ ಅಪರಾಧ ಘಟಿಸಿದರೂ ಅದು ಒಕ್ಕೂಟದ ಕಾನೂನು ಪರಿಧಿಯೊಳಗೇ ಬರಬೇಕು ಎಂಬುದು ಎಲ್ಲ ಒಕ್ಕೂಟದ ಸಂವಿಧಾನಗಳ ಮೂಲತತ್ತ್ವವಾಗಿದೆ. ಒಕ್ಕೂಟದ ಬಳಿಯಲ್ಲಿರುವ ಕೆಲವು ವಿಷಯಗಳಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸುವ ಸಂಬಂಧ ಒಕ್ಕೂಟವು ನಿರ್ದಿಷ್ಟ ತೆರಿಗೆ ವಿಧಿಸುವುದನ್ನು ಅನಿವಾರ್ಯವಾಗಿಸಲಾಗಿದೆ. ವಾಸ್ತವಾಂಶದ ಪ್ರಕಾರ, ಈ ತೆರಿಗೆಗಳಿಗೆ ಸಂಬಂಧಿಸಿದ ಅಪರಾಧಗಳಲ್ಲಿ ಸಹಜವಾಗಿ ಒಕ್ಕೂಟವೇ ವ್ಯವಹರಿಸಬೇಕಾಗುತ್ತದೆ.

ಈಗ, ಮಾನ್ಯರೆ, ನಾನು ಮಂಡಿಸುತ್ತಿರುವುದು ಏನೆಂದರೆ, ರಾಜ್ಯವು ಒಕ್ಕೂಟಕ್ಕೆ ತನ್ನನ್ನು ಸಮರ್ಪಿಸಿಕೊಂಡಾಗ, ಅಂತಹ ರಾಜ್ಯಗಳು ತಮ್ಮ ಅಧಿಕಾರ ಹಾಗೂ ವಿಶೇಷಾಧಿಕಾರ (ಸಾರ್ವಭೌಮತ್ವ)ವನ್ನು ಒಕ್ಕೂಟಕ್ಕೆ ಅರ್ಪಿಸಬೇಕಾಗುತ್ತದೆ; ಆದ್ದರಿಂದ, ಆವಶ್ಯಕ ಕ್ರಮಗಳ ಮೂಲಕ, ಆ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಅಪರಾಧಗಳ ಮತ್ತು ಆ ವಿಷಯಗಳಿಗೆ ಸಂಬಂಧಿಸಿದ ತೆರಿಗೆ ವಿಧಿಸುವಿಕೆಗೆ ವಿರುದ್ಧವಾದ ಅಪರಾಧಗಳ ಕಾನೂನು ಪರಿಧಿಯನ್ನೂ ಸಹ ಸಮರ್ಪಿಸಬೇಕಾಗುತ್ತದೆ. ಒಂದು ವೇಳೆ ಇದು ವಿಷಯವಾದರೆ, ಇದು ಸ್ವಯಂಪ್ರೇರಿತವಾದ ತ್ಯಾಗದ ಕ್ರಮವಾಗಬೇಕು. ಈ ಅಧಿಕಾರದ ತ್ಯಾಗವು ಕ್ಷಮಾದಾನ ಹಾಗೂ ಶಿಕ್ಷೆಯ ಮುಂದೂಡಿಕೆಯ ವಿಶೇಷಾಧಿಕಾರದ ತ್ಯಾಗವನ್ನೂ ಒಳಗೊಂಡಿರುತ್ತದೆ ಎಂಬ ಬಗ್ಗೆ ಇಲ್ಲಿ ತಪ್ಪುಕಲ್ಪನೆ ಉಂಟಾಗಬಾರದು. ಇಂತಹ ಸನ್ನಿವೇಶದಲ್ಲಿ, ನಾನು ಮಂಡಿಸಲು ಪ್ರಾರ್ಥಿಸುವುದೇನೆಂದರೆ, ಸಂಪೂರ್ಣ ವಿವಾದ ಹಾಗೂ ಭಾವಾತಿರೇಕದ ಸಂಘರ್ಷವು ಹುಟ್ಟಿಕೊಂಡಿರುವುದು ಕೇವಲ ತಪ್ಪು ಕಲ್ಪನೆಯಿಂದ. ನಾನು ಮಂಡಿಸುವುದೇನೆಂದರೆ, ಈ ಸಮಸ್ಯೆಯನ್ನು ಆವಶ್ಯಕವಾದ ನಿರ್ದಿಷ್ಟ ಅಧಿಕಾರಗಳ ತ್ಯಾಗ ಎಂಬ ದೃಷ್ಟಿಕೋನದಿಂದ ನೋಡಿದಾಗ, ಇದು ಅನುಸರಿಸುವ ಉಪಸಿದ್ಧಾಂತವೇನೆಂದರೆ, ಕ್ಷಮಾದಾನ ಮತ್ತು ಇತರ ಅಧಿಕಾರಗಳು ಒಕ್ಕೂಟದ ರಾಷ್ಟ್ರಪತಿಯವರ ಬಳಿಯಲ್ಲಿಯೇ ಇರಬೇಕು. ಈ ವಿಷಯವನ್ನು ಕುರಿತು ನಾನು ಹೇಳಬೇಕಾಗಿರುವುದು ಇಷ್ಟೇ ಆಗಿದೆ.

**ಶ್ರೀ ಸತ್ಯನಾರಾಯಣ ಸಿನ್ಹ** (ಬಿಹಾರ : ಸಾಮಾನ್ಯ) : ಮಾನ್ಯರೆ, ಈಗ ಪ್ರಶ್ನೆಯನ್ನು ಮತಕ್ಕೆ ಹಾಕಬಹುದಾಗಿದೆ.

**ಮಾನ್ಯ ಸಭಾಧ್ಯಕ್ಷರು** : ಮುಂದಿಟ್ಟಿರುವ ವಿಷಯ :

"ಪ್ರಸ್ತಾವವನ್ನು ಈಗ ಮತಕ್ಕೆ ಹಾಕಬಹುದು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ಚರ್ಚೆಗೆ ಉತ್ತರ ನೀಡುವ ಮೂಲಕ ತುಂಬ ಕಡಿಮೆ ಹೇಳುವುದಿದೆ. ನಾನು ಮಂಡಿಸಿದ ತಿದ್ದುಪಡಿಯನ್ನು ಕುರಿತು ಕೆಲವು ಸದಸ್ಯರು ಮಾಡಿದ ಟೀಕೆಯ ಸಂದರ್ಭದಲ್ಲಿ ಎತ್ತಲಾದ ಅಂಶ(ಪ್ರಶ್ನೆ)ಗಳಿಗೆ ಇತರ ಸದಸ್ಯರು ಅತ್ಯಂತ ತೃಪ್ತಿದಾಯಕ ರೀತಿಯಲ್ಲಿ ಉತ್ತರ ನೀಡಿದ್ದಾರೆ. ಆದ್ದರಿಂದ, ಇಲ್ಲಿ ನಿಜವಾಗಿಯೂ ನಾನು ಹೇಳಬೇಕಾಗಿರುವುದು ಬಹಳ ಕಡಿಮೆ ಉಳಿದುಕೊಂಡಿದೆ.

ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರ ತಿದ್ದುಪಡಿಗೆ ಸಂಬಂಧಿಸಿದಂತೆ, ಇಲ್ಲಿ ಕೇವಲ ಎರಡು ಅಂಶಗಳನ್ನು ಮಾತ್ರ ಸೂಚಿಸಬೇಕಾಗಿದೆ. ಅವುಗಳಲ್ಲಿ ಮೊದಲನೆಯದು, ಅವರೇ ಸಲಹೆ ಮಾಡಿದಂತೆ, ಒಂದು ವೇಳೆ ಅವರ ತಿದ್ದುಪಡಿಯು ಪ್ರಾಂತ್ಯಗಳಿಗೆ ಮಾತ್ರ ಸೀಮಿತಗೊಂಡರೆ, ಪ್ರಾಂತ್ಯಗಳು ಮತ್ತು ರಾಜ್ಯಗಳ ನಡುವೆ ಭಿನ್ನತೆಯನ್ನು ಪರಿಚಯಿಸುತ್ತದೆ. ಇದು ಮೊದಲನೆಯದು. ನಾನು ಉಲ್ಲೇಖಿಸಬಹುದಾದ ಎರಡನೆಯ ಅಂಶವೇನೆಂದರೆ, ನನ್ನ ತಿದ್ದುಪಡಿಯು ಪ್ರಾಂತ್ಯಗಳಿಗೆ ಪ್ರತ್ಯೇಕವಾಗಿ ವಹಿಸುವ ಇನ್ನಷ್ಟು ಅಧಿಕಾರಗಳನ್ನು ನಾವು ಅವುಗಳಿಂದ ಹಿಂದಕ್ಕೆ ಪಡೆಯಬಹುದು; ಆದರೆ ಅದು ಸಣ್ಣ ವಿಷಯ. ಒಂದು ವೇಳೆ, ಮರಣದಂಡನೆಯ

ಪ್ರಕರಣಗಳಿಗೆ ಸಂಬಂಧಪಟ್ಟಂತೆ, ಒಕ್ಕೂಟದ ರಾಷ್ಟ್ರಪತಿಯವರು ಪ್ರಾಂತ್ಯಗಳೊಂದಿಗೆ ಮಾತ್ರ ಏಕಾಭಿಪ್ರಾಯದ ಅಧಿಕಾರ ಹೊಂದಿರಬೇಕು ಎಂಬುದನ್ನು ಸದನವು ಒಪ್ಪಿದರೆ, ಅದನ್ನು ವಿರೋಧಿಸದೇ ಇರುವವರಲ್ಲಿ ನಾನೂ ಕೂಡ ಒಬ್ಬನಾಗಿರುತ್ತೇನೆ. ಈ ವಿಷಯದಲ್ಲಿ ತಮ್ಮದೇ ಮಾರ್ಗದಲ್ಲಿ ಸಾಗುವುದಕ್ಕೆ ರಾಜ್ಯಗಳನ್ನು ಮಾತ್ರ ಬಿಡುತ್ತೇವೆ.

**ಮಾನ್ಯ ಸಭಾಧ್ಯಕ್ಷರು** : ನಾನು ಈಗ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ಮೊದಲ ತಿದ್ದುಪಡಿಯು ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರಿಂದ ಮಂಡಿಸಲ್ಪಟ್ಟಿದ್ದು, ಅದರ ಪ್ರಕಾರ, ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಮಂಡಿಸಿದ ತಿದ್ದುಪಡಿಯ ಕೊನೆಯಲ್ಲಿ ಈ ಕೆಳಗಿನದ್ದು ಸೇರ್ಪಡೆಯಾಗಬೇಕು :

> "ಪ್ರಾಂತ್ಯಗಳಲ್ಲಿ ಎಲ್ಲಿಯಾದರೂ ಯಾವುದೇ ವ್ಯಕ್ತಿಯು ಮರಣದಂಡನೆಗೆ ಗುರಿಯಾದರೆ, ಅದನ್ನು (ಶಿಕ್ಷೆಯನ್ನು) ರದ್ದುಪಡಿಸುವ, ಮನ್ನಿಸುವ ಅಥವಾ ಬದಲಿಸುವ ಅಧಿಕಾರವನ್ನು ಪ್ರಾಂತ್ಯಗಳ ರಾಜ್ಯಪಾಲರು ಹೊಂದಿರುವಂತೆ, ರಾಷ್ಟ್ರಪತಿಯವರು ಹೊಂದಿರುತ್ತಾರೆ."

ಈ ತಿದ್ದುಪಡಿಯನ್ನು ಅಂಗೀಕರಿಸಲಾಯ್ತಿತು.

**ಮಾನ್ಯ ಸಭಾಧ್ಯಕ್ಷರು** : ಅನಂತರ, ನಾನು ಸರ್ ಗೋಪಾಲಸ್ವಾಮಿಯವರ ತಿದ್ದುಪಡಿಯನ್ನು, ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರಿಂದ ತಿದ್ದುಪಡಿಗೊಳಗಾದ ರೂಪದಲ್ಲಿ ಮತಕ್ಕೆ ಹಾಕುತ್ತೇನೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ನಾನು ಈಗ ಮೂಲ ಖಂಡವನ್ನು ತಿದ್ದುಪಡಿಗೆ ಒಳಗಾದ ರೂಪದಲ್ಲಿ ಮತಕ್ಕೆ ಹಾಕುತ್ತೇನೆ.

ಖಂಡ ೭ನ್ನು ತಿದ್ದುಪಡಿಗೊಳಗಾದ ರೂಪದಲ್ಲಿ, ಅಂಗೀಕರಿಸಲಾಯಿತು.

## ಖಂಡ – ೧೪

**ಮಾನ್ಯ ಸಭಾಧ್ಯಕ್ಷರು** : ನಾವು ಈಗ ಖಂಡ ೧೪ನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ನಾನು ಈ ಖಂಡವನ್ನು ಸದನದ ಮುಂದೆ ಈಗಾಗಲೇ ಓದಿದ್ದೇನೆ ಮತ್ತು ಇದನ್ನು ಮತ್ತೊಮ್ಮೆ ಓದಬೇಕಾದ ಅಗತ್ಯವಿಲ್ಲ ಎಂದು ನಾನು ಭಾವಿಸುತ್ತೇನೆ. ಈ ನಿರ್ದಿಷ್ಟ ಖಂಡಕ್ಕೆ ಸಂಬಂಧಪಟ್ಟಂತೆ, ಬಹಳ ದೊಡ್ಡ ಸಂಖ್ಯೆಯ ತಿದ್ದುಪಡಿಗಳು ಪಟ್ಟಿಮಾಡಲ್ಪಟ್ಟಿವೆ ಮತ್ತು ಸಹಜವಾಗಿ, ಒಂದು ವೇಳೆ ಈ ತಿದ್ದುಪಡಿಯಲ್ಲಿನ ವಿವಿಧ ದೃಷ್ಟಿಕೋನಗಳನ್ನು ಒಟ್ಟಾಗಿ ತರಲು ಸಾಧ್ಯವೇ ಎಂದು ನೋಡುವ ಮತ್ತು ಇದನ್ನು ಅವಿರೋಧವಾಗಿ ಅಂಗೀಕರಿಸುವುದಕ್ಕಾಗಿ ಒಂದು ರೀತಿಯ ಸಮ್ಮತ ಏರ್ಪಾಟನ್ನು ಇಡೀ ಸದನದ ಮುಂದೆ ತರುವ ಪ್ರಯತ್ನ ನಡೆದಿದೆ. ಮಾನ್ಯರೆ, ತೊಂದರೆಗಳ, ಬಿಕ್ಕಟ್ಟುಗಳ ಸಮ್ಮತ ಪರಿಹಾರವನ್ನು ಪ್ರತಿನಿಧಿಸುತ್ತದೆ ಎಂದು ನಾನು ಭಾವಿಸುವ ತಿದ್ದುಪಡಿಯೊಂದಕ್ಕೆ ಸೂಚನೆಯನ್ನು ಕಳುಹಿಸುವ ಅಧಿಕಾರವನ್ನು ನಾನು ಇಂದು ಬೆಳಗ್ಗೆ ಪಡೆದಿದ್ದೇನೆ ಮತ್ತು ಒಂದು ವೇಳೆ ನಾನು ಆ ನಿರ್ದಿಷ್ಟ ತಿದ್ದುಪಡಿಯನ್ನು ಮಂಡಿಸಬೇಕೆಂಬುದು ಸದನದ ಬಯಕೆಯಾದರೆ ಮತ್ತು ಒಂದು ವೇಳೆ ಅದು ಅಂಗೀಕಾರವಾದರೆ, ಇತರ ತಿದ್ದುಪಡಿಗಳನ್ನು ಮಂಡಿಸುವ ಅಗತ್ಯವಿರುವುದಿಲ್ಲ; ಇದನ್ನು ಮಂಡಿಸಲು ನಾನು ತಯಾರಾಗಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : ದಯವಿಟ್ಟು ಮಂಡಿಸಿ. ಅಥವಾ ಇತರ ತಿದ್ದುಪಡಿಗಳನ್ನು ನಾವು ತೆಗೆದುಕೊಳ್ಳಬೇಕೆಂದು ನೀವು ಭಾವಿಸುತ್ತೀರಾ?

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಒಂದು ವೇಳೆ ಇದನ್ನು ತೆಗೆದುಕೊಂಡರೆ, ನನಗನ್ನಿಸುತ್ತದೆ, ಇತರ ತಿದ್ದುಪಡಿಗಳನ್ನು ಮಂಡಿಸಬೇಕಾದ ಯಾವುದೇ ಆವಶ್ಯಕತೆ ಇರುವುದಿಲ್ಲ.

ಮಾನ್ಯರೆ, ನಾನು ಮಂಡಿಸಲು ಕೋರುತ್ತಿರುವ ತಿದ್ದುಪಡಿ ಇದು :

"ಖಂಡ ೧೪ರ ಉಪಖಂಡ (೧)ರ ಸಂಗತಿ (ಎ), (ಬಿ) ಮತ್ತು (ಸಿ)ಗಳಿಗೆ ಈ ಕೆಳಗಿನದ್ದು ಸೇರ್ಪಡೆಯಾಗಬೇಕು:

'(ಎ) ರಾಜ್ಯಗಳ ಸಮಿತಿ(ವಿಧಾನಪರಿಷತ್ತು)ಯ ಸಂಖ್ಯಾಬಲವು ಆ ರಾಜ್ಯದ ಪ್ರಜೆಗಳ ಸದನ(ವಿಧಾನ ಸಭೆ)ದ ಸಂಖ್ಯಾಬಲದ ಅರ್ಧವನ್ನು ಮೀರದಂತೆ ನಿಗದಿಯಾಗಬೇಕು. ಈ ಸಮಿತಿಯ ೨೫ಕ್ಕಿಂತ ಕಡಿಮೆ ಸದಸ್ಯರು ಅಧಿಕಾರಿಕ ಮತಕ್ಷೇತ್ರಗಳಿಂದ ಅಥವಾ ೧೯೩೭ರ ಐರಿಷ್ ಸಂವಿಧಾನದ ಪ್ರಕರಣ ೧೮(೭)ರಲ್ಲಿನ ಉಪಬಂಧಗಳ ಆಧಾರದ ಮೇಲೆ ರಚಿತವಾದ ಪಂಚಾಯತರ ಪಟ್ಟಿಯವರ ಮತದಿಂದ ಆಯ್ಕೆಯಾಗಬೇಕು. ಸಮಿತಿಯ ಉಳಿದ ಸದಸ್ಯರು ಘಟಕಗಳನ್ನು ಪ್ರತಿನಿಧಿಸುವ ಮತಕ್ಷೇತ್ರಗಳಿಂದ ಆಯ್ಕೆಯಾಗಬೇಕು; ವಿಸ್ತಾರವಾಗಿ ಲೆಕ್ಕ ಹಾಕಲಾಗುವ ಪ್ರಮಾಣದ ಮೇಲೆ:

ಷರತ್ತು ಏನೆಂದರೆ, ಭಾರತೀಯ ರಾಜ್ಯಗಳ ಒಟ್ಟಾರೆ ಪ್ರಾತಿನಿಧ್ಯವು ಈ ಉಳಿಕೆಯ ಶೇಕಡಾ ೪೦ನ್ನು ಮೀರಬಾರದು.

**ವಿವರಣೆ :** ಘಟಕವೆಂದರೆ, ಪ್ರಾಂತ್ಯ ಅಥವಾ ಭಾರತೀಯ ರಾಜ್ಯಗಳು ತಮ್ಮ ವೈಯಕ್ತಿಕ ಹಕ್ಕಿನ ಮೂಲಕ ಒಕ್ಕೂಟದ ಸಂಸತ್ತಿಗೆ ಆಯ್ಕೆಮಾಡುವ ಸದಸ್ಯರು. ಭಾರತೀಯ ರಾಜ್ಯಗಳ ವಿಷಯದಲ್ಲಿ, ರಾಜ್ಯಗಳ ಸಮಿತಿಯ (ವಿಧಾನಪರಿಷತ್ತು) ಪ್ರತಿನಿಧಿಗಳನ್ನು ಆಯ್ಕೆಮಾಡುವ ಉದ್ದೇಶಕ್ಕಾಗಿ ಒಟ್ಟಾಗಿ ಗುಂಪನ್ನಾಗಿಸಲಾಗಿದೆ; ಇಲ್ಲಿ ಘಟಕವೆಂದರೆ, ಈ ರೀತಿ ರಚಿಸಲಾದ ಗುಂಪು.

(ಬಿ) ರಾಜ್ಯಗಳ ಸಮಿತಿ (ವಿಧಾನಪರಿಷತ್ತು)ಯಲ್ಲಿ ಪ್ರತಿ ಘಟಕದ ಪ್ರತಿನಿಧಿಗಳು ಇಂತಹ ಘಟಕದ ಶಾಸಕಾಂಗಸಭೆಯ ಚುನಾಯಿತ ಪ್ರತಿನಿಧಿಗಳಿಂದ ಆಯ್ಕೆಯಾಗುತ್ತಾರೆ ಮತ್ತು ಶಾಸಕಾಂಗಸಭೆಯು ಎರಡು ಸದನಗಳನ್ನು ಹೊಂದಿರುವ ಸಂದರ್ಭದಲ್ಲಿ, ಶಾಸಕಾಂಗಸಭೆಯ ಕೆಳಮನೆಯ ಚುನಾಯಿತ ಸದಸ್ಯರಿಂದ.

(ಸಿ) ಪ್ರಜೆಗಳ ಸದನದ ಸಂಖ್ಯಾಬಲವು ೫೦೦ಕ್ಕೆ ಮೀರದ ಹಾಗೆ ನಿಗದಿಯಾಗಬೇಕು. ಒಕ್ಕೂಟದ ಘಟಕಗಳು – ಅವು ಪ್ರಾಂತ್ಯಗಳಾಗಿರಬಹುದು, ಭಾರತೀಯ ರಾಜ್ಯಗಳಾಗಿರಬಹುದು ಅಥವಾ ರಾಜ್ಯಗಳ ಗುಂಪಾಗಿರಬಹುದು – ಮತಕ್ಷೇತ್ರಗಳಾಗಿ ವಿಂಗಡಿಸಲ್ಪಡಬೇಕು ಮತ್ತು ಪ್ರತಿ ಮತಕ್ಷೇತ್ರಕ್ಕೆ ಹಂಚಿಕೊಡಲಾಗುವ ಪ್ರತಿನಿಧಿಗಳ ಸಂಖ್ಯೆಯನ್ನು ಹೇಗೆ ನಿರ್ಧರಿಸಬೇಕೆಂದರೆ, ಪ್ರತಿ ೭,೫೦,೦೦೦ ಜನಸಂಖ್ಯೆಗೆ ಒಂದಕ್ಕಿಂತ ಕಡಿಮೆ ಇಲ್ಲದ ಪ್ರತಿನಿಧಿಗಳಿರಬೇಕು ಮತ್ತು ಪ್ರತಿ ೫,೦೦,೦೦೦ ಜನಸಂಖ್ಯೆಗೆ ಒಂದಕ್ಕಿಂತ ಹೆಚ್ಚು ಪ್ರತಿನಿಧಿಗಳಿರಬಾರದು:

ಷರತ್ತು ಏನೆಂದರೆ, ಒಟ್ಟು ಭಾರತೀಯ ರಾಜ್ಯಗಳು ಮತ್ತು ಅವುಗಳ ಒಟ್ಟು ಜನಸಂಖ್ಯೆಯ ಅನುಪಾತವು, ಪ್ರಾಂತ್ಯಗಳ ಒಟ್ಟು ಪ್ರತಿನಿಧಿಗಳು ಮತ್ತು ಅವುಗಳ ಒಟ್ಟು ಜನಸಂಖ್ಯೆಯ ಅನುಪಾತಕ್ಕಿಂತ ಅಧಿಕವಾಗಿರಬಾರದು.'

'೨. ಖಂಡ ೧೪ರ ಉಪಖಂಡ (೧)ರಲ್ಲಿ ಈ ಕೆಳಗಿನ ಹೊಸ ಸಂಗತಿ (ಇ) ಸೇರ್ಪಡೆಯಾಗಬೇಕು:

(ಇ) ರಾಜ್ಯಗಳ ಸಮಿತಿ (ವಿಧಾನಪರಿಷತ್ತು) ಮತ್ತು ರಾಜಮಾನ್ಯರ ಸದನದ ನೈಜ ಸಂಖ್ಯಾಬಲ ಮತ್ತು ಅದರ ಹಂಚಿಕೆಯು ಒಕ್ಕೂಟದ ಘಟಕಗಳ ನಡುವೆ ಹೇಗೆ ನಿಗದಿಯಾಗಿದೆ ಎಂದರೆ, ನಿರ್ಣಯದ ಸಂಖ್ಯೆ, ಅಧಿಕಾರಿಕ ಪಂಚಾಯತರ ಪಟ್ಟಿಯ ಸ್ವರೂಪ ಮತ್ತು ಸಂವಿಧಾನ ಅಥವಾ ರಾಜ್ಯಗಳ ಸಮಿತಿಯ (ವಿಧಾನಪರಿಷತ್ತು) ಮತಕ್ಷೇತ್ರಗಳು, ಎರಡು ಸದನಗಳ ಚುನಾವಣೆಯ ಉದ್ದೇಶಕ್ಕಾಗಿ ಸಣ್ಣ ರಾಜ್ಯಗಳನ್ನು ಗುಂಪಾಗಿಸಿ ಘಟಕಗಳಾಗಿ ಮಾಡುವ ವಿಧಾನ, ಎರಡು ಸದನಗಳಿಗೆ ಪ್ರಾದೇಶಿಕ ಮತಕ್ಷೇತ್ರಗಳನ್ನು ವಿಂಗಡಿಸುವುದಕ್ಕಾಗಿನ ಮೂಲತತ್ತ್ವ ಮತ್ತು ಇತರ ಅಧೀನ ವಿಷಯಗಳು ಕೇಂದ್ರ ಸಂವಿಧಾನಸಮಿತಿಗೆ ಸೂಚಿಸಲ್ಪಡಬೇಕು ಮತ್ತು ಅದರಿಂದ ಸಂಶೋಧನೆಗೊಳಪಡಬೇಕು. ಅಂತಹ ಸಂಶೋಧನೆಗಳ ಅನಂತರ, ಕೇಂದ್ರ ಸಂವಿಧಾನಸಮಿತಿಯು ಕೇಂದ್ರ ಸಂವಿಧಾನದ ಕರಡು ಮೂಲಪಾಠದಲ್ಲಿ ಸೇರಿಸಬೇಕಾದ ಈ ವಿಷಯಗಳನ್ನು ಕುರಿತಾದ ಉಪಬಂಧಗಳಿಗೆ ಸಂಬಂಧಿಸಿದಂತೆ ಸಂವಿಧಾನ ರಚನಾಸಭೆಯ ಅಧ್ಯಕ್ಷರಿಗೆ ಶಿಫಾರಸು ಮಾಡಬೇಕು."

ಮಾನ್ಯರೆ, ಈ ಕರಡು ತಿದ್ದುಪಡಿಯ ಬಹಳ ಮುಖ್ಯ ವಿಷಯಗಳನ್ನು ಕುರಿತು ಮಾತ್ರ ಗಮನ ಸೆಳೆಯಲು ಬಯಸುತ್ತೇನೆ. ಮಾನ್ಯರೆ, ಈ ತಿದ್ದುಪಡಿಯಲ್ಲಿ ನಾನು ಉಲ್ಲೇಖಿಸಲು ಬಯಸುವ ಮೊದಲ

ಅಂಶವೇನೆಂದರೆ, ನಾವು ರಾಜ್ಯಗಳ ಸಮಿತಿ (ವಿಧಾನಪರಿಷತ್ತು)ಯ ಸದಸ್ಯರ ಸಂಖ್ಯಾಬಲವನ್ನು ನಿರ್ದಿಷ್ಟವಾಗಿ ನಿಗದಿಪಡಿಸುತ್ತಿದ್ದೇವೆ ಮತ್ತು ಹಾಗೆ ಮಾಡುವಾಗ, ಈ ಸಂಖ್ಯಾಬಲವು ಪ್ರಜೆಗಳ ಸದನದ ಸಂಖ್ಯಾಬಲದ ಅರ್ಧಕ್ಕಿಂತ ಅಧಿಕವಾಗಿರಬಾರದು ಎಂದು ನಾವು ಹೇಳಿದ್ದೇವೆ. ನನಗನ್ನಿಸುತ್ತದೆ ಮಾನ್ಯರೆ, ಇದು ನಿಗದಿಪಡಿಸಲು ಯೋಗ್ಯವಾದ ಪ್ರಮಾಣವೆಂದು ಸದನವು ಒಪ್ಪಿಕೊಳ್ಳುತ್ತದೆ. ನಾವು ನಿಗದಿಪಡಿಸುತ್ತಿರುವ ಈ ಸಂಖ್ಯಾಬಲದ ಪೈಕಿ ಅಧಿಕಾರಕ ಮತಕ್ಷೇತ್ರಗಳಿಗೆ ೨೫ ಸದಸ್ಯರನ್ನು ಹಂಚಲು ನಾವು ಉದ್ದೇಶಿಸಿದ್ದೇವೆ. ನಾವು ಸದನದ ಮುಂದೆ ಮೂಲರೂಪದಲ್ಲಿ ಮಂಡಿಸಿರುವ ಕರಡಿನಲ್ಲಿ, ನೆನಪಿಡಬೇಕಾದ ಒಂದು ಅಂಶವೇನೆಂದರೆ, ಹತ್ತು ಸ್ಥಾನಗಳನ್ನು ರಾಷ್ಟ್ರಪತಿಯವರು ವಿಶ್ವವಿದ್ಯಾಲಯಗಳು ಹಾಗೂ ವೈಜ್ಞಾನಿಕ ಸಂಸ್ಥೆಗಳನ್ನು ಸಂಪರ್ಕಿಸಿ ನೇಮಕಮಾಡುತ್ತಾರೆ.

ಅಪಾರ ಸಂಖ್ಯೆಯ ಜನರಿಂದ ಭಾವಿಸಲಾದ ವಿಷಯವೇನೆಂದರೆ, ರಾಜ್ಯಗಳ ಸಮಿತಿಗೆ (ವಿಧಾನ ಪರಿಷತ್ತಿಗೆ) ಜನರನ್ನು ಆಯ್ಕೆಮಾಡಲು ಇದು ಪರಿಪೂರ್ಣ ಉಪಬಂಧವಲ್ಲ; ಏಕೆಂದರೆ, ಜನರು ವಿಶ್ವವಿದ್ಯಾಲಯಗಳು ಅಥವಾ ವೈಜ್ಞಾನಿಕ ಸಂಸ್ಥೆಗೆ ಸೇರಿಲ್ಲದೇ ಇರಬಹುದು; ಆದರೆ, ರಾಷ್ಟ್ರೀಯ ಚಟುವಟಿಕೆಗಳಲ್ಲಿ ಬಹಳ ಮುಖ್ಯವಾದ ಸಂಬಂಧವನ್ನು ಹೊಂದುವ ಮೂಲಕ ಅಧಿಕೃತ ವಿವರಣೆಯಲ್ಲಿರುವಂತೆ ಆ ಸ್ಥಾನಕ್ಕೆ ಯೋಗ್ಯವಾದ ಅರ್ಹತೆಯನ್ನು ಹೊಂದಿರಬಹುದು. ಇದಕ್ಕೆ ಸಂಬಂಧಪಟ್ಟಂತೆ, ಐರಿಷ್ ಸಂವಿಧಾನದ ಪ್ರಕರಣ ೧೮(೭)ರಲ್ಲಿ ಒಂದು ಉಲ್ಲೇಖವನ್ನು ಮಾಡಲಾಗಿದೆ. ನಿಮಗೇ ತಿಳಿದಿರುವಂತೆ, ಐರಿಷ್ ಸಂವಿಧಾನದಲ್ಲಿನ ಬಹುಪಾಲು ಶಾಸನಸಭೆಯು ಈ ವಿವರಣೆಯ ಅಧಿಕಾರಿಕ ಮತಕ್ಷೇತ್ರಗಳಿಂದ ತುಂಬಿದೆ. ಈ ಮತಕ್ಷೇತ್ರಗಳು, ಸಂಸ್ಕೃತಿ, ಶಿಕ್ಷಣ, ವಹಿವಾಟು ಹಾಗೂ ವಾಣಿಜ್ಯ, ಕೃಷಿ, ಕಾರ್ಮಿಕ, ಸಮಾಜ ಸೇವೆ ಮತ್ತು ವಿವರಣೆಯಲ್ಲಿನ ಇತರ ವಿವಿಧ ರಾಷ್ಟ್ರೀಯ ಚಟುವಟಿಕೆಯ ಪ್ರಾತಿನಿಧ್ಯಕ್ಕೆ ಸಂಬಂಧಿಸಿವೆ. ಈಗ, ಐರಿಷ್ ಸಂವಿಧಾನದಲ್ಲಿನ ಉಪಬಂಧ ಮತ್ತು ನಾವು ಇಲ್ಲಿ ಮಾಡಲು ಹೊರಟಿರುವ ಉಪಬಂಧಗಳ ನಡುವಣ ಒಂದು ಬಹುಮುಖ್ಯ ವ್ಯತ್ಯಾಸವೇನೆಂದರೆ, ಈ ತತ್ತ್ವವು ರಾಜ್ಯಗಳ ಸಮಿತಿಯ (ವಿಧಾನಪರಿಷತ್ತಿನ) ಅತ್ಯಂತ ಕಡಿಮೆ ಸಂಖ್ಯೆಯ ಸದಸ್ಯರಿಗೆ ಮಾತ್ರ ಅನ್ವಯಿಸುತ್ತದೆ. ಒಂದು ವೇಳೆ ನಾವು ಪ್ರಜೆಗಳ ಸಭೆ (ವಿಧಾನಸಭೆ)ಗಳ ಗರಿಷ್ಠ ಸಂಖ್ಯಾಬಲವನ್ನು ಐದು ನೂರಕ್ಕೆ ನಿಗದಿಪಡಿಸಿದರೆ, ರಾಜ್ಯಗಳ ಸಮಿತಿ(ವಿಧಾನ ಪರಿಷತ್ತು)ಯ ಗರಿಷ್ಠ ಸಾಮರ್ಥ್ಯವು ಎರಡು ನೂರಾ ಐವತ್ತು ಮಾತ್ರ ಆಗಬಹುದಾಗಿದೆ. ಆ ಪೈಕಿ, ನಾವು ಈ ವಿವರಣೆಯ ಮತಕ್ಷೇತ್ರಗಳ ಮೂಲಕ ಇಪ್ಪತ್ತೈದು ಸ್ಥಾನಗಳನ್ನು ತುಂಬಿದರೆ, ಅದು ಒಟ್ಟು ಸಂಖ್ಯಾಬಲದ ಶೇಕಡಾ ಹತ್ತರಷ್ಟು ಮಾತ್ರ ಆಗಲಿದ್ದು, ನಾವು ಮೂಲತಃ ಯೋಜಿಸಿದಂತೆ, ರಾಜ್ಯಗಳ ಸಮಿತಿಯ (ವಿಧಾನಪರಿಷತ್ತಿನ) ಆವಶ್ಯಕ ಸ್ವಭಾವಗಳನ್ನು ಉಳಿಸಿಕೊಂಡಂತಾಗುತ್ತದೆ. ಈ ಸಮಿತಿಯ ಬಹುತೇಕ ಸದಸ್ಯರು ಹೆಚ್ಚುಕಡಿಮೆ ಪ್ರಾದೇಶಿಕ ಆಧಾರದ ಮೇಲೆ ಘಟಕಗಳಿಂದ ಆಯ್ಕೆಯಾಗುತ್ತಾರೆ; ಆದರೆ, ಶೇಕಡಾ ಹತ್ತರಷ್ಟನ್ನೂ ಮೀರದ ಅತ್ಯಂತ ಕಡಿಮೆ ಸದಸ್ಯರು ಮಾತ್ರ ಈ ವಿಶೇಷ ವಿವರಣೆಯ ಮತಕ್ಷೇತ್ರಗಳಿಂದ ಆಯ್ಕೆಯಾಗುತ್ತಾರೆ. ಇಲ್ಲಿ ಇನ್ನೊಂದು ಮಿತಿಯೂ ಇದ್ದು, ರಾಜ್ಯಗಳ ಸಮಿತಿಯಲ್ಲಿ (ವಿಧಾನಪರಿಷತ್ತಿನಲ್ಲಿ) ಭಾರತೀಯ ರಾಜ್ಯಗಳ ಪ್ರಾತಿನಿಧ್ಯವನ್ನು ಆಧರಿಸಿದ್ದೇವೆ. ಭಾರತೀಯ ರಾಜ್ಯಗಳಿಗೆ ನೀಡಲಾದ ಒಟ್ಟೂ ಪ್ರಾತಿನಿಧ್ಯವು, ರಾಜ್ಯಗಳ ಸಮಿತಿ(ವಿಧಾನಪರಿಷತ್ತು)ಯ ಸಂಖ್ಯಾಬಲದ ಶೇಕಡಾ ೪೦ರಷ್ಟರಲ್ಲಿ ವಿಶೇಷ ಮತಕ್ಷೇತ್ರದ ಸಂಖ್ಯೆಯನ್ನು ಕಳೆದು ಉಳಿದ ಶೇಷಕ್ಕಿಂತ ಅಧಿಕವಾಗಿರಬಾರದು ಎಂದು ಈ ತಿದ್ದುಪಡಿಯು ಹೇಳುತ್ತದೆ.

ಅನಂತರ ಮಾನ್ಯರೆ, ಈ ಹೊಸ ಉಪಖಂಡದ ಸಂಗತಿ (ಬಿ)ಯನ್ನು ನಾನು ಉಲ್ಲೇಖಿಸುತ್ತೇನೆ. ವಾಸ್ತವವಾಗಿ ಇದು ಒಂದು ಪ್ರಮುಖ ವ್ಯತ್ಯಾಸವನ್ನು ಹೊರತುಪಡಿಸಿ, ಮೂಲ ಖಂಡದಲ್ಲಿನ ಸಂಗತಿ (ಬಿ)ಯನ್ನೇ ಪುನರುತ್ಪತ್ತಿಸುತ್ತದೆ; ಹೆಸರಿಸುವುದಾದರೆ, ಚುನಾವಣೆಯು ಶಾಸನಸಭೆಯ ಚುನಾಯಿತ ಸದಸ್ಯರಿಂದಲೇ ನಡೆಯಬೇಕು ಮತ್ತು ಒಂದು ವೇಳೆ, ಘಟಕ ಶಾಸನಸಭೆಯು ಎರಡು ಸದನಗಳನ್ನು

ಹೊಂದಿದ್ದರೆ, ಶಾಸನಸಭೆಯ ಕೆಳಮನೆಯ ಚುನಾಯಿತ ಸದಸ್ಯರೆ ಮತದಾರರಾಗಿರಬೇಕು. ಪ್ರಾಯಃ ನಾನು ವಿವರಿಸಬಹುದಾದುದು ಏನೆಂದರೆ, ನಾನು ಇಲ್ಲಿ 'ಕೆಳಮನೆ' ಎಂಬ ಶಾಬ್ದಿಕ ವರ್ಣನೆಯನ್ನು ಉಳಿಸಿಕೊಂಡಿರುವುದು ಏಕೆಂದರೆ, ಈ ನಿರ್ದಿಷ್ಟ ಕರಡಿನ ಇತರ ಭಾಗಗಳಲ್ಲಿ ಇದೇ ಶಾಬ್ದಿಕ ವರ್ಣನೆಯನ್ನು ಬಳಸಲಾಗಿದೆ. ನಾವೆಲ್ಲರೂ ಯೋಚಿಸಿರುವಂತೆ ಶಾಸನದ ಈ ಶಾಬ್ದಿಕ ವರ್ಣನೆಯನ್ನು ಉಳಿಸಿಕೊಳ್ಳುವ ಯೋಚನೆಯಿರಲಿಲ್ಲ; ಆದರೆ, ಇದೇ ಟೀಕೆಗೆ ಇನ್ನೊಂದು ಶಾಬ್ದಿಕ ವರ್ಣನೆಯನ್ನು ಕಂಡುಕೊಳ್ಳುವುದು ಅಷ್ಟೊಂದು ಮುಕ್ತವಾಗಿಲ್ಲ.

ಅನಂತರ, ಮಾನ್ಯರೆ, ಪ್ರಜೆಗಳ ಸದನದ ಗರಿಷ್ಠ ಸಂಖ್ಯಾಬಲವನ್ನು ೫೦೦ಕ್ಕೆ ನಿಗದಿಪಡಿಸಿರುವುದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಪ್ರಸ್ತುತ ಅಸ್ತಿತ್ವದಲ್ಲಿರುವ ಕರಡಿನಲ್ಲಿರುವ ಒಂದು ದಶಲಕ್ಷ ಮತ್ತು ೭,೫೦,೦೦೦ದ ಜನಸಂಖ್ಯೆಯ ಮಿತಿಯನ್ನು ೭,೫೦,೦೦೦ ಮತ್ತು ೫,೦೦,೦೦೦ಕ್ಕೆ ಇಳಿಸಲಾಗಿದೆ. ಪ್ರಾಸಂಗಿಕವಾಗಿ, ತಿದ್ದುಪಡಿಗಳಿಗೆ ನೀಡಲಾದ ಸೂಚನೆಗಳಲ್ಲಿ ಹೆಚ್ಚುಕಡಿಮೆ ಎಲ್ಲವೂ ಇದೇ ವಿಷಯಗಳನ್ನು ಒಳಗೊಂಡಿದ್ದವು.

ಅನಂತರ, ಮಾನ್ಯರೆ, ನೀವು ಸಂಗತಿ (ಸಿ)ಯ ನಿಯಮಕ್ಕೆ ಬನ್ನಿ. ಬಹುಶಃ ಕೆಲವು ಜನರು ಇದು ಬಹಳ ಆವಶ್ಯಕವಲ್ಲ ಎಂದು ಪರಿಗಣಿಸಬಹುದು; ಆದರೆ, ಭಯಗಳನ್ನು ಕಡಿಮೆ ಮಾಡುವುದಕ್ಕಾಗಿ, ಬಹುಶಃ ಅನುಮಾನ, ಈ ಶಾಬ್ದಿಕ ವರ್ಣನೆಯ ನಿಯಮದಲ್ಲಿ ಇದನ್ನು ಸೇರಿಸುವುದು ಅಪೇಕ್ಷಣೀಯವೆಂದು ನಿರ್ಧರಿಸಲಾಯಿತು. ಪ್ರಜೆಗಳ ಸದನವು ಆವಶ್ಯಕವಾಗಿ ಸಂಪೂರ್ಣವಾಗಿ ಜನಸಂಖ್ಯೆಯನ್ನು ಆಧರಿಸಿ ರಚನೆಯಾಗಿರುವ ಮಂತ್ರಾಲೋಚನಾ ಸಭೆಯಾಗಿದೆ ಮತ್ತು ಭಾರತೀಯ ರಾಜ್ಯಗಳನ್ನು ಪ್ರತಿನಿಧಿಸುವ ಸದಸ್ಯರ ಸಂಖ್ಯೆ ಹಾಗೂ ಭಾರತೀಯ ರಾಜ್ಯಗಳಲ್ಲಿರುವ ಒಟ್ಟು ಜನಸಂಖ್ಯೆಯ ಅನುಪಾತವು, ಪ್ರಾಂತ್ಯಗಳನ್ನು ಪ್ರತಿನಿಧಿಸುವ ಸದಸ್ಯರು ಹಾಗೂ ಪ್ರಾಂತ್ಯಗಳಲ್ಲಿರುವ ಒಟ್ಟು ಜನಸಂಖ್ಯೆಯ ಅನುಪಾತವನ್ನು ಮೀರುವಂತಿರಬಾರದು. ಒಕ್ಕೂಟದ ಘಟಕಗಳಿಗೆ, ಅದು ಪ್ರಾಂತ್ಯವಿರಬಹುದು ಅಥವಾ ಭಾರತೀಯ ರಾಜ್ಯವಿರಬಹುದು, ವಿಶೇಷ ಉಪಚಾರವನ್ನು ನೀಡಬೇಕೆಂದು ನಾವು ಅಪೇಕ್ಷಿಸಿದರೆ, ಆ ಉಪಚಾರವನ್ನು ರಾಜ್ಯಗಳ ಸಮಿತಿಯ (ವಿಧಾನಪರಿಷತ್ತಿನ) ರಚನೆಯಲ್ಲಿ ಒದಗಿಸಲಾಗುವುದು.

ಅನಂತರ, ಮಾನ್ಯರೆ, ಎರಡು ಸದನಗಳ ರಚನೆಗೆ ಸಂಬಂಧಪಟ್ಟಂತೆ ಕೆಲವು ಸಾಮಾನ್ಯ ಮೂಲತತ್ತ್ವಗಳನ್ನು ಸೂಚಿಸಲಾಗಿದ್ದು, ಅವು ವಿಸ್ತರಣಾತ್ಮಕವಾಗಿರುವುದು ಆವಶ್ಯಕ ಮತ್ತು ಭವಿಷ್ಯದಲ್ಲಿ ಕರಡು ಸಂವಿಧಾನಕ್ಕೆ ಹೋಗುವ ರೂಪದಲ್ಲಿ ರಚಿಸಲ್ಪಟ್ಟಿರಬೇಕು. ಈ ಸಂಬಂಧ ಕಠಿಣ ಕಾರ್ಯದ ಆರಂಭದ ಭಾಗದಂತೆ ಉತ್ತಮ ವ್ಯವಹಾರವಾಗಬೇಕು; ಎರಡು ಸದನಗಳ ನೈಜ ಸಂಖ್ಯಾಬಲದ ನಿರ್ಧಾರ, ಘಟಕಗಳ ನಡುವೆ ಈ ಸಂಖ್ಯಾಬಲದ ಹಂಚಿಕೆಯ ವಿಧಾನ, ವಿಶೇಷ ಮತಕ್ಷೇತ್ರಗಳ ಪ್ರಕಾರ ಹಾಗೂ ರಚನೆ ಮತ್ತು ಭಾರತೀಯ ರಾಜ್ಯಗಳಲ್ಲಿ ಪ್ರಾದೇಶಿಕ ಮತಕ್ಷೇತ್ರಗಳ ವಿಂಗಡಣೆಯ ಮೂಲತತ್ತ್ವಗಳು, ಇವೆಲ್ಲವೂ ಸಂವಿಧಾನವು ವಿಧಿಸಬೇಕಾದ ಮೂಲಭೂತ ತತ್ತ್ವಗಳಲ್ಲಿ ಬಹಳ ಮುಖ್ಯವಾದ ಮೂಲತತ್ತ್ವಗಳಾಗಿವೆ ಮತ್ತು ಆ ಉದ್ದೇಶಕ್ಕಾಗಿ, ನಾನು ವಿಶೇಷ ಸಂಗತಿ (ಇ)ಯನ್ನು ಪರಿಚಯಿಸಿದ್ದು, ಇದು, ಈ ಸಮಸ್ಯೆಗಳನ್ನು ವಿವರವಾಗಿ ಸಂಶೋಧಿಸುವ, ಅನಂತರ ನೂತನ ಕರಡು ಸಂವಿಧಾನದಲ್ಲಿ ಅಳವಡಿಸಬಹುದಾದ ಖಂಡಗಳು ಅಥವಾ ವಿಭಾಗಗಳನ್ನು ಸೂಚಿಸುವ ಮಹತ್ತ್ವದ ಕಾರ್ಯವನ್ನು ಕೇಂದ್ರ ಸಂವಿಧಾನ ಸಮಿತಿಗೆ ವಹಿಸುತ್ತದೆ.

ಅದು ಖಂಡಿತವಾಗಿಯೂ ಚರ್ಚೆಗಾಗಿ ಸದನದ ಮುಂದೆ ಬರಲಿದೆ. ಕೇಂದ್ರ ಸಂವಿಧಾನಸಮಿತಿಯ ವರದಿಯನ್ನು ರಾಷ್ಟ್ರಪತಿಯವರಿಗೆ ನೀಡಲಾಗುತ್ತದೆ ಮತ್ತು ಅನಂತರ ಆ ವರದಿಯು ನಿಜವಾಗಿಯೂ ಸದನದ ಆಸ್ತಿಯಾಗುತ್ತದೆ. ಒಂದು ವೇಳೆ, ಸಮಿತಿಯ ನೈಜ ಶಿಫಾರಸುಗಳನ್ನು ಕರಡಿನ ಮೂಲಗ್ರಂಥದಲ್ಲಿ ಸೇರ್ಪಡೆ ಮಾಡುವುದಕ್ಕೆ ಮೊದಲು ಈ ವರದಿಯು ಸದನದಲ್ಲಿ ಚರ್ಚಿತವಾಬೇಕು ಎಂದು ನಿರ್ಧರಿಸಿದರೆ,

ಆ ಚರ್ಚೆಯನ್ನು ಮುಂದಿನ ಅಧಿವೇಶನದಲ್ಲಿ ಏರ್ಪಡಿಸಬಹುದು. ಒಂದು ವೇಳೆ, ಈ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸಂವಿಧಾನಸಮಿತಿಯ ಶಿಫಾರಸುಗಳನ್ನು ನೇರವಾಗಿ ಕೇಂದ್ರ ಸಂವಿಧಾನದ ಕರಡಿನ ಮೂಲಗ್ರಂಥದಲ್ಲಿ ಸೇರ್ಪಡೆ ಮಾಡುವುದಕ್ಕೆ ಸದನವು ಒಪ್ಪಬೇಕು ಎಂದಾದರೆ, ಇದು ಸಂವಿಧಾನದ ಮೂಲಗ್ರಂಥಕ್ಕೆ ಬಂದಾಗ, ಈ ಅವಕಾಶಗಳ ಯೋಗ್ಯತೆಯನ್ನು, ಉಪಯುಕ್ತತೆಯನ್ನು ಪರೀಕ್ಷಿಸುವುದಕ್ಕೆ ಸದನವು ಸಿದ್ಧವಿರಬೇಕು.

ಮಾನ್ಯರೆ, ನಾನು ಈ ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ನಾನು ಈ ಖಂಡಕ್ಕೆ ಅನೇಕ ತಿದ್ದುಪಡಿಗಳನ್ನು ಹೊಂದಿದ್ದೇನೆ. ನಾನು ಈಗ ಈ ತಿದ್ದುಪಡಿಗಳನ್ನು ಒಂದರ ಅನಂತರ ಒಂದರಂತೆ ತೆಗೆದುಕೊಳ್ಳುತ್ತೇನೆ.

(ಶ್ರೀಯುತರುಗಳಾದ ಜಗತ್ ನಾರಾಯಣ್ ಲಾಲ್, ಎಚ್.ವಿ. ಪಾಟಸ್ಕರ್, ಬಿ.ಎಮ್. ಗುಪ್ತೆ, ಆರ್.ಎಮ್. ನಲವಾಡೆ, ಸೇಠ್ ಗೋವಿಂದ ದಾಸ್ ಮತ್ತು ಜಿ.ಎಲ್. ಮೆಹ್ತಾ ಅವರು ತಮ್ಮ ತಿದ್ದುಪಡಿಗಳ ಸಂಖ್ಯೆ ೨೩೨ರಿಂದ ೨೩೭ನ್ನು ಮಂಡಿಸಲಿಲ್ಲ.)

**ಡಾ. ಮೋಹನ್ ಸಿನ್ಹ ಮೆಹ್ತಾ** (ಉದಯಪುರ ರಾಜ್ಯ) : ನಾನು ನನ್ನ ತಿದ್ದುಪಡಿ (ಸಂಖ್ಯೆ ೨೩೮)ಯನ್ನು ಹಿಂದಕ್ಕೆ ಪಡೆಯುತ್ತೇನೆ.

**ಬಿ.ಎಚ್. ಜೈದಿ** (ಯು.ಪಿ. ರಾಜ್ಯ) : ನಾನು ನನ್ನ ತಿದ್ದುಪಡಿ (ಸಂಖ್ಯೆ ೨೩೮)ಯನ್ನು ಹಿಂದಕ್ಕೆ ಪಡೆಯುತ್ತೇನೆ.

**ಮಹಾರಾಜ ನಾಗೇಂದ್ರ ಸಿಂಗ್** (ಪೌರಸ್ತ್ಯ ರಾಜಪುತಾನ್ ರಾಜ್ಯಗಳು) : ಮಾನ್ಯ ಸಭಾಧ್ಯಕ್ಷರೆ, ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯು ಸಣ್ಣ ರಾಜ್ಯಗಳ ದೃಷ್ಟಿಕೋನವನ್ನು, ಅಭಿಪ್ರಾಯವನ್ನು ಪ್ರಶಂಸನೀಯವಾಗಿ ಬಿಂಬಿಸುತ್ತದೆ ಮತ್ತು ಅವರು ಈ ತಿದ್ದುಪಡಿಗಾಗಿ ಅಭಿನಂದನಾರ್ಹರು; ಏಕೆಂದರೆ, ಇದು ಪರಿಣಾಮಕಾರಿ ಪ್ರಜಾಪ್ರಭುತ್ವವನ್ನು ಹುಟ್ಟುಹಾಕುತ್ತದೆ. ಅಷ್ಟಕ್ಕೂ, ಮಾನ್ಯರೆ, ಸಂವಿಧಾನದ ಶ್ರೇಷ್ಠತೆ ಹಾಗೂ ಸಮಾನತೆಯು ಬೃಹತ್ ದೇಶದಲ್ಲಿ ಅಸ್ತಿತ್ವದಲ್ಲಿರುವ ವಿವಿಧ ವಸ್ತುಗಳು ಹಾಗೂ ಹಿತಾಸಕ್ತಿಗಳಲ್ಲಿನ ಅತಿಸೂಕ್ಷ್ಮ ಗಮನದ ಚಿತ್ರಣದಲ್ಲಿದೆ. ಈ ತಿದ್ದುಪಡಿಯು ಖಂಡಿತವಾಗಿಯೂ ಈ ಉದ್ದೇಶವನ್ನು ಸಾಧಿಸುತ್ತದೆ ಮತ್ತು ನಾನು ಇದನ್ನು ಹೃದಯಪೂರ್ವಕವಾಗಿ ಬೆಂಬಲಿಸುತ್ತೇನೆ. ಆದ್ದರಿಂದ, ನಾನು ನನ್ನ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ. ಮಾನ್ಯರೆ, ಆದರೆ, ನಾನು ಮನವಿ ಮಾಡುವುದೇನೆಂದರೆ, ರಾಜ್ಯಗಳ ನಡುವೆ ಸ್ಥಾನಗಳ ಹಂಚಿಕೆಯನ್ನು ಪರಿಗಣಿಸುವುದಕ್ಕೆ ಸಂಬಂಧಪಟ್ಟಂತೆ, ಕೇಂದ್ರ ಸಂವಿಧಾನಸಮಿತಿಯಲ್ಲಿ ಸಣ್ಣ ರಾಜ್ಯಗಳ ಕೆಲವು ಪ್ರತಿನಿಧಿಗಳೂ ಸಹ ಇರಬೇಕು. ಸಣ್ಣ ರಾಜ್ಯಗಳ ಗುಂಪುಗೂಡುವಿಕೆ ಹಾಗೂ ಮತಕ್ಷೇತ್ರಗಳ ರಚನೆಯು ಈ ರಾಜ್ಯಗಳ ಮೇಲೆ ಅಪಾರ ಪರಿಣಾಮ ಬೀರುತ್ತದೆ ಮತ್ತು ಆದ್ದರಿಂದ, ಈ ರಾಜ್ಯಗಳ ದೃಷ್ಟಿಕೋನದಿಂದ, ಅವು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕಾಗಿ, ಕೇಂದ್ರ ಸಂವಿಧಾನಸಮಿತಿಯಲ್ಲಿ ಸಣ್ಣ ರಾಜ್ಯಗಳ ಪ್ರತಿನಿಧಿಗಳು ಇರುವುದು ಬಹಳ ಮುಖ್ಯವಾಗಿದೆ.

ನಾನು ನನ್ನ ತಿದ್ದುಪಡಿ(ಸಂಖ್ಯೆ ೨೩೯)ಯನ್ನು ಹಿಂದಕ್ಕೆ ಪಡೆಯುತ್ತೇನೆ.

(ಶ್ರೀಯುತರುಗಳಾದ ರಾಯ್ ಸಾಹೇಬ್ ರಘುರಾಜ್ ಸಿಂಗ್ ಮತ್ತು ಎಚ್. ಜೆ. ಖಾಂಡೇಕರ್ ಅವರು ತಮ್ಮ ತಿದ್ದುಪಡಿಗಳಾದ ಸಂಖ್ಯೆ ೨೩೯ ಮತ್ತು ೨೪೦ನ್ನು ಮಂಡಿಸಲಿಲ್ಲ.)

**ಶ್ರೀ ಹಿಮ್ಮತ್ ಸಿಂಗ್ ಕೆ. ಮಹೇಶ್ವರಿ :** ನಾನು ನನ್ನ ತಿದ್ದುಪಡಿ ಸಂಖ್ಯೆ ೨೪೧ನ್ನು ಹಿಂದಕ್ಕೆ ಪಡೆಯುತ್ತೇನೆ.
(ತಿದ್ದುಪಡಿ ಸಂಖ್ಯೆಗಳಾದ ೨೪೨ರಿಂದ ೨೬೦ ಮಂಡನೆಯಾಗಲಿಲ್ಲ.)

**ಶ್ರೀ ವಿಶ್ವಂಭರ ದಯಾಲ್ ತ್ರಿಪಾಠಿ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯರೆ, ನನ್ನ ತಿದ್ದುಪಡಿಯು ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯಲ್ಲಿಯೇ ಅಡಕವಾಗಿರುವುದರಿಂದ ಇದನ್ನು ಮಂಡಿಸಲು ನಾನು ಉದ್ದೇಶಿಸಿಲ್ಲ.

(ತಿದ್ದುಪಡಿ ಸಂಖ್ಯೆ ೨೬೨ ಮಂಡನೆಯಾಗಲಿಲ್ಲ.)

(ಶ್ರೀ ವಿ.ಟಿ. ಕೃಷ್ಣಮಾಚಾರಿಯವರು ತಮ್ಮ ತಿದ್ದುಪಡಿ ಸಂಖ್ಯೆ ೨೬೩ನ್ನು ಮಂಡಿಸಲಿಲ್ಲ.)

**ಮಾನ್ಯ ಸಭಾಧ್ಯಕ್ಷರು** : ಇತರ ಯಾವುದೇ ಮಂತ್ರಿಗಳು ತಿದ್ದುಪಡಿಯನ್ನು ಮಂಡಿಸುವುದಿಲ್ಲವೆಂದು ನಾನು ತೆಗೆದುಕೊಳ್ಳುತ್ತೇನೆ.

**ಶ್ರೀ ವಿ.ಟಿ. ಕೃಷ್ಣಮಾಚಾರಿ** (ಜೈಪುರ ರಾಜ್ಯ) : ಹೌದು.

(ತಿದ್ದುಪಡಿ ಸಂಖ್ಯೆಗಳಾದ ೨೬೪ರಿಂದ ೨೭೧ ಮಂಡನೆಯಾಗಲಿಲ್ಲ.)

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯ ಸಭಾಧ್ಯಕ್ಷರೆ, ನಾನು ಮಂಡಿಸಲು ಪ್ರಾರ್ಥಿಸುತ್ತೇನೆ :

"ಖಂಡ ೧೪ರ ಉಪಖಂಡ (೨) ಅನ್ನು ತೆಗೆದುಹಾಕಬೇಕು."

ಈ ತಿದ್ದುಪಡಿಗೆ ಅತ್ಯಂತ ಸರಳವಾದ ಕಾರಣವೇನೆಂದರೆ, ಈ ಉಪಖಂಡವು ಸೂಚಿಸುವ ಅನುಸೂಚಿಯು ಇದುವರೆಗೂ ಅಸ್ತಿತ್ವದಲ್ಲಿಲ್ಲ. ಒಂದು ವೇಳೆ ನಾವು ಉಪಖಂಡ (೨)ನ್ನು ಅಂಗೀಕರಿಸಿದರೆ, ಇದು ಖಾಲಿ ಧನಾದೇಶ (ಚೆಕ್)ಕ್ಕೆ ಸಹಿ ಮಾಡಿದಂತೆ ಅಥವಾ ಅನುಸೂಚಿಯಿಲ್ಲದೇ ದಸ್ತಾವೇಜನ್ನು ವರ್ಗಾಯಿಸಿದಂತೆ ಆಗುತ್ತದೆ. ನಾನು ಮಂಡಿಸುವುದೇನೆಂದರೆ, ಇದು ಮಾಡುವುದಕ್ಕೆ ಕಷ್ಟದಾಯಕವಾದ ವಿಷಯವಾಗಿದೆ.

ಅನಂತರ, ನಾನು ಕಂಡುಕೊಂಡಿದ್ದೇನೆ, ನನ್ನ ಗೌರವಾನ್ವಿತ ಸ್ನೇಹಿತರಾದ ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯ ಅನಂತರ ಈ ತಿದ್ದುಪಡಿಯು ಅಸಂಗತ ಸ್ಥಾನದಲ್ಲಿದೆ. ಅಪಾರ ಸಂಖ್ಯೆಯಲ್ಲಿ ನಾವು ತಿದ್ದುಪಡಿಗಳ ಸೂಚನೆಯನ್ನು ನೀಡಿದ ಅನಂತರ ಮೂಲಖಂಡವನ್ನು ಮರುರಚಿಸಲಾಗಿದೆ ಮತ್ತು ಸದನದಲ್ಲಿ ಚರ್ಚೆಗಾಗಿ ಇಡಲಾಗಿದೆ. ನಮಗೆ ಕರಡನ್ನು ಪರಿಗಣಿಸುವ ಅವಕಾಶವೇ ದೊರಕಲಿಲ್ಲ. ಪರಿಗಣನೆಗಾಗಿ ಮಂಡಿಸಲಾಗಿರುವ ಪರಿಷ್ಕೃತ ಕರಡಿಗೆ ನನ್ನ ನಿರ್ದಿಷ್ಟ ಅಭ್ಯಂತರವೇನೂ ಇಲ್ಲ. ಆದರೆ, ಈ ಪ್ರಮುಖವಾದ ವಿಷಯವನ್ನು ಪರಿಗಣಿಸುವುದಕ್ಕೆ ಬಹುಶಃ ನಮಗೆ ಇನ್ನಷ್ಟು ಸಮಯಾವಕಾಶ ನೀಡಬೇಕು ಎಂದು ನಾನು ಈಗಲೂ ಭಾವಿಸುತ್ತೇನೆ. ಸಂವಿಧಾನದ ಮುಖ್ಯವಾದ ಮೂಲತತ್ತ್ವಗಳನ್ನು ಒಳಗೊಂಡಿರುವ, ಇಂತಹ ಜಟಿಲ ಸ್ವಭಾವದ ಕರಡನ್ನು ಇಷ್ಟೊಂದು ಸರಳವಾಗಿ ಕ್ಷಣಮಾತ್ರದ ಸೂಚನೆಯೊಂದಿಗೆ ನಿರ್ವಹಿಸಬಾರದು. ಆದ್ದರಿಂದ ನಾನು ಗೌರವಪೂರ್ವಕವಾಗಿ ತಿಳಿಸುವುದೇನೆಂದರೆ, ಇತರ ಯಾವುದೇ ಪ್ರಮುಖ ವಿಷಯಗಳಲ್ಲಿ ನೀಡಲಾಗುವಂತೆ, ಈ ವಿಷಯದ ಪರಿಗಣನೆಗೂ ಸ್ವಲ್ಪ ಸಮಯವನ್ನು ನೀಡಲೇಬೇಕು ಮತ್ತು ಹಾಗೆ ಮಾಡುವುದರಿಂದ ತಿದ್ದುಪಡಿಗಳನ್ನು ಸಲ್ಲಿಸುವುದಕ್ಕೆ ನಮಗೆ ಸುಲಭವಾಗುತ್ತದೆ. ನಾವು ಮೂಲತತ್ತ್ವಗಳನ್ನು ಸಂಪೂರ್ಣವಾಗಿ ಒಪ್ಪಬಹುದು; ಆದರೂ ಕೂಡ, ಸುರಕ್ಷತೆಯ ದೃಷ್ಟಿಯಿಂದ, ನಮಗೆ ಸ್ವಲ್ಪ ಸಮಯವನ್ನು ನೀಡುವುದು ಉತ್ತಮವಾಗಿದೆ. ನಮ್ಮಲ್ಲಿ ಕೆಲವರು ಎದುರಿಸಿದ ತೊಂದರೆಗಳನ್ನು ಗೌರವಾನ್ವಿತ ಸದಸ್ಯರು ದಯವಿಟ್ಟು ಪರಿಗಣಿಸುತ್ತಾರೆ ಮತ್ತು ಮುಂದಿನ ಪರಿಗಣನೆಗಾಗಿ ವಿಷಯವನ್ನು ಮುಂದೂಡುತ್ತಾರೆ ಎಂದು ನಾನು ಭಾವಿಸುತ್ತೇನೆ.

(ತಿದ್ದುಪಡಿಗಳ ಸಂಖ್ಯೆ ೨೭೩ರಿಂದ ೨೭೮ ಗಳು ಮಂಡನೆಯಾಗಲಿಲ್ಲ.)

**ಪ್ರೊ. ಶಿಬನ್‌ಲಾಲ್ ಸಕ್ಸೇನ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಖಂಡ ೧೪ರ ಉಪಖಂಡ (೪)ಕ್ಕೆ ನನ್ನ ತಿದ್ದುಪಡಿ ಈ ರೀತಿ ಇದೆ :

"ಖಂಡ ೧೪ರ ಉಪಖಂಡ (೪)ರಲ್ಲಿ 'ಮೂರನೇ ಒಂದು' ಎಂಬ ಶಬ್ದದ ಬದಲಿಗೆ 'ಅರ್ಧ' ಎಂದು ಬದಲಾಯಿಸಬೇಕು."

ಖಂಡ ೧೪ರ ಉಪಖಂಡ (೪) ರಲ್ಲಿನ ಈಗಿನ ಉಪಬಂಧದ ಪ್ರಕಾರ, ಪ್ರತಿ ಎರಡು ವರ್ಷಗಳಿಗೊಮ್ಮೆ ಮೂರನೇ ಒಂದು ಭಾಗದಷ್ಟು ಸದಸ್ಯರು ನಿವೃತ್ತಿ ಹೊಂದುತ್ತಾರೆ. ಈಗ ನಾವು ಹಾಕಿರುವ ಸಮಯಪಟ್ಟಿಯ ಪ್ರಕಾರ, ಪ್ರಜೆಗಳ ಸದನದ (ಲೋಕಸಭೆ) ಅವಧಿಯು ನಾಲ್ಕು ವರ್ಷಗಳಾಗಿರುತ್ತದೆ ಮತ್ತು ನೂತನ

ಆ ಚರ್ಚೆಯನ್ನು ಮುಂದಿನ ಅಧಿವೇಶನದಲ್ಲಿ ಏರ್ಪಡಿಸಬಹುದು. ಒಂದು ವೇಳೆ, ಈ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸಂವಿಧಾನಸಮಿತಿಯ ಶಿಫಾರಸುಗಳನ್ನು ನೇರವಾಗಿ ಕೇಂದ್ರ ಸಂವಿಧಾನದ ಕರಡಿನ ಮೂಲಗ್ರಂಥದಲ್ಲಿ ಸೇರ್ಪಡೆ ಮಾಡುವುದಕ್ಕೆ ಸದನವು ಒಪ್ಪಬೇಕು ಎಂದಾದರೆ, ಇದು ಸಂವಿಧಾನದ ಮೂಲಗ್ರಂಥಕ್ಕೆ ಬಂದಾಗ, ಈ ಅವಕಾಶಗಳ ಯೋಗ್ಯತೆಯನ್ನು, ಉಪಯುಕ್ತತೆಯನ್ನು ಪರೀಕ್ಷಿಸುವುದಕ್ಕೆ ಸದನವು ಸಿದ್ಧವಿರಬೇಕು.

ಮಾನ್ಯರೆ, ನಾನು ಈ ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ನಾನು ಈ ಖಂಡಕ್ಕೆ ಅನೇಕ ತಿದ್ದುಪಡಿಗಳನ್ನು ಹೊಂದಿದ್ದೇನೆ. ನಾನು ಈಗ ಈ ತಿದ್ದುಪಡಿಗಳನ್ನು ಒಂದರ ಅನಂತರ ಒಂದರಂತೆ ತೆಗೆದುಕೊಳ್ಳುತ್ತೇನೆ.

(ಶ್ರೀಯುತರುಗಳಾದ ಜಗತ್ ನಾರಾಯಣ್ ಲಾಲ್, ಎಚ್.ವಿ. ಪಾಟಸ್ಕರ್, ಬಿ.ಎಮ್. ಗುಪ್ತೆ, ಆರ್.ಎಮ್. ನಲವಾಡೆ, ಸೇಠ್ ಗೋವಿಂದ ದಾಸ್ ಮತ್ತು ಜಿ.ಎಲ್. ಮೆಹ್ತಾ ಅವರು ತಮ್ಮ ತಿದ್ದುಪಡಿಗಳ ಸಂಖ್ಯೆ ೨೩೨ರಿಂದ ೨೩೭ನ್ನು ಮಂಡಿಸಲಿಲ್ಲ.)

**ಡಾ. ಮೋಹನ್ ಸಿನ್ಹ ಮೆಹ್ತಾ** (ಉದಯಪುರ ರಾಜ್ಯ) : ನಾನು ನನ್ನ ತಿದ್ದುಪಡಿ (ಸಂಖ್ಯೆ ೨೩೮)ಯನ್ನು ಹಿಂದಕ್ಕೆ ಪಡೆಯುತ್ತೇನೆ.

**ಬಿ.ಎಚ್. ಜೈದಿ** (ಯು.ಪಿ. ರಾಜ್ಯ) : ನಾನು ನನ್ನ ತಿದ್ದುಪಡಿ (ಸಂಖ್ಯೆ ೨೩೮)ಯನ್ನು ಹಿಂದಕ್ಕೆ ಪಡೆಯುತ್ತೇನೆ.

**ಮಹಾರಾಜ ನಾಗೇಂದ್ರ ಸಿಂಗ್** (ಪೌರಸ್ತ್ಯ ರಾಜಪುತಾನ್ ರಾಜ್ಯಗಳು) : ಮಾನ್ಯ ಸಭಾಧ್ಯಕ್ಷರೆ, ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯು ಸಣ್ಣ ರಾಜ್ಯಗಳ ದೃಷ್ಟಿಕೋನವನ್ನು, ಅಭಿಪ್ರಾಯವನ್ನು ಪ್ರಶಂಸನೀಯವಾಗಿ ಬಿಂಬಿಸುತ್ತದೆ ಮತ್ತು ಅವರು ಈ ತಿದ್ದುಪಡಿಗಾಗಿ ಅಭಿನಂದನಾರ್ಹರು; ಏಕೆಂದರೆ, ಇದು ಪರಿಣಾಮಕಾರಿ ಪ್ರಜಾಪ್ರಭುತ್ವವನ್ನು ಹುಟ್ಟುಹಾಕುತ್ತದೆ. ಅಷ್ಟಕ್ಕೂ, ಮಾನ್ಯರೆ, ಸಂವಿಧಾನದ ಶ್ರೇಷ್ಠತೆ ಹಾಗೂ ಸಮಾನತೆಯು ಬೃಹತ್ ದೇಶದಲ್ಲಿ ಅಸ್ತಿತ್ವದಲ್ಲಿರುವ ವಿವಿಧ ವಸ್ತುಗಳು ಹಾಗೂ ಹಿತಾಸಕ್ತಿಗಳಲ್ಲಿನ ಅತಿಸೂಕ್ಷ್ಮ ಗಮನದ ಚಿತ್ರಣದಲ್ಲಿದೆ. ಈ ತಿದ್ದುಪಡಿಯು ಖಂಡಿತವಾಗಿಯೂ ಈ ಉದ್ದೇಶವನ್ನು ಸಾಧಿಸುತ್ತದೆ ಮತ್ತು ನಾನು ಇದನ್ನು ಹೃದಯಪೂರ್ವಕವಾಗಿ ಬೆಂಬಲಿಸುತ್ತೇನೆ. ಆದ್ದರಿಂದ, ನಾನು ನನ್ನ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ. ಮಾನ್ಯರೆ, ಆದರೆ, ನಾನು ಮನವಿ ಮಾಡುವುದೇನೆಂದರೆ, ರಾಜ್ಯಗಳ ನಡುವೆ ಸ್ಥಾನಗಳ ಹಂಚಿಕೆಯನ್ನು ಪರಿಗಣಿಸುವುದಕ್ಕೆ ಸಂಬಂಧಪಟ್ಟಂತೆ, ಕೇಂದ್ರ ಸಂವಿಧಾನಸಮಿತಿಯಲ್ಲಿ ಸಣ್ಣ ರಾಜ್ಯಗಳ ಕೆಲವು ಪ್ರತಿನಿಧಿಗಳೂ ಸಹ ಇರಬೇಕು. ಸಣ್ಣ ರಾಜ್ಯಗಳ ಗುಂಪುಗೂಡುವಿಕೆ ಹಾಗೂ ಮತಕ್ಷೇತ್ರಗಳ ರಚನೆಯು ಈ ರಾಜ್ಯಗಳ ಮೇಲೆ ಅಪಾರ ಪರಿಣಾಮ ಬೀರುತ್ತದೆ ಮತ್ತು ಆದ್ದರಿಂದ, ಈ ರಾಜ್ಯಗಳ ದೃಷ್ಟಿಕೋನದಿಂದ, ಅವು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕಾಗಿ, ಕೇಂದ್ರ ಸಂವಿಧಾನಸಮಿತಿಯಲ್ಲಿ ಸಣ್ಣ ರಾಜ್ಯಗಳ ಪ್ರತಿನಿಧಿಗಳು ಇರುವುದು ಬಹಳ ಮುಖ್ಯವಾಗಿದೆ.

ನಾನು ನನ್ನ ತಿದ್ದುಪಡಿ(ಸಂಖ್ಯೆ ೨೩೯)ಯನ್ನು ಹಿಂದಕ್ಕೆ ಪಡೆಯುತ್ತೇನೆ.

(ಶ್ರೀಯುತರುಗಳಾದ ರಾಯ್ ಸಾಹೇಬ್ ರಘುರಾಜ್ ಸಿಂಗ್ ಮತ್ತು ಎಚ್. ಜೆ. ಖಾಂಡೇಕರ್ ಅವರು ತಮ್ಮ ತಿದ್ದುಪಡಿಗಳಾದ ಸಂಖ್ಯೆ ೨೩೯ ಮತ್ತು ೨೪೦ನ್ನು ಮಂಡಿಸಲಿಲ್ಲ.)

**ಶ್ರೀ ಹಿಮ್ಮತ್ ಸಿಂಗ್ ಕೆ. ಮಹೇಶ್ವರಿ :** ನಾನು ನನ್ನ ತಿದ್ದುಪಡಿ ಸಂಖ್ಯೆ ೨೪೧ನ್ನು ಹಿಂದಕ್ಕೆ ಪಡೆಯುತ್ತೇನೆ.

(ತಿದ್ದುಪಡಿ ಸಂಖ್ಯೆಗಳಾದ ೨೪೨ರಿಂದ ೨೬೦ ಮಂಡನೆಯಾಗಲಿಲ್ಲ.)

**ಶ್ರೀ ವಿಶ್ವಂಭರ ದಯಾಲ್ ತ್ರಿಪಾಠಿ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯರೆ, ನನ್ನ ತಿದ್ದುಪಡಿಯು ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯಲ್ಲಿಯೇ ಅಡಕವಾಗಿರುವುದರಿಂದ ಇದನ್ನು ಮಂಡಿಸಲು ನಾನು ಉದ್ದೇಶಿಸಿಲ್ಲ.

(ತಿದ್ದುಪಡಿ ಸಂಖ್ಯೆ ೨೬೨ ಮಂಡನೆಯಾಗಲಿಲ್ಲ.)

(ಶ್ರೀ ವಿ.ಟಿ. ಕೃಷ್ಣಮಾಚಾರಿಯವರು ತಮ್ಮ ತಿದ್ದುಪಡಿ ಸಂಖ್ಯೆ ೨೬೩ನ್ನು ಮಂಡಿಸಲಿಲ್ಲ.)

**ಮಾನ್ಯ ಸಭಾಧ್ಯಕ್ಷರು** : ಇತರ ಯಾವುದೇ ಮಂತ್ರಿಗಳು ತಿದ್ದುಪಡಿಯನ್ನು ಮಂಡಿಸುವುದಿಲ್ಲವೆಂದು ನಾನು ತೆಗೆದುಕೊಳ್ಳುತ್ತೇನೆ.

**ಶ್ರೀ ವಿ.ಟಿ. ಕೃಷ್ಣಮಾಚಾರಿ** (ಜೈಪುರ ರಾಜ್ಯ) : ಹೌದು.

(ತಿದ್ದುಪಡಿ ಸಂಖ್ಯೆಗಳಾದ ೨೬೪ರಿಂದ ೨೭೧ ಮಂಡನೆಯಾಗಲಿಲ್ಲ.)

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯ ಸಭಾಧ್ಯಕ್ಷರೆ, ನಾನು ಮಂಡಿಸಲು ಪ್ರಾರ್ಥಿಸುತ್ತೇನೆ :

"ಖಂಡ ೧೪ರ ಉಪಖಂಡ (೨) ಅನ್ನು ತೆಗೆದುಹಾಕಬೇಕು."

ಈ ತಿದ್ದುಪಡಿಗೆ ಅತ್ಯಂತ ಸರಳವಾದ ಕಾರಣವೇನೆಂದರೆ, ಈ ಉಪಖಂಡವು ಸೂಚಿಸುವ ಅನುಸೂಚಿಯು ಇದುವರೆಗೂ ಅಸ್ತಿತ್ವದಲ್ಲಿಲ್ಲ. ಒಂದು ವೇಳೆ ನಾವು ಉಪಖಂಡ (೨)ನ್ನು ಅಂಗೀಕರಿಸಿದರೆ, ಇದು ಖಾಲಿ ಧನಾದೇಶ (ಚೆಕ್)ಕ್ಕೆ ಸಹಿ ಮಾಡಿದಂತೆ ಅಥವಾ ಅನುಸೂಚಿಯಿಲ್ಲದೇ ದಸ್ತಾವೇಜನ್ನು ವರ್ಗಾಯಿಸಿದಂತೆ ಆಗುತ್ತದೆ. ನಾನು ಮಂಡಿಸುವುದೇನೆಂದರೆ, ಇದು ಮಾಡುವುದಕ್ಕೆ ಕಷ್ಟದಾಯಕವಾದ ವಿಷಯವಾಗಿದೆ.

ಅನಂತರ, ನಾನು ಕಂಡುಕೊಂಡಿದ್ದೇನೆ, ನನ್ನ ಗೌರವಾನ್ವಿತ ಸ್ನೇಹಿತರಾದ ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯ ಅನಂತರ ಈ ತಿದ್ದುಪಡಿಯು ಅಸಂಗತ ಸ್ಥಾನದಲ್ಲಿದೆ. ಅಪಾರ ಸಂಖ್ಯೆಯಲ್ಲಿ ನಾವು ತಿದ್ದುಪಡಿಗಳ ಸೂಚನೆಯನ್ನು ನೀಡಿದ ಅನಂತರ ಮೂಲಖಂಡವನ್ನು ಮರುರಚಿಸಲಾಗಿದೆ ಮತ್ತು ಸದನದಲ್ಲಿ ಚರ್ಚೆಗಾಗಿ ಇಡಲಾಗಿದೆ. ನಮಗೆ ಕರಡನ್ನು ಪರಿಗಣಿಸುವ ಅವಕಾಶವೇ ದೊರಕಲಿಲ್ಲ. ಪರಿಗಣನೆಗಾಗಿ ಮಂಡಿಸಲಾಗಿರುವ ಪರಿಷ್ಕೃತ ಕರಡಿಗೆ ನನ್ನ ನಿರ್ದಿಷ್ಟ ಅಭ್ಯಂತರವೇನೂ ಇಲ್ಲ. ಆದರೆ, ಈ ಪ್ರಮುಖವಾದ ವಿಷಯವನ್ನು ಪರಿಗಣಿಸುವುದಕ್ಕೆ ಬಹುಶಃ ನಮಗೆ ಇನ್ನಷ್ಟು ಸಮಯಾವಕಾಶ ನೀಡಬೇಕು ಎಂದು ನಾನು ಈಗಲೂ ಭಾವಿಸುತ್ತೇನೆ. ಸಂವಿಧಾನದ ಮುಖ್ಯವಾದ ಮೂಲತತ್ತ್ವಗಳನ್ನು ಒಳಗೊಂಡಿರುವ, ಇಂತಹ ಜಟಿಲ ಸ್ವಭಾವದ ಕರಡನ್ನು ಇಷ್ಟೊಂದು ಸರಳವಾಗಿ ಕ್ಷಣಮಾತ್ರದ ಸೂಚನೆಯೊಂದಿಗೆ ನಿರ್ವಹಿಸಬಾರದು. ಆದ್ದರಿಂದ ನಾನು ಗೌರವಪೂರ್ವಕವಾಗಿ ತಿಳಿಸುವುದೇನೆಂದರೆ, ಇತರ ಯಾವುದೇ ಪ್ರಮುಖ ವಿಷಯಗಳಲ್ಲಿ ನೀಡಲಾಗುವಂತೆ, ಈ ವಿಷಯದ ಪರಿಗಣನೆಗೂ ಸ್ವಲ್ಪ ಸಮಯವನ್ನು ನೀಡಲೇಬೇಕು ಮತ್ತು ಹಾಗೆ ಮಾಡುವುದರಿಂದ ತಿದ್ದುಪಡಿಗಳನ್ನು ಸಲ್ಲಿಸುವುದಕ್ಕೆ ನಮಗೆ ಸುಲಭವಾಗುತ್ತದೆ. ನಾವು ಮೂಲತತ್ತ್ವಗಳನ್ನು ಸಂಪೂರ್ಣವಾಗಿ ಒಪ್ಪಬಹುದು; ಆದರೂ ಕೂಡ, ಸುರಕ್ಷತೆಯ ದೃಷ್ಟಿಯಿಂದ, ನಮಗೆ ಸ್ವಲ್ಪ ಸಮಯವನ್ನು ನೀಡುವುದು ಉತ್ತಮವಾಗಿದೆ. ನಮ್ಮಲ್ಲಿ ಕೆಲವರು ಎದುರಿಸಿದ ತೊಂದರೆಗಳನ್ನು ಗೌರವಾನ್ವಿತ ಸದಸ್ಯರು ದಯವಿಟ್ಟು ಪರಿಗಣಿಸುತ್ತಾರೆ ಮತ್ತು ಮುಂದಿನ ಪರಿಗಣನೆಗಾಗಿ ವಿಷಯವನ್ನು ಮುಂದೂಡುತ್ತಾರೆ ಎಂದು ನಾನು ಭಾವಿಸುತ್ತೇನೆ.

(ತಿದ್ದುಪಡಿಗಳ ಸಂಖ್ಯೆ ೨೭೩ರಿಂದ ೨೭೮ ಗಳು ಮಂಡನೆಯಾಗಲಿಲ್ಲ.)

**ಪ್ರೊ. ಶಿಬನ್‌ಲಾಲ್ ಸಕ್ಸೇನ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಖಂಡ ೧೪ರ ಉಪಖಂಡ (೪)ಕ್ಕೆ ನನ್ನ ತಿದ್ದುಪಡಿ ಈ ರೀತಿ ಇದೆ :

"ಖಂಡ ೧೪ರ ಉಪಖಂಡ (೪)ರಲ್ಲಿ 'ಮೂರನೇ ಒಂದು' ಎಂಬ ಶಬ್ದದ ಬದಲಿಗೆ 'ಅರ್ಧ' ಎಂದು ಬದಲಾಯಿಸಬೇಕು."

ಖಂಡ ೧೪ರ ಉಪಖಂಡ (೪) ರಲ್ಲಿನ ಈಗಿನ ಉಪಬಂಧದ ಪ್ರಕಾರ, ಪ್ರತಿ ಎರಡು ವರ್ಷಗಳಿಗೊಮ್ಮೆ ಮೂರನೇ ಒಂದು ಭಾಗದಷ್ಟು ಸದಸ್ಯರು ನಿವೃತ್ತಿ ಹೊಂದುತ್ತಾರೆ. ಈಗ ನಾವು ಹಾಕಿರುವ ಸಮಯಪಟ್ಟಿಯ ಪ್ರಕಾರ, ಪ್ರಜೆಗಳ ಸದನದ (ಲೋಕಸಭೆ) ಅವಧಿಯು ನಾಲ್ಕು ವರ್ಷಗಳಾಗಿರುತ್ತದೆ ಮತ್ತು ನೂತನ

'ಪ್ರಜೆಗಳ ಸದನ' (ಲೋಕಸಭೆ) ಹಾಗೆಯೇ ನೂತನ 'ಪ್ರಾಂತ್ಯಗಳ ಶಾಸನ ಸಭೆ'ಯು (ರಾಜ್ಯಸಭೆ)ಸಹಜ ವಿಧಾನದಲ್ಲಿ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಚುನಾಯಿಸಲ್ಪಡುತ್ತದೆ. ನಾನು ಬಯಸುವುದೇನೆಂದರೆ, ರಾಜ್ಯಸಭೆಯಲ್ಲಿ ಪ್ರತಿ ಎರಡು ವರ್ಷಗಳಿಗೊಮ್ಮೆ ಮೂರನೇ ಒಂದು ಭಾಗದಷ್ಟು ಸದಸ್ಯರು ಆಯ್ಕೆಯಾಗುವುದರ ಬದಲು, ಪ್ರತಿ ಎರಡು ವರ್ಷಗಳಿಗೊಮ್ಮೆ ಅರ್ಧದಷ್ಟು ಸದಸ್ಯರು ಆಯ್ಕೆಯಾಗಬೇಕು. ಈ ಪದ್ಧತಿಯಲ್ಲಿ ನಾವು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನೂತನ 'ರಾಜ್ಯಸಭೆ'ಯನ್ನು ಹೊಂದುತ್ತೇವೆ. ಕೆಳಮನೆಯು ತನ್ನ ಪೂರ್ಣಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆಯೇ ವಿಸರ್ಜಿಸಲ್ಪಡುತ್ತದೆ ಮತ್ತು ನಾಲ್ಕು ವರ್ಷಗಳ ಚಕ್ರವು ಮರುಕಳಿಸದೇ ಇರಬಹುದು ಎಂದು ಚರ್ಚೆಯಾಗಬಹುದು. ಆದರೆ, ನಾನು ನಿಖರವಾಗಿ ಹೇಳುತ್ತೇನೆ, ಶಾಸನಸಭೆಯ ಜೀವಿತಾವಧಿಯಲ್ಲಿ ವಿಸರ್ಜನೆಯು ಸಾಮಾನ್ಯ ಲಕ್ಷಣವಾಗುವುದಿಲ್ಲ ಮತ್ತು ಒಂದು ವೇಳೆ ಪ್ರಾಂತ್ಯಗಳಲ್ಲಿ ಒಂದು ಅಥವಾ ಎರಡು ಶಾಸನಸಭೆಗಳು ಅವುಗಳ ಪೂರ್ಣಾವಧಿಗೆ ಮುನ್ನವೇ ವಿಸರ್ಜನೆಗೊಂಡರೂ ಸಹ, ನಾಲ್ಕು ವರ್ಷಗಳ ಚಕ್ರವು ಕನಿಷ್ಠಪಕ್ಷ ಈ ಶತಮಾನದಲ್ಲಿ ಭೌತಿಕವಾಗಿ ತೊಂದರೆಗೆ ಒಳಗಾಗುವುದಿಲ್ಲ.

**ಒಬ್ಬರು ಗೌರವಾನ್ವಿತ ಸದಸ್ಯರು** : ಮಾಹಿತಿಯನ್ನು ಪಡೆಯುವುದಕ್ಕಾಗಿ, ಅವರು ತಿದ್ದುಪಡಿಯನ್ನು ಮಂಡಿಸಲು ಹೊರಟಿದ್ದಾರೆಯೇ?

**ಪ್ರೊ. ಶಿಬನ್‌ಲಾಲ್ ಸಕ್ಸೇನ** : ಹೌದು, ಮಾನ್ಯರೆ, ನಾನು ಇದನ್ನು ಮಂಡಿಸುತ್ತಿದ್ದೇನೆ.

ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯ ಪ್ರಕಾರ, ಈ ಸದನದಲ್ಲಿ ರಾಜ್ಯಗಳು ಸಾಕಷ್ಟು ದೊಡ್ಡ ಸಂಖ್ಯೆಯ ಪ್ರಾತಿನಿಧ್ಯವನ್ನು ಹೊಂದಲಿವೆ ಮತ್ತು ಚೆನ್ನಾಗಿ ತಿಳಿದಿರುವಂತೆ, ರಾಜ್ಯಗಳ ಕೆಳಮನೆಗಳು ಬಹುಪಾಲು ನಾಮಕರಣಸದಸ್ಯರನ್ನು ಹೊಂದಿರುತ್ತವೆ; ಆದ್ದರಿಂದ, ಸದಸ್ಯರಲ್ಲಿ ಬಹುಪಾಲು, ಆಳ್ವಿಕೆಗಾರ(ರಾಜ)ರುಗಳ ಪ್ರತಿನಿಧಿಗಳಾಗಿರುತ್ತಾರೆ. ಆದ್ದರಿಂದ, ನಾನು ಏನನ್ನು ಬಯಸುತ್ತೇನೆಂದರೆ, ಗಣನೀಯವಾಗಿ ಹೆಚ್ಚಿನ ಸಂಖ್ಯೆಯ ಪ್ರತಿಗಾಮಿ ಸದಸ್ಯರನ್ನು ಹೊಂದಲಿರುವ ಈ ಸದನವು, ಸುದೀರ್ಘ ಬಿಡುವಿಗೆ ಮುಂದುವರಿಯುವ ಸದನವಾಗಬಾರದು. ಇದರಲ್ಲಿ ಅರ್ಧದಷ್ಟಾದರೂ ಪ್ರತಿ ಎರಡು ವರ್ಷಗಳಿಗೊಮ್ಮೆ ಬದಲಾಗಬೇಕು ಎಂಬುದು ನನ್ನ ಬಯಕೆ ಮತ್ತು ಹಾಗಾದಾಗ ಇದು ಅಷ್ಟೊಂದು ಪ್ರಗತಿ ವಿರೋಧಿಯಾಗಲಾರದು. ಎರಡನೇ ಮಂತ್ರಾಲೋಚನಾ ಸಭಾಮಂದಿರಕ್ಕೆ ನಾನು ಈಗಾಗಲೇ ನನ್ನ ಪ್ರಬಲ ವಿರೋಧವನ್ನು ವ್ಯಕ್ತಪಡಿಸಿದ್ದೇನೆ; ಆದರೆ, ಒಂದು ವೇಳೆ ನಾವು ಅವನ್ನು ಹೊಂದಬೇಕಿದ್ದರೆ, ನಾವು ಕನಿಷ್ಠಪಕ್ಷ ಎರಡು ವರ್ಷಗಳಿಗೊಮ್ಮೆಯಾದರೂ ಅರ್ಧದಷ್ಟು ಸದಸ್ಯರನ್ನು ಬದಲಾಯಿಸಬೇಕು; ಆ ಮೂಲಕ, ನಾಲ್ಕನೇ ವರ್ಷದಲ್ಲಿ ರಾಜ್ಯಸಭೆಯು ಸಂಪೂರ್ಣವಾಗಿ ಬದಲಾಯಿಸಲ್ಪಡುತ್ತದೆ.

(ತಿದ್ದುಪಡಿಗಳ ಸಂಖ್ಯೆಗಳಾದ ೨೮೦ರಿಂದ ೨೯೯ಗಳು ಮಂಡನೆಯಾಗಲಿಲ್ಲ.)

(ಪೂರಕ ಪಟ್ಟಿ ಸಂಖ್ಯೆ ೧ರಲ್ಲಿನ ತಿದ್ದುಪಡಿಗಳ ಸಂಖ್ಯೆಗಳಾದ ೧೩ರಿಂದ ೧೬, ಪೂರಕ ಪಟ್ಟಿ ಸಂಖ್ಯೆ ೨ರ ತಿದ್ದುಪಡಿಗಳ ಸಂಖ್ಯೆ ೧೦ ಹಾಗೂ ೧೧ ಮತ್ತು ಪೂರಕ ಪಟ್ಟಿ ೩ರಲ್ಲಿನ ತಿದ್ದುಪಡಿಗಳ ಸಂಖ್ಯೆಗಳಾದ ೪ರಿಂದ ೬ ಮಂಡನೆಯಾಗಲಿಲ್ಲ.)

**ಬೇಗಮ್ ಐಜಾಜ್ ರಸೂಲ್** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) : ನನ್ನ ಹೆಸರಿನಲ್ಲಿರುವ ತಿದ್ದುಪಡಿಯೇನೆಂದರೆ –

"ಖಂಡ ೧೪೮ರ ಉಪಖಂಡ (೧) (ಡಿ)ಯಲ್ಲಿ ಕೊನೆಯಲ್ಲಿ ಈ ಕೆಳಗಿನದ್ದು ಸೇರ್ಪಡೆಯಾಗಬೇಕು:

'ಅನುಪಾತದ ಪ್ರಾತಿನಿಧ್ಯ ಪದ್ಧತಿಯಿಂದ ಸಂಜ್ಞಾ ವರ್ಗಾಂತರ ಮತ.' "

ಮಾನ್ಯರೆ, ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರಿಂದ ತಿದ್ದುಪಡಿ ಮಂಡನೆಯಾಗಿರುವುದರಿಂದ ಪ್ರಸ್ತುತ ಕ್ಷಣದಲ್ಲಿ ಈ ತಿದ್ದುಪಡಿಯನ್ನು ನಾನು ಮಂಡಿಸಲು ಉದ್ದೇಶಿಸಿಲ್ಲ.

ರಾಜ್ಯಸಭೆಗೆ ಚುನಾವಣೆ ನಡೆಸುವ ವಿಧಾನವು ಅತ್ಯಂತ ಮುಖ್ಯವಾದ ಪ್ರಶ್ನೆಯಾಗಿದ್ದು, ಈ ವಿಷಯದಲ್ಲಿ ಅಲ್ಪಸಂಖ್ಯಾತರ ಹಿತವನ್ನು ಕಾಪಾಡುವ ನಿಟ್ಟಿನಲ್ಲಿ ಕೇಂದ್ರ ಸಂವಿಧಾನಸಮಿತಿಯು ವಿಶೇಷ ಗಮನ ಹರಿಸುತ್ತದೆಂದು ನಾನು ಭಾವಿಸುತ್ತೇನೆ. ನಾನು ಈ ತಿದ್ದುಪಡಿಯನ್ನು ಈ ಸಮಯದಲ್ಲಿ ಮಂಡಿಸುವುದಿಲ್ಲ, ಮಾನ್ಯರೆ, ಏಕೆಂದರೆ, ಇದರ ವಿರುದ್ಧವಾಗಿ ನಕಾರಾತ್ಮಕ ಮತ ಬೀಳುವ ಅತ್ಯಧಿಕ ಸಾಧ್ಯತೆಗಳಿವೆ; ಒಂದು ವೇಳೆ ಹಾಗಾದರೆ ಸದನವು ಇದನ್ನು ತಿರಸ್ಕರಿಸಬಹುದು; ಆದರೆ, ಆವಶ್ಯಕತೆ ಕಂಡುಬಂದರೆ, ಅನಂತರದಲ್ಲಿ ಇದನ್ನು ಮಂಡಿಸುವ ಹಕ್ಕನ್ನು ನನ್ನಷ್ಟಕ್ಕೆ ನಾನು ಕಾಯ್ದಿರಿಸಿಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ನಿಮ್ಮ ಹೆಸರಿನಲ್ಲಿ ಇನ್ನೂ ಒಂದು ತಿದ್ದುಪಡಿಯಿದೆ.

**ಬೇಗಮ್ ಐಜಾಜ್ ರಸೂಲ್ :** ನನ್ನ ಹೆಸರಿನಲ್ಲಿ ನಮೂದಾಗಿರುವ ಇನ್ನೂ ಒಂದು ತಿದ್ದುಪಡಿಯಿದೆ:

"ಖಂಡ ೧೪ರ ಉಪಖಂಡ (೪)ರಲ್ಲಿ, 'ಎರಡನೆಯ' ಎಂಬ ಶಬ್ದದ ಬದಲು 'ಮೂರನೆಯ' ಎಂಬ ಶಬ್ದವನ್ನು ಸೇರಿಸಬೇಕು."

ಮಾನ್ಯರೆ, ಖಂಡವು ಮತ್ತೆ ಹೀಗೆ ಕಾಣುತ್ತದೆ :

"ರಾಜ್ಯಸಭೆಯು ವಿಸರ್ಜನೆಗೆ ಒಳಪಡದ ಶಾಶ್ವತ ಸಂಸ್ಥೆಯಾಗಿರಬೇಕು; ಆದರೆ, ಎಷ್ಟು ಸಮೀಪ ಸಾಧ್ಯವೋ ಅಷ್ಟು, ಅದರ ಮೂರನೇ ಒಂದು ಭಾಗದಷ್ಟು ಸದಸ್ಯರು ಪ್ರತಿ ಮೂರು ವರ್ಷಗಳಿಗೊಮ್ಮೆ, ಪರಿಶಿಷ್ಟ...ದಲ್ಲಿ ಅಡಕವಾಗಿರುವ ಉಪಬಂಧಗಳ ಅನ್ವಯ ನಿವೃತ್ತಿ ಹೊಂದುತ್ತಾರೆ."

ಮಾನ್ಯರೆ, ನಾನು ಈ ತಿದ್ದುಪಡಿಯನ್ನು ಮಂಡಿಸುತ್ತಿರುವುದರ ಮುಖ್ಯ ಉದ್ದೇಶವೇನೆಂದರೆ, ಶಾಸನ ಸಭೆಯ ಸದಸ್ಯರಿಗೆ ಎರಡು ವರ್ಷಗಳ ಅವಧಿಯು ಬಹಳ ಕಡಿಮೆಯಾಗುತ್ತದೆ. ಅವರು ತಮ್ಮ ವ್ಯವಹಾರಕ್ಕೆ ಪರಿಚಿತರಾಗುತ್ತಿದ್ದಂತೆ, ಶಾಸನಾತ್ಮಕ ಕಾರ್ಯವನ್ನು ಅರಿಯುತ್ತಿದ್ದಂತೆ, ಅದಕ್ಕೆ ಹೊಂದಿಕೊಳ್ಳುತ್ತಿದ್ದಂತೆಯೇ, ನಿವೃತ್ತಿ ಹೊಂದಬೇಕಾಗುತ್ತದೆ. ನನ್ನ ಪ್ರಕಾರ ಇದು ಸಮಂಜಸವಲ್ಲ ಮತ್ತು ತಮ್ಮ ಕಾರ್ಯದಕ್ಷತೆಯನ್ನು ಪ್ರದರ್ಶಿಸುವುದಕ್ಕೆ ಮತ್ತು ತಾವು ಸದನಕ್ಕೆ ಆಯ್ಕೆಯಾಗಿರುವುದರ ಉದ್ದೇಶಕ್ಕೆ ನ್ಯಾಯ ಒದಗಿಸುವುದಕ್ಕೆ ಅವರು ಸ್ವಲ್ಪ ಅಧಿಕ ಅವಧಿಯನ್ನು ಎದುರು ನೋಡುತ್ತಾರೆ.

ಮಾನ್ಯರೆ, ಒಂದು ವೇಳೆ ನನ್ನ ತಿದ್ದುಪಡಿಯು ಅಂಗೀಕಾರವಾದರೆ, ಅದರ ಅರ್ಥ ಏನಾಗುತ್ತದೆಂದರೆ, ಸದನವು ಶಾಶ್ವತ ಸಂಸ್ಥೆಯಾಗಿರುತ್ತದೆ, ಇದರ ಮೂರನೇ ಒಂದು ಭಾಗದಷ್ಟು ಸದಸ್ಯರು ಪ್ರತಿ ಮೂರು ವರ್ಷಗಳಿಗೊಮ್ಮೆ ನಿವೃತ್ತರಾಗುತ್ತಾರೆ, ಇದು ಒಂಬತ್ತು ವರ್ಷಗಳ ನಿಯತಾವರ್ತನವಾಗುತ್ತದೆ. ಅನೇಕ ಗೌರವಾನ್ವಿತ ಸದಸ್ಯರು ಅರಿತಿರುವಂತೆ, ಇದು ಭಾರತ ಸರ್ಕಾರ ಅಧಿನಿಯಮ ೧೯೩೫ರ ಅಡಿಯಲ್ಲಿ ಪ್ರಸ್ತುತ ಸಾಮಾನ್ಯ ಬಳಕೆಯಲ್ಲಿರುವ ಪದ್ಧತಿಯಾಗಿದೆ. ಆದ್ದರಿಂದ, ಭಾರತದ ಜನರು ಈ ಪದ್ಧತಿಗೆ ಅಪರಿಚಿತರಲ್ಲ. ನಾನು ಭಾವಿಸುವ ಪ್ರಕಾರ, ಈ ಪದ್ಧತಿ, ಕಳೆದ ಹತ್ತು ವರ್ಷಗಳಿಂದ ಈ ದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಂಪೂರ್ಣ ಸಮಾಧಾನಕರವೆಂದು ಸಾಬೀತಾಗಿದೆ. ಮಾನ್ಯರೆ, ಬಹುತೇಕ ಪಾಶ್ಚಿಮಾತ್ಯ ರಾಷ್ಟ್ರಗಳ ಸಂವಿಧಾನಗಳಲ್ಲಿ ಶಾಸನಸಭೆಯ ಎರಡು ಸದನಗಳಿವೆ; ಮೇಲ್ಮನೆಯ ಸದಸ್ಯರು ಒಂದೋ ಆಜೀವ ಸದಸ್ಯರಾಗಿರುತ್ತಾರೆ ಅಥವಾ ಆ ಸದನದ ಜೀವಿತಾವಧಿಯು ಕೆಳಮನೆಯ ಜೀವಿತಾವಧಿಯೊಂದಿಗೆ ಅನುರೂಪತೆಯನ್ನು ಹೊಂದಿದೆ. ಸಂಯುಕ್ತ ಸಂಸ್ಥಾನದ ಸಂಸತ್ತಿನಲ್ಲಿ ಮಾತ್ರ ಮೂರನೇ ಒಂದು ಭಾಗದಷ್ಟು ಸದಸ್ಯರು ಪ್ರತಿ ಎರಡು ವರ್ಷಗಳಿಗೊಮ್ಮೆ ನಿವೃತ್ತಿ ಹೊಂದುತ್ತಾರೆ. ಅದು ಹೇಗಿದ್ದರೂ, ನಾನು ಭಾವಿಸುವುದೇನೆಂದರೆ, ಸಂಯುಕ್ತ ಸಂಸ್ಥಾನದಲ್ಲಿ ಅಸ್ತಿತ್ವದಲ್ಲಿರುವ ಪದ್ಧತಿಯನ್ನು ನಾವು ಭಾರತದಲ್ಲಿ ನಕಲು ಮಾಡಲೇಬೇಕಾದ ಆವಶ್ಯಕತೆಯಿಲ್ಲ; ಏಕೆಂದರೆ, ಸಂಯುಕ್ತ ಸಂಸ್ಥಾನದ ಸಂಸತ್ತಿನ ಸದಸ್ಯರು ಜನಪ್ರಿಯ ಮತಗಳಿಂದ ಆಯ್ಕೆಮಾಡಲ್ಪಟ್ಟರೆ, ಕೇಂದ್ರ ಸಂವಿಧಾನದ ಆಲೋಚನೆಯಂತೆ ರಾಜ್ಯಗಳ ಸಮಿತಿಯ ಈ ಸದಸ್ಯರು ನೇರ ಚುನಾವಣೆಯ ಮೂಲಕ ಚುನಾಯಿತರಾಗುವುದಿಲ್ಲ; ಆದರೆ, ಅವರು ಕೆಳಮನೆಯ

ಸದಸ್ಯರುಗಳಿಂದ ಚುನಾಯಿಸಲ್ಪಡುತ್ತಾರೆ. ಮಾನ್ಯರೆ, ನನ್ನ ವಾದದ ಸಮರ್ಥನೆಗಾಗಿ ನಾನು ಉಲ್ಲೇಖಿಸಲು ಬಯಸುವ ಇನ್ನೊಂದು ಪ್ರಬಲ ಅಂಶವೇನೆಂದರೆ, ಕೆಳಮನೆಯ ಸದಸ್ಯರು ತಮ್ಮ ಸದಸ್ಯತ್ವದ ಅವಧಿಯಲ್ಲಿ ರಾಜ್ಯಗಳ ಸಮಿತಿಯ ಸದಸ್ಯರನ್ನು ಎರಡು ಬಾರಿ ಚುನಾಯಿಸಬೇಕೆಂದು ನಾನು ಭಾವಿಸುವುದಿಲ್ಲ ಮತ್ತು ಈ ಹಕ್ಕು ಒಂದೇ ಬಾರಿ ಪ್ರಯೋಗಿಸಲ್ಪಡಬೇಕೆಂದು ನಾನು ಆಶಿಸುತ್ತೇನೆ. ಪ್ರಸ್ತುತ ಇರುವ ಉಪಬಂಧವೇ ಉಳಿದುಕೊಂಡರೆ ಮತ್ತು ಒಂದು ವೇಳೆ ಮೇಲ್ಮನೆಯ ಸದಸ್ಯರು ಪ್ರತಿ ಎರಡು ವರ್ಷಗಳಿಗೊಮ್ಮೆ ನಿವೃತ್ತರಾಗುವುದಾದರೆ, ಅದರ ಅರ್ಥ, ತಮ್ಮ ಸದಸ್ಯತ್ವದ ಅವಧಿಯಲ್ಲಿ ಕೆಳಮನೆಯ ಸದಸ್ಯರು ಎರಡು ಬಾರಿ ಮೇಲ್ಮನೆಗೆ ಸದಸ್ಯರನ್ನು ಚುನಾಯಿಸುವ ಹಕ್ಕನ್ನು ಹೊಂದಿರುತ್ತಾರೆ. ಇವಿಷ್ಟು ಮಾತುಗಳೊಂದಿಗೆ, ನನ್ನ ತಿದ್ದುಪಡಿಯನ್ನು ಸದನದ ಪರಿಗಣನೆಗಾಗಿ ಮುಂದಿಡುತ್ತಿದ್ದೇನೆ. ಇದು ತುಂಬ ನಿಷ್ಪಕ್ಷಪಾತದ ತಿದ್ದುಪಡಿಯೆಂದು ನಾನು ಭಾವಿಸುತ್ತೇನೆ ಮತ್ತು ಇದು ಅಂಗೀಕಾರವಾಗುತ್ತದೆಂದು ನಾನು ನಿರೀಕ್ಷಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಖಂಡಗಳು ಮತ್ತು ತಿದ್ದುಪಡಿಗಳು ಈಗ ಚರ್ಚೆಗೆ ಮುಕ್ತವಾಗಿವೆ.

**ಶ್ರೀ ಜೈನಾರಾಯಣ ವ್ಯಾಸ್** (ಜೋಧ್‌ಪುರ ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಈಚೆಗೆ ಮುಂದಿಟ್ಟಿರುವ ನೂತನ ಪ್ರಸ್ತಾವವನ್ನು ಬೆಂಬಲಿಸಲು ನಾನು ಎದ್ದು ನಿಂತಿದ್ದೇನೆ; ಆದರೆ, ಹಾಗೆ ಮಾಡುವಾಗ ವಸ್ತುವಿಷಯವನ್ನು ಕುರಿತು ಕೆಲವು ಟಿಪ್ಪಣಿ ಮಾಡಲು ನಾನು ಬಯಸುತ್ತೇನೆ. ನಾವು ಈ ಪ್ರಸ್ತಾವಗಳನ್ನು ಬೆಂಬಲಿಸುವಾಗ, ಈ ಪ್ರಸ್ತಾವಗಳು ಭಾರತೀಯ ರಾಜ್ಯಗಳ ಜನರ ಪರವಾಗಿ ಪರಿಣಾಮ ಬೀರುತ್ತವೆಂದು ನಾವು ಭಾವಿಸುತ್ತೇವೆಂಬುದು ಇದರ ಅರ್ಥವಾಗಬಾರದು. ನಾವು ಈ ಪ್ರಸ್ತಾವಗಳನ್ನು ಬೆಂಬಲಿಸುತ್ತಿರುವುದು ಸಂಪೂರ್ಣವಾಗಿ ರಾಜಕೀಯ ನೆಲೆಗಟ್ಟಿನ ಮೇಲೆ. ಈ ಪ್ರಸ್ತಾವಗಳು ಅಂಗೀಕಾರಗೊಂಡಾಗ, ಹದಿನಾಲ್ಕು ರಾಜ್ಯಗಳು ಕೆಳಮನೆಗೆ ಬರುತ್ತವೆ. ಈ ಹದಿನಾಲ್ಕು ರಾಜ್ಯಗಳು ಕಥೈವರ್‌ನ ನಾಲ್ಕು ರಾಜ್ಯಗಳು, ಪೂರ್ವದ ಏಳು ರಾಜ್ಯಗಳು, ರಾಜಪುತಾನದ ಒಂದು ರಾಜ್ಯ, ಅಸ್ಸಾಮ್‌ನ ಒಂದು ರಾಜ್ಯ ಮತ್ತು ಶಿಮ್ಲಾ ಬೆಟ್ಟದ ಒಂದು ರಾಜ್ಯವನ್ನು ಒಳಗೊಂಡಿರುತ್ತವೆ. ಸಮುದ್ರ ಸಂಬಂಧದ ನಾಲ್ಕು ರಾಜ್ಯಗಳಾದ ಜುನಾಗಢ, ನವನಗರ, ಭಾವನಗರ ಹಾಗೂ ಕಛ್‌ಗಳು ಮತ್ತು ಗಡಿ ರಾಜ್ಯ ಮಣಿಪುರ ಕೂಡ ಈ ಪ್ರಸ್ತಾವಗಳ ಕಾರಣದಿಂದಾಗಿ ಕೆಳಮನೆಯಲ್ಲಿ ಸ್ಥಾನಪಡೆಯುತ್ತಿರುವುದನ್ನು ಗಮನಿಸಿದಾಗ ತುಂಬ ಸಂತೋಷವಾಗುತ್ತದೆ. ಆದ್ದರಿಂದ, ಆ ದೃಷ್ಟಿಕೋನದಿಂದ, ಈಗ ಮಾಡಲಾಗುತ್ತಿರುವಂತೆ, ಕೆಳಮನೆಯ ಸದಸ್ಯತ್ವವನ್ನು ಹೆಚ್ಚಿಸುತ್ತಿರುವುದು ತುಂಬ ಒಳ್ಳೆಯ ಸಂಗತಿಯಾಗಿದೆ. ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಖಂಡ ೧(ಬಿ)ಯನ್ನು ಮುಂದಿಡುವಾಗ, ಕೆಳಮನೆಯಲ್ಲಿರುವ, ಶಾಸನಸಭೆಯ ಚುನಾಯಿತ ಸದಸ್ಯರು ಮಾತ್ರ ಕೆಳಮನೆಯ ಚುನಾವಣೆಯಲ್ಲಿ ಮತ ಚಲಾಯಿಸಲು ಯೋಗ್ಯರಾಗುತ್ತಾರೆ ಎಂದು ಹೇಳಿದ್ದಾರೆ; ನಾನು ಹೇಳಿರುವುದರ ಅರ್ಥ, ರಾಜ್ಯಗಳ ಶಾಸಕಾಂಗ ಸಭೆಗಳ ಚುನಾಯಿತ ಸದಸ್ಯರುಗಳು. ಇಲ್ಲಿನ 'ಚುನಾಯಿತ ಸದಸ್ಯರು' ಎಂಬ ಶಬ್ದಗಳನ್ನು ಕುರಿತು ಕೆಲವು ಗೊಂದಲಗಳಿವೆ. ಏಕೆಂದರೆ, ನಮ್ಮ ಒಕ್ಕೂಟದ ಕೆಳಮನೆಯ ಚುನಾಯಿತ ಸದಸ್ಯರನ್ನು ಕುರಿತು ಯೋಚಿಸುವಾಗ, ನಾವು ಏನು ಭಾವಿಸುತ್ತೇವೆಂದರೆ, ಇವರೆಲ್ಲ ವಯಸ್ಕಮತದಾನ ಪದ್ಧತಿಯಂತೆ ಚುನಾಯಿಸಲ್ಪಟ್ಟಿರುತ್ತಾರೆ; ಆದರೆ, ಭಾರತೀಯ ರಾಜ್ಯಗಳಲ್ಲಿ ವಿಷಯಗಳು ಆ ರೀತಿ ಇಲ್ಲ. ನಾನು ತಿಳಿದಿರುವಂತೆ, ಪಂಜಾಬ್ ರಾಜ್ಯದಲ್ಲಿ, ಆಳ್ವಿಕೆಗಾರ(ರಾಜ)ರ ಮಗನು ಶಾಸನಸಭೆಯ ಚುನಾಯಿತ ಸದಸ್ಯರಾಗಿದ್ದಾರೆ ಮತ್ತು ಅವರ ಪತ್ನಿಯೂ ಕೂಡ ಚುನಾಯಿತ ಸದಸ್ಯರ ಪೈಕಿ ಸ್ಥಾನಪಡೆದಿದ್ದಾರೆ ಮತ್ತು ಮಾನ್ಯರೆ, ದುರ್ದೈವವಶಾತ್ ಅವರಿಬ್ಬರೂ ಮಂತ್ರಿಗಳು ಅಥವಾ ನಿಜವಾಗಿ ಹೇಳುವುದಾದರೆ, ಅವರು ಸಭೆಯ "ಜನಪ್ರಿಯ ಮಂತ್ರಿಗಳು." ಆದ್ದರಿಂದ, ಚುನಾಯಿತ ಸದಸ್ಯರು ಮತ್ತು ಚುನಾಯಿತ "ಜನಪ್ರಿಯ ಮಂತ್ರಿಗಳು" ರಾಜ್ಯಗಳಲ್ಲಿನ ವಿಧಾನಸಭೆಯ ಕೆಳಮನೆಯ ಮೂಲಕ ಒಟ್ಟಿಗೆ ಬರುವುದು ಹೀಗೆ. ಇನ್ನೊಂದು ರಾಜ್ಯವಿದೆ; ಅದು, ಮತಕ್ಷೇತ್ರದಲ್ಲಿ ನಾಲ್ಕು ಸದಸ್ಯರಿರುವ ಆಧಾರದ ಮೇಲೆ

ಒಬ್ಬ ಚುನಾಯಿತ ಸದಸ್ಯರನ್ನು ಹೊಂದಿದೆ. ಆದ್ದರಿಂದ, ಅವರೂ ಕೂಡ ಚುನಾಯಿತ ಸದಸ್ಯರೇ ಆಗಿದ್ದಾರೆ. ನನಗೆ ಇನ್ನೊಂದು ರಾಜ್ಯ ಗೊತ್ತು; ಅದು ಕೆಳಮನೆ ಅಥವಾ ಶಾಸಕಾಂಗದ ಸಭೆಯಲ್ಲಿ ಹೊಂದಿರುವ ಸುಮಾರು ಐವತ್ತು ಸದಸ್ಯರ ಪೈಕಿ ಹತ್ತು ಜಹಗೀರುದಾರರನ್ನು ಹೊಂದಿದೆ.

ಆ ರೀತಿಯಲ್ಲಿ, ವಿಧಾನಪರಿಷತ್ತಿನ ಚುನಾಯಿತ ಸದಸ್ಯರೆಂದರೆ ನಿಜವಾಗಿಯೂ ಚುನಾಯಿತ ಸದಸ್ಯರಲ್ಲ; ಏಕೆಂದರೆ, ಅವರು ಲೋಕಪ್ರಿಯ ಮತದಾನ ಅಥವಾ ವಯಸ್ಕಮತದಾನ ಪದ್ಧತಿಯ ಮೇಲೆ ಚುನಾಯಿತರಾಗಿರುವುದಿಲ್ಲ. ಮಾನ್ಯರೆ, ನಾನು ಈ ಉದಾಹರಣೆಗಳನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ ಮತ್ತು ನಿಮ್ಮ ಮೂಲಕ ಇಡೀ ಸದನದ ಗಮನಕ್ಕೆ ತರಲು ಬಯಸುತ್ತೇನೆ; ಆ ಮೂಲಕ, ಕರಡು ಸಿದ್ಧಗೊಂಡಾಗ, ಸಂವಿಧಾನದ ಕರಡು ರಚನೆಯಲ್ಲಿ ವ್ಯವಹಾರಗಳ ಚುಕ್ಕಾಣಿ ಹಿಡಿದವರು, ನಿಜವಾಗಿಯೂ ಚುನಾಯಿತ ಸದಸ್ಯರು ಬರುವ ಹಾಗೆ ನೋಡಿಕೊಳ್ಳಬೇಕೇ ಹೊರತು, ಕೆಲವು ರಾಜ್ಯಗಳಲ್ಲಿರುವಂತೆ, ಖೋಟಾ ಶಾಸನ ಸಭೆಯ ಖೋಟಾ ಮತದಾನದ ಮೂಲಕ ಆಯ್ಕೆಯಾದ ಸದಸ್ಯರಲ್ಲ.

ಇನ್ನೊಂದು ವಿಷಯವನ್ನು ನಾನು ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ ಮತ್ತು ಅದು ಏನೆಂದರೆ, ರಾಜ್ಯಗಳ 'ಜನಪ್ರಿಯ ಪ್ರತಿನಿಧಿಗಳು' ಈ ಸದನದ ಕೇಂದ್ರ ಸಂವಿಧಾನಸಮಿತಿಯಲ್ಲಿ ಸ್ಥಾನವನ್ನು ಪಡೆದಿಲ್ಲ ಮತ್ತು ಖಂಡ ಅಥವಾ ನಿಯಮಗಳು ರಚನೆಗೊಂಡಾಗ, ಅವರ ಅಭಿಪ್ರಾಯವು ಸಂವಿಧಾನದ ಉಪ ಸಮಿತಿಯ ಮುಂದೆ ಬರುವುದಿಲ್ಲ. ಮಾನ್ಯರೇ, ಕೇಂದ್ರ ಸಂವಿಧಾನ ಸಮಿತಿಯಲ್ಲಿ ಹುದ್ದೆಯು ಖಾಲಿಯಿರುವಾಗ, ಜನಪ್ರಿಯ ಪ್ರತಿನಿಧಿಗಳ ಕೋರಿಕೆಯು ಪರಿಗಣಿಸಲ್ಪಡುತ್ತದೆ ಮತ್ತು ಒಂದು ವೇಳೆ ಆವಶ್ಯಕವಾದರೆ, ರಾಜ್ಯಗಳಿಂದ ಜನಪ್ರಿಯ ಸದಸ್ಯರಿಗೆ ಸ್ಥಾನ ಕಲ್ಪಿಸುವುದಕ್ಕಾಗಿ ಸಮಿತಿಯ ಸಂಖ್ಯಾಬಲವನ್ನು ಹೆಚ್ಚಿಸಲಾಗುತ್ತದೆ ಎಂದು ನಾನು ನಿರೀಕ್ಷಿಸುತ್ತೇನೆ. ಇವಿಷ್ಟು ಟೀಕೆಗಳೊಂದಿಗೆ, ಟಿಪ್ಪಣಿಗಳೊಂದಿಗೆ, ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ಪ್ರಸ್ತಾವವನ್ನು ನಾನು ಸದನಕ್ಕೆ ಶಿಫಾರಸು ಮಾಡುತ್ತೇನೆ. ಮಾನ್ಯರೆ, ನಿಜವಾದ ಕರಡು ರಚನೆಯನ್ನು ಕೈಗೆತ್ತಿಕೊಂಡಾಗ, ನನ್ನ ಕೋರಿಕೆಯನ್ನು ಪರಿಗಣಿಸಲಾಗುತ್ತದೆ ಎಂದು ನಾನು ಭಾವಿಸಿದ್ದೇನೆ.

**ಪಂಡಿತ್ ಹೀರಾಲಾಲ್ ಶಾಸ್ತ್ರಿ** (ಜೈಪುರ ರಾಜ್ಯ) : *[ಮಾನ್ಯ ಸಭಾಧ್ಯಕ್ಷರೆ, ಇಂದಿನ ಚರ್ಚೆಯಲ್ಲಿ ಭಾಗವಹಿಸುವ ಉದ್ದೇಶವನ್ನು ನಾನು ಹೊಂದಿರಲಿಲ್ಲ. ಆದರೆ, ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ತಿದ್ದುಪಡಿಯನ್ನು ಮಂಡಿಸುವ ಸಂದರ್ಭದಲ್ಲಿ, ಇದು ಸದನದಲ್ಲಿ ಅವಿರೋಧ ಬೆಂಬಲವನ್ನು ಪಡೆಯಬೇಕೆಂದು ಹೇಳಿದ್ದಾರೆ; ಇದರ ಬಗ್ಗೆ ನಾನು ಒಂದಿಷ್ಟು ಹೇಳಬೇಕೆಂದು ಭಾವಿಸಿದ್ದೇನೆ.

ಎಲ್ಲ ಗೌರವದೊಂದಿಗೆ, ನಾನು ಸರ್ ಗೋಪಾಲಸ್ವಾಮಿಯವರನ್ನು ಕೇಳುತ್ತೇನೆ, ಅವರ ತಿದ್ದುಪಡಿಗೆ ಸದನದ ಅವಿರೋಧ ಬೆಂಬಲ ಹೇಗೆ ಇದೆ? ನಾನು ತಿಳಿದಿರುವ ಪ್ರಕಾರ, ಈ ಸದನದಲ್ಲಿ ಉಪಸ್ಥಿತರಿರುವ, ರಾಜ್ಯಗಳ ಜನರ ಎಲ್ಲ ಪ್ರತಿನಿಧಿಗಳು, ಕೇಂದ್ರ ಸಂವಿಧಾನಸಮಿತಿಯ ವರದಿಯಲ್ಲಿನ ಮೂಲ ಪ್ರಸ್ತಾವವೇ ಇರಬೇಕೆಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಮತ್ತೆ, ಮೇಲ್ಮನೆ ಮತ್ತು ಕೆಳಮನೆಗಳ ಸಂಖ್ಯಾಬಲವನ್ನು ಏಕೆ ಹೆಚ್ಚಿಸಬೇಕು ಎಂಬುದನ್ನು ನಾನು ತಿಳಿದುಕೊಳ್ಳಲು ಬಯಸುತ್ತೇನೆ. ನಾವು ಅಖಿಲ ಭಾರತೀಯ ರಾಜ್ಯಗಳ ಜನರ ಸಮ್ಮೇಳನದಲ್ಲಿ ಈಗಾಗಲೇ ನಿರ್ಣಯ ಅಂಗೀಕರಿಸಿದ್ದು, ಅದರ ಪ್ರಕಾರ, ದೊಡ್ಡ ರಾಜ್ಯಗಳು ಭಾರತೀಯ ಒಕ್ಕೂಟವನ್ನು ಪ್ರತ್ಯೇಕವಾಗಿ ಸೇರಿಕೊಳ್ಳಬೇಕು ಮತ್ತು ಸಣ್ಣ ರಾಜ್ಯಗಳು ಗುಂಪಾಗಿ ಭಾರತೀಯ ಒಕ್ಕೂಟವನ್ನು ಸೇರಿಕೊಳ್ಳಬೇಕು. ರಾಜ್ಯಗಳು ಭಾರತೀಯ ಒಕ್ಕೂಟವನ್ನು ಸೇರಿಕೊಳ್ಳುವುದಕ್ಕೆ ನಾವು ನಿಗದಿಪಡಿಸಿದ ಪ್ರಮಾಣ, ಮಾನದಂಡ (ನಿಯಮ) ಮತ್ತು ಅರ್ಹತೆಗಳು ಸಾಕಷ್ಟು ಉನ್ನತವಾಗಿದ್ದವು. ನಮ್ಮ ನಿಯಮ(ಮಾನದಂಡ)ದ ಪ್ರಕಾರ, ೫೦ ದಶಲಕ್ಷ ಜನಸಂಖ್ಯೆ ಮತ್ತು ೩೦ ದಶಲಕ್ಷ ವರಮಾನವನ್ನು ಹೊಂದಿರುವ ರಾಜ್ಯವು ಒಕ್ಕೂಟವನ್ನು ಪ್ರತ್ಯೇಕವಾಗಿ ಸೇರಬಹುದು. ಎರಡೂ ಸದನಗಳ ಚುನಾವಣೆಗಾಗಿ ಕನಿಷ್ಠ ಜನಸಂಖ್ಯೆಯ ಮಿತಿಯನ್ನು ಒಂದು ದಶಲಕ್ಷವೆಂದು ನಿಗದಿಪಡಿಸಿದ್ದಕ್ಕೆ ನಾವು ತೃಪ್ತಿಪಟ್ಟಿದ್ದೆವು. ಇದರ ಮಿತಿಯನ್ನು ದಶಲಕ್ಷದ

ನಾಲ್ಕನೇ ಒಂದು ಭಾಗ (ಎರಡೂವರೆ ಲಕ್ಷ)ಕ್ಕೆ ಮಿತಿಗೊಳಿಸುವುದಕ್ಕಾಗಿ ಅನೇಕ ಪ್ರಯತ್ನಗಳನ್ನು ಮಾಡಲಾಯಿತು ಮತ್ತು ಅನೇಕ ತಿದ್ದುಪಡಿಗಳನ್ನು ತರಲಾಯಿತು; ಆದರೆ, ವ್ಯರ್ಥವಾಯಿತು. ನಾನು ಸ್ಪಷ್ಟವಾಗಿ ಗಮನಿಸುತ್ತಿದ್ದೇನೆ, ಉದ್ದೇಶಿತ ತಿದ್ದುಪಡಿಯಲ್ಲಿ, ಈ ಮಿತಿಯನ್ನು ಅನುಕ್ರಮವಾಗಿ ಒಂದು ದಶಲಕ್ಷ ಹಾಗೂ ೭,೫೦,೦೦೦ ದಿಂದ ೭,೫೦,೦೦೦ ಹಾಗೂ ೫,೦೦,೦೦೦ ವೆಂದು ನಿಗದಿಪಡಿಸುವುದರ ಹಿಂದೆ ಒಂದು ನೀತಿಯಿದ್ದು, ಅದರ ಪ್ರಕಾರ, ಅರ್ಧ ದಶಲಕ್ಷಕ್ಕಿಂತ ಅಧಿಕ ಜನಸಂಖ್ಯೆಯನ್ನು ಹೊಂದಿರುವ ಕೆಲವು ರಾಜ್ಯಗಳು ಮೇಲ್ಮನೆಯಲ್ಲಿ ಮಾತ್ರವಲ್ಲ, ಕೆಳಮನೆಯಲ್ಲೂ ಸಹ ಪ್ರಾತಿನಿಧ್ಯವನ್ನು ಪಡೆಯಬಹುದಾಗಿದೆ; ನಾನು ಇದನ್ನು ಇಷ್ಟಪಡುವುದಿಲ್ಲ. ಆದ್ದರಿಂದ ನಾನು ಈ ಪ್ರಸ್ತಾವವನ್ನು ಒಪ್ಪುವುದಿಲ್ಲ. ಇದಕ್ಕೆ ಸದನದ ಅವಿರೋಧ ಬೆಂಬಲವಿಲ್ಲ. ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಬಹುಶಃ ಮೂಲ ಪ್ರಸ್ತಾವದ ಲೇಖಕರಾಗಿದ್ದಿರಬಹುದು – ವರದಿಯಲ್ಲಿದೆ – ಮತ್ತು ಒಂದು ವೇಳೆ ಇದು ನಿಜವಾಗಿದ್ದರೆ, ಅವರೇ ಸ್ವತಃ ಮೂಲ ಪ್ರಸ್ತಾವಕ್ಕೆ ತಿದ್ದುಪಡಿಯನ್ನು ಮಂಡಿಸುತ್ತಿದ್ದಾರೆ; ಹಾಗಾಗಿ ಅವರನ್ನು ವಿರೋಧಿಸುವುದು ಸೂಕ್ತವಲ್ಲ. ಹೇಗೇ ಇದ್ದರೂ, ಆದರೂ ಇದಕ್ಕೆ ಸಂಬಂಧಿಸಿದಂತೆ ನನ್ನ ಭಾವನೆಗಳನ್ನು ಹೊರಹಾಕದಿರಲು ನನ್ನಿಂದ ನಮ್ಮ ದೇಶವು ವಿಭಜನೆಯಾಗುವುದರ ಬದಲು, ರಾಜಕೀಯವಾಗಿ ಒಕ್ಕೂಟವಾಗುತ್ತಿದೆ; ಪ್ರಾಂತ್ಯಗಳು ಹಾಗೂ ರಾಜ್ಯಗಳ ನಡುವಣ ತಾರತಮ್ಯ, ಅಂತರವು ತೆಗೆದುಹಾಕಲ್ಪಟ್ಟಿರುವಾಗ, ಸಣ್ಣ ರಾಜ್ಯಗಳು ಪ್ರತ್ಯೇಕ ವಿಧಾನದಲ್ಲಿ ಒಕ್ಕೂಟಕ್ಕೆ ಸೇರ್ಪಡೆಯಾಗಬೇಕು ಎನ್ನುವುದು ಸೂಕ್ತವೆಂದು ನಾನು ಭಾವಿಸುವುದಿಲ್ಲ. ಸಣ್ಣ ರಾಜ್ಯಗಳು ಪ್ರತ್ಯೇಕ ಮಾರ್ಗದಲ್ಲಿ ಒಕ್ಕೂಟವನ್ನು ಸೇರಿಕೊಳ್ಳಬೇಕು ಎಂಬ ಯೋಚನೆಯನ್ನು ನಾನು ನಿರಾಕರಿಸುತ್ತೇನೆ. ನಾನು ತಿಳಿದಿರುವಂತೆ, ಈ ಸಣ್ಣ ರಾಜ್ಯಗಳ ಪ್ರತ್ಯೇಕ ಘಟಕವನ್ನು ರಚಿಸುವುದು ಕೇವಲ ಚುನಾವಣೆಯ ಉದ್ದೇಶಕ್ಕಾಗಿ ಮಾತ್ರ. ಇದು ಸಣ್ಣ ರಾಜ್ಯಗಳನ್ನು ಗುಂಪಾಗಿಸುವಿಕೆಯ ಮತ್ತು ರಾಜ್ಯಗಳು ಪ್ರತ್ಯೇಕ ಘಟಕಗಳಾಗಿ ಒಳಬರುವ ಎಲ್ಲ ಅವಕಾಶಗಳನ್ನು ಪಡೆಯುವ ಪ್ರಸ್ತಾವಕ್ಕೆ ವಿರುದ್ಧಾತ್ಮಕವಾಗಿದೆ ಎಂಬುದನ್ನು ನಾನು ತಿಳಿದಿದ್ದೇನೆ. ಒಂದು ವೇಳೆ ಈ ಸಣ್ಣ ರಾಜ್ಯಗಳು ಗುಂಪುಗಳಾಗಿ ಒಕ್ಕೂಟವನ್ನು ಸೇರಿಕೊಳ್ಳಬೇಕು ಎಂದು ನಾವು ಉದ್ದೇಶಿಸಿದರೆ, ಈ ಸದನದ ಚುನಾವಣೆಗಾಗಿ ಪ್ರತ್ಯೇಕ ಘಟಕಗಳಾಗಿ ಮತದಾನಮಾಡುವ ಕನಿಷ್ಠ ಅವಕಾಶವನ್ನಾದರೂ ಅವುಗಳಿಗೆ ನೀಡಲೇಬೇಕು. ನಮ್ಮ ಮೂಲ ಪ್ರಸ್ತಾವದ ಪ್ರಕಾರ ಕೇವಲ ಹದಿನೈದು ರಾಜ್ಯಗಳು ಮಾತ್ರ ವಿಧಾನಸಭಾ ಚುನಾವಣೆಗಳಲ್ಲಿ ಸ್ವತಂತ್ರ ಘಟಕಗಳಾಗಿ ಪಾಲ್ಗೊಳ್ಳಬಹುದಾಗಿದೆ. ಆದರೆ, ಅವುಗಳ ಪ್ರತಿನಿಧಿಗಳು ಗುರುತಿಸಲ್ಪಟ್ಟಿರುವುದರಿಂದ ಮತ್ತು ಈ ಕಾರಣದಿಂದಾಗಿ ಮತ್ತು ರಾಜ್ಯಗಳು ಮಂಡಿಸಿದ ಇತರ ತಿದ್ದುಪಡಿಗಳಿಂದ, ಹದಿನೈದು ಇತರ ರಾಜ್ಯಗಳು ಈಗ ಪ್ರತ್ಯೇಕ ಘಟಕಗಳಾಗಿ ಬಂದಿವೆ ಮತ್ತು ಇವು ಪ್ರತ್ಯೇಕ ಘಟಕಗಳಾಗಿ ಸೇರ್ಪಡೆಯಾಗುತ್ತಿರುವ ಸಣ್ಣ ರಾಜ್ಯಗಳ ಸಂಖ್ಯೆ; ಅದು ಹೆಚ್ಚುತ್ತದೆ. ಇದರ ಜೊತೆಗೆ ಒಂದು ಉಪಬಂಧವೂ ಕೂಡ ಸೇರ್ಪಡೆಯಾಗಿದೆ. ಸರ್ ಎನ್. ಗೋಪಾಲಸ್ವಾಮಿಯವರ ತಿದ್ದುಪಡಿಯು, ಘಟಕಗಳ ರಚನೆ ಮತ್ತು ಮತಕ್ಷೇತ್ರಗಳ ವಿಂಗಡಣೆ ಮುಂತಾದ ವಿವರಗಳನ್ನು ಒಳಗೊಂಡ ಅನೇಕ ಪ್ರಮುಖ ವಿಷಯಗಳನ್ನು ಪರಿಗಣಿಸುತ್ತದೆ. ಈ ವಿಷಯವು ಅಂತಿಮ ನಿರ್ಧಾರಗಳನ್ನು ತೆಗೆದುಕೊಳ್ಳುವ ಕೇಂದ್ರ ಸಂವಿಧಾನಸಮಿತಿಯ ಮುಂದೆ ಬರುತ್ತದೆ. ಈ ಸಂಬಂಧ ನನಗೆ ಹೇಳುವುದಕ್ಕೆ ಬಹಳ ಬೇಸರವಾಗುತ್ತದೆ; ಏಕೆಂದರೆ, ಈ ಸಮಿತಿಯಲ್ಲಿ ಇದುವರೆಗೆ ರಾಜ್ಯಗಳ ಜನರ ಪ್ರತಿನಿಧಿಗಳಿಲ್ಲ. ಹೇಗೇ ಇದ್ದರೂ ಇದು ವಿಷಯವಲ್ಲ. ನಾವು ಇಲ್ಲಿ ಬಹಳ ಮುಖ್ಯವಾದ ಮತ್ತು ಅತಿ ಮಹತ್ತ್ವದ ವಿಷಯವನ್ನು ಚರ್ಚಿಸುತ್ತಿದ್ದೇವೆ ಮತ್ತು ನಮ್ಮ ನಿರ್ಧಾರವನ್ನು ಕೇಂದ್ರ ಸಂವಿಧಾನಸಮಿತಿಯ ಮುಂದೆ ಇಡಲಾಗುತ್ತದೆ. ಮಹಾರಾಜ ನಾಗೇಂದ್ರ ಸಿಂಗ್‌ಜಿಯವರು, ಈ ಸಮಿತಿಯಲ್ಲಿ ಸಣ್ಣ ರಾಜ್ಯಗಳ ಪ್ರತಿನಿಧಿಗಳು ಇರಲೇಬೇಕೆಂದು ಇಲ್ಲಿ ಒತ್ತಾಯಿಸಿದ್ದಾರೆ. ಎಷ್ಟು ಪ್ರತಿನಿಧಿಗಳನ್ನು ತೆಗೆದುಕೊಳ್ಳಬೇಕೆಂದು ನನಗೆ ತಿಳಿದಿಲ್ಲ; ಆದರೆ, ಈ ಸಮಿತಿಗೆ ರಾಜ್ಯಗಳ ಜನರ ಪ್ರತಿನಿಧಿಗಳನ್ನು ತೆಗೆದುಕೊಳ್ಳಲೇಬೇಕೆಂಬ ಬೇಡಿಕೆಗೆ ನನ್ನ ಧ್ವನಿಯನ್ನು ಸೇರಿಸಲೇಬೇಕು. ಅತ್ಯಂತ ಮಹತ್ತ್ವದ

ಅನೇಕ ವಿಷಯಗಳು ಈ ಸಮಿತಿಯಲ್ಲಿ ಚರ್ಚೆಯಾಗುತ್ತವೆ ಮತ್ತು ನಿರ್ಧಾರವನ್ನು ಅನಂತರ ತೆಗೆದುಕೊಳ್ಳಲಾಗುತ್ತದೆ ಮತ್ತು ಆದ್ದರಿಂದ, ತಮ್ಮ ಅಭಿಪ್ರಾಯದ ಧ್ವನಿಯನ್ನು ಎತ್ತುವುದಕ್ಕಾಗಿ ರಾಜ್ಯಗಳ ಜನರ ಪ್ರತಿನಿಧಿಗಳು ಇಲ್ಲಿ ಇರಲೇಬೇಕು. ನಾನು ಸದನಕ್ಕೆ ಈ ನಿರ್ದಿಷ್ಟ ಎಚ್ಚರಿಕೆಯನ್ನು ನೀಡಲು ಬಯಸುತ್ತೇನೆ, ಪ್ರತಿ ಪ್ರತ್ಯೇಕ ಘಟಕಗಳ ಪ್ರತಿನಿಧಿಗಳಾಗಿ ಬರುವುದಕ್ಕೆ ಸಣ್ಣ ರಾಜ್ಯಗಳಿಗೆ ಪ್ರತ್ಯೇಕವಾಗಿ ಅವಕಾಶ ನೀಡಲೇಬಾರದು. ಅವು ಅಧಿಕ ಗುಂಪುಗಳಾದಷ್ಟೂ ಹೆಚ್ಚು ಉತ್ತಮ. ಇದನ್ನು ಹೇಳುವುದಕ್ಕೆ ನನ್ನ ಬಳಿ ಕಾರಣಗಳಿವೆ. ಹೇಗೇ ಇದ್ದರೂ, ಇದರ ಮೇಲಿನ ವಿವಾದಗಳ ಒಳಗೆ ನುಗ್ಗುವುದು ಸೂಕ್ತವೆಂದು ನಾನು ಭಾವಿಸುವುದಿಲ್ಲ. ಆ ರಾಜ್ಯಗಳಲ್ಲಿ ನಡೆಯುತ್ತಿರುವ ದೌರ್ಜನ್ಯ ಮತ್ತು ದಮನಕಾರ್ಯಗಳ ಬಗ್ಗೆ ಕೇಳಿದಾಗ ಅಗಾಧ ನೋವುಂಟಾಗುತ್ತದೆ ಮತ್ತು ವಿಸ್ಮಯವೆನಿಸುತ್ತದೆ. ರಾಜ್ಯಗಳ ಜನರು ಆಡಳಿತಗಾರರ ದೌರ್ಜನ್ಯಗಳ ಕಾರಣದಿಂದಾಗಿ ತುಂಬ ಬಸವಳಿದು ಹೋಗಿದ್ದಾರೆ, ನಿರ್ಗತಿಕರಾಗಿದ್ದಾರೆ. ಈ ಸಭೆಯನ್ನು ಪ್ರತ್ಯೇಕವಾಗಿ ಅಥವಾ ಗುಂಪಿನ ರೂಪದಲ್ಲಿ ಸೇರಿಕೊಂಡ ಅನೇಕ ರಾಜ್ಯಗಳು, ಹಾಗೆ ಮಾಡಿದ್ದರಿಂದ ನಮ್ಮ ನಾಯಕರ ಮತ್ತು ರಾಷ್ಟ್ರೀಯ ಕಾಂಗ್ರೆಸ್‌ನ ನಿರ್ಬಂಧಕ್ಕೆ ತಾವು ಒಳಗಾದಂತೆ ಭಾವಿಸುತ್ತಿವೆ. ನಾನು ಈ ವಿಷಯಕ್ಕೆ ವಿರುದ್ಧವಾಗಿ ಏನನ್ನೂ ಹೇಳಲು ಬಯಸುವುದಿಲ್ಲ; ಆದರೆ, ಈ ಸಭೆಯನ್ನು ಸೇರಿಕೊಂಡ ಸಣ್ಣ ಹಾಗೂ ದೊಡ್ಡ ರಾಜ್ಯಗಳು ಹೇಗೆ ಭಾವಿಸುತ್ತಿವೆಯೆಂದರೆ, ತಾವು ತಮ್ಮ ಜನರ ಮೇಲೆ ಸಂಪೂರ್ಣ ಅಧಿಕಾರವನ್ನು ಹೊಂದುವುದಕ್ಕೆ ಲಿಖಿತ ರೂಪದಲ್ಲಿ ಅಧಿಕಾರವನ್ನು ಬರೆದುಕೊಟ್ಟಂತೆ ಭಾವಿಸುತ್ತಿವೆ. ಹಾಗಾಗಿ ಅವರು ಜನರ ಮೇಲೆ ತಮ್ಮ ಪ್ರತ್ಯೇಕ ಅಧಿಕಾರವನ್ನು ಪ್ರಯೋಗಿಸಲು ಹೊರಟಿದ್ದಾರೆ ಅಷ್ಟೇ ಅಲ್ಲ, ಜನರನ್ನು ವಿರೋಧಿಸುವುದಕ್ಕೂ ಆರಂಭಿಸಿದ್ದಾರೆ. ಒಂದು ವೇಳೆ ನಾವು ರಾಜ್ಯಗಳ ಮಹತ್ತ್ವದ ವಿಷಯಗಳನ್ನು ಕುರಿತು ತನಿಖೆ ಮಾಡಲು ಹೊರಟರೆ, ಇವು ಪ್ರತಿ ದಿನವೂ ಚಿತ್ರಗಳ ಸಮೇತ ದಿನಪತ್ರಿಕೆಗಳ ಮುಖಪುಟಗಳಲ್ಲಿ ರಾರಾಜಿಸುತ್ತಿವೆ; ಇಲ್ಲಿ ನಾವು, ರಾಜ್ಯಗಳ ಆಡಳಿತಗಾರರಿಂದ ಜನರ ಮೇಲೆ ಅಪರಿಮಿತ ದೌರ್ಜನ್ಯ ನಡೆಯುತ್ತಿರುವುದನ್ನು ಕಾಣಬಹುದಾಗಿದೆ. ಈ ಎಲ್ಲ ವಿಷಯಗಳನ್ನು ಹೇಳುವುದಕ್ಕೆ ಇದು ಸೂಕ್ತ ಸಮಯವಲ್ಲ; ಅದೇ ವೇಳೆಯಲ್ಲಿ ನನ್ನ ಹೃದಯದ ಬೇಗುದಿಯನ್ನು ಸ್ವಲ್ಪ ಸಮಯ ಹೇಳಲೇಬೇಕಾಗಿದೆ. ಶ್ರೀಯುತ ವ್ಯಾಸ್ ಅವರು ಇದೀಗ ತಾನೇ ರಾಜ್ಯದ ಆಡಳಿತ ವರ್ಗವು ಸಾಮಾನ್ಯವಾಗಿ ಚುನಾವಣೆಯಲ್ಲಿ ಮೂಗು ತೂರಿಸುತ್ತವೆ ಎಂದು ಹೇಳಿದ್ದಾರೆ. ಆದ್ದರಿಂದ, ಇದಕ್ಕೆ ಸಂಬಂಧಿಸಿದಂತೆ ನಾನು, ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ನಿರ್ದಿಷ್ಟ ಗಮನವನ್ನು ಸೆಳೆಯಬಯಸುತ್ತೇನೆ ಮತ್ತು ಅವರಲ್ಲಿ ಮನವಿ ಮಾಡುವುದೇನೆಂದರೆ, ಮತಕ್ಷೇತ್ರಗಳು ಹಾಗೂ ಘಟಕಗಳು ರಚನೆಯಾದಾಗ, ಸಣ್ಣ ರಾಜ್ಯಗಳು ಪ್ರತ್ಯೇಕ ಘಟಕಗಳಾಗಿ ದೊಡ್ಡ ಪ್ರಮಾಣದಲ್ಲಿ ಬಾರದಂತೆ ನೋಡಿಕೊಳ್ಳಬೇಕು ಮತ್ತು ರಾಜ್ಯಗಳ ಜನರ ಪ್ರತಿನಿಧಿಗಳ ಅಭಿಪ್ರಾಯ, ದೃಷ್ಟಿಕೋನಗಳೂ ಸಹ ರಕ್ಷಿಸಲ್ಪಡಬೇಕು.

ನಾನು ಈ ಪ್ರಸ್ತಾವವನ್ನು ವಿರೋಧಿಸುವುದಿಲ್ಲ; ಆದರೆ, ಕನಿಷ್ಠಪಕ್ಷ ರಾಜ್ಯಗಳ ವಿಷಯಗಳನ್ನು ಕುರಿತಾದ ಧ್ವನಿಯು ನಿರ್ಲಕ್ಷಕ್ಕೆ ಗುರಿಯಾಗಬಾರದು ಎಂದು ಹೇಳಲು ಬಯಸುತ್ತೇನೆ. ಅಲ್ಲದೇ, ರಾಜ್ಯಗಳ ವಿಷಯಗಳ ಪ್ರತಿನಿಧಿಗಳು ಸಮಿತಿಯಲ್ಲಿ ಸೇರ್ಪಡೆಯಾಗುವಂತೆ ನೋಡಿಕೊಳ್ಳಬೇಕು ಎಂದು ಗೌರವಾನ್ವಿತ ಸಭಾಧ್ಯಕ್ಷರಲ್ಲಿ ಮನವಿಯನ್ನೂ ಕೂಡ ನಾನು ಮಾಡುತ್ತೇನೆ.]*

**ಶ್ರೀ ಸತ್ಯನಾರಾಯಣ ಸಿನ್ಹ :** ವಿಷಯವನ್ನು ಮತಕ್ಕೆ ಹಾಕಬಹುದು.

**ಮಾನ್ಯ ಸಭಾಧ್ಯಕ್ಷರು :** ಮುಂದಿಟ್ಟಿರುವ ವಿಷಯ :

'ಈಗ ವಿಷಯವನ್ನು ಮತಕ್ಕೆ ಹಾಕಬಹುದು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ನಾನು ಈಗ ತಿದ್ದುಪಡಿಗಳನ್ನು ಹಾಕುತ್ತೇನೆ. ನಾನು ಮೊದಲಿಗೆ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಗಳನ್ನು ಹಾಕುತ್ತೇನೆ.

ಮುಂದಿಟ್ಟಿರುವ ವಿಷಯ :

೧. ಖಂಡ ೧೪ರ ಉಪಖಂಡ (೧)ರ ಸಂಗತಿ (ಎ), (ಬಿ) ಮತ್ತು (ಸಿ)ಗಳಿಗೆ ಈ ಕೆಳಗಿನದ್ದು ಸೇರ್ಪಡೆಯಾಗಬೇಕು:

"(ಎ) ರಾಜ್ಯಗಳ ಸಮಿತಿ(ವಿಧಾನಪರಿಷತ್ತು)ಯ ಸಂಖ್ಯಾಬಲವು ಆ ರಾಜ್ಯದ ಪ್ರಜೆಗಳ ಸದನ(ವಿಧಾನಸಭೆ)ದ ಸಂಖ್ಯಾಬಲದ ಅರ್ಧವನ್ನು ಮೀರದಂತೆ ನಿಗದಿಯಾಗಬೇಕು. ಈ ಸಮಿತಿಯ ೨೫ಕ್ಕಿಂತ ಕಡಿಮೆ ಸದಸ್ಯರು ಅಧಿಕಾರಿಕ ಮತಕ್ಷೇತ್ರಗಳಿಂದ ಅಥವಾ ೧೯೩೭ರ ಐರಿಷ್ ಸಂವಿಧಾನದ ಪ್ರಕರಣ ೧೮(೭)ರಲ್ಲಿನ ಉಪಬಂಧಗಳ ಆಧಾರದ ಮೇಲೆ ರಚಿತವಾದ ಪಂಚಾಯತರ ಪಟ್ಟಿಯವರ ಮತದಿಂದ ಆಯ್ಕೆಯಾಗಬೇಕು. ಸಮಿತಿಯ ಉಳಿದ ಸದಸ್ಯರು ಘಟಕಗಳನ್ನು ಪ್ರತಿನಿಧಿಸುವ ಮತಕ್ಷೇತ್ರಗಳಿಂದ ಆಯ್ಕೆಯಾಗಬೇಕು; ವಿಸ್ತಾರವಾಗಿ ಲೆಕ್ಕಹಾಕಲಾಗುವ ಪ್ರಮಾಣದ ಮೇಲೆ:

ಷರತ್ತು ಏನೆಂದರೆ, ಭಾರತೀಯ ರಾಜ್ಯಗಳ ಒಟ್ಟಾರೆ ಪ್ರಾತಿನಿಧ್ಯವು ಈ ಉಳಿಕೆಯ ಶೇಕಡಾ ೪೦ನ್ನು ಮೀರಬಾರದು.

**ವಿವರಣೆ :** ಘಟಕವೆಂದರೆ, ಪ್ರಾಂತ್ಯ ಅಥವಾ ಭಾರತೀಯ ರಾಜ್ಯಗಳು ತಮ್ಮ ವೈಯಕ್ತಿಕ ಹಕ್ಕಿನ ಮೂಲಕ ಒಕ್ಕೂಟದ ಸಂಸತ್ತಿಗೆ ಆಯ್ಕೆಮಾಡುವ ಸದಸ್ಯರು. ಭಾರತೀಯ ರಾಜ್ಯಗಳ ವಿಷಯದಲ್ಲಿ, ರಾಜ್ಯಗಳ ಸಮಿತಿಯ (ವಿಧಾನಪರಿಷತ್ತು) ಪ್ರತಿನಿಧಿಗಳನ್ನು ಆಯ್ಕೆಮಾಡುವ ಉದ್ದೇಶಕ್ಕಾಗಿ ಒಟ್ಟಾಗಿ ಗುಂಪನ್ನಾಗಿಸಲಾಗಿದೆ; ಇಲ್ಲಿ ಘಟಕವೆಂದರೆ, ಈ ರೀತಿ ರಚಿಸಲಾದ ಗುಂಪು.

(ಬಿ) ರಾಜ್ಯಗಳ ಸಮಿತಿ (ವಿಧಾನಪರಿಷತ್ತು)ಯಲ್ಲಿ ಪ್ರತಿ ಘಟಕದ ಪ್ರತಿನಿಧಿಗಳು ಇಂತಹ ಘಟಕದ ಶಾಸಕಾಂಗಸಭೆಯ ಚುನಾಯಿತ ಪ್ರತಿನಿಧಿಗಳಿಂದ ಆಯ್ಕೆಯಾಗುತ್ತಾರೆ ಮತ್ತು ಶಾಸಕಾಂಗಸಭೆಯು ಎರಡು ಸದನಗಳನ್ನು ಹೊಂದಿರುವ ಸಂದರ್ಭದಲ್ಲಿ, ಶಾಸಕಾಂಗಸಭೆಯ ಕೆಳಮನೆಯ ಚುನಾಯಿತ ಸದಸ್ಯರಿಂದ.

(ಸಿ) ಪ್ರಜೆಗಳ ಸದನದ ಸಂಖ್ಯಾಬಲವು ೫೦೦ಕ್ಕೆ ಮೀರದ ಹಾಗೆ ನಿಗದಿಯಾಗಬೇಕು. ಒಕ್ಕೂಟದ ಘಟಕಗಳು – ಅವು ಪ್ರಾಂತ್ಯಗಳಾಗಿರಬಹುದು, ಭಾರತೀಯ ರಾಜ್ಯಗಳಾಗಿರಬಹುದು ಅಥವಾ ರಾಜ್ಯಗಳ ಗುಂಪಾಗಿರಬಹುದು – ಮತಕ್ಷೇತ್ರಗಳಾಗಿ ವಿಂಗಡಿಸಲ್ಪಡಬೇಕು ಮತ್ತು ಪ್ರತಿ ಮತಕ್ಷೇತ್ರಕ್ಕೆ ಹಂಚಿಕೊಡಲಾಗುವ ಪ್ರತಿನಿಧಿಗಳ ಸಂಖ್ಯೆಯನ್ನು ಹೇಗೆ ನಿರ್ಧರಿಸಬೇಕೆಂದರೆ, ಪ್ರತಿ ೭,೫೦,೦೦೦ ಜನಸಂಖ್ಯೆಗೆ ಒಂದಕ್ಕಿಂತ ಕಡಿಮೆ ಇಲ್ಲದ ಪ್ರತಿನಿಧಿಗಳಿರಬೇಕು ಮತ್ತು ಪ್ರತಿ ೫,೦೦,೦೦೦ ಜನಸಂಖ್ಯೆಗೆ ಒಂದಕ್ಕಿಂತ ಹೆಚ್ಚು ಪ್ರತಿನಿಧಿಗಳಿರಬಾರದು:

ಷರತ್ತು ಏನೆಂದರೆ, ಒಟ್ಟು ಭಾರತೀಯ ರಾಜ್ಯಗಳು ಮತ್ತು ಅವುಗಳ ಒಟ್ಟು ಜನಸಂಖ್ಯೆಯ ಅನುಪಾತವು, ಪ್ರಾಂತ್ಯಗಳ ಒಟ್ಟು ಪ್ರತಿನಿಧಿಗಳು ಮತ್ತು ಅವುಗಳ ಒಟ್ಟು ಜನಸಂಖ್ಯೆಯ ಅನುಪಾತಕ್ಕಿಂತ ಅಧಿಕವಾಗಿರಬಾರದು.'

'೨. ಖಂಡ ೧೪ರ ಉಪಖಂಡ (೧)ರಲ್ಲಿ ಈ ಕೆಳಗಿನ ಹೊಸ ಸಂಗತಿ (ಇ) ಸೇರ್ಪಡೆಯಾಗಬೇಕು.

(ಇ) ರಾಜ್ಯಗಳ ಸಮಿತಿ (ವಿಧಾನಪರಿಷತ್ತು) ಮತ್ತು ರಾಜಮಾನ್ಯರ ಸದನದ ನೈಜ ಸಂಖ್ಯಾಬಲ ಮತ್ತು ಅದರ ಹಂಚಿಕೆಯು ಒಕ್ಕೂಟದ ಘಟಕಗಳ ನಡುವೆ ಹೇಗೆ ನಿಗದಿಯಾಗಿದೆ ಎಂದರೆ, ದಾಳ ನಿರ್ಣಯದ ಸಂಖ್ಯೆ, ಅಧಿಕಾರಿಕ ಪಂಚಾಯತರ ಪಟ್ಟಿಯ ಸ್ವಭಾವ ಮತ್ತು ಸಂವಿಧಾನ ಅಥವಾ ರಾಜ್ಯಗಳ ಸಮಿತಿಯ (ವಿಧಾನಪರಿಷತ್ತು) ಮತಕ್ಷೇತ್ರಗಳು, ಎರಡು ಸದನಗಳ ಚುನಾವಣೆಯ ಉದ್ದೇಶಕ್ಕಾಗಿ ಸಣ್ಣ ರಾಜ್ಯಗಳನ್ನು ಗುಂಪಾಗಿಸಿ ಘಟಕಗಳಾಗಿ ಮಾಡುವ ವಿಧಾನ, ಎರಡು ಸದನಗಳಿಗೆ ಪ್ರಾದೇಶಿಕ ಮತಕ್ಷೇತ್ರಗಳನ್ನು ವಿಂಗಡಿಸುವುದಕ್ಕಾಗಿನ ಮೂಲತತ್ತ್ವ ಮತ್ತು ಇತರ ಅಧೀನ ವಿಷಯಗಳು ಕೇಂದ್ರ ಸಂವಿಧಾನಸಮಿತಿಗೆ ಸೂಚಿಸಲ್ಪಡಬೇಕು ಮತ್ತು ಅದರಿಂದ ಸಂಶೋಧನೆಗೊಳಪಡಬೇಕು. ಅಂತಹ ಸಂಶೋಧನೆಗಳ ಅನಂತರ, ಕೇಂದ್ರ ಸಂವಿಧಾನದ ಸಮಿತಿಯು ಕೇಂದ್ರ ಸಂವಿಧಾನದ ಕರಡು ಮೂಲಪಾಠದಲ್ಲಿ ಸೇರಿಸಬೇಕಾದ ಈ ವಿಷಯಗಳನ್ನು ಕುರಿತಾದ ಅವಕಾಶ(ನಿಯಮ)ಗಳಿಗೆ ಸಂಬಂಧಿಸಿದಂತೆ ಸಂವಿಧಾನ ರಚನಾಸಭೆಯ ಅಧ್ಯಕ್ಷರಿಗೆ ಶಿಫಾರಸು ಮಾಡಬೇಕು."

ಈ ತಿದ್ದುಪಡಿಗಳನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಇಲ್ಲಿ, ಮಂಡಿಸಲಾಗಿರುವ ಇನ್ನೂ ಕೆಲವು ತಿದ್ದುಪಡಿಗಳಿವೆ. ನಾನು ಈಗ

ಶ್ರೀ ನಜಿರುದ್ದೀನ್ ಅಹ್ಮದ್ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ಮುಂದಿಟ್ಟಿರುವ ವಿಷಯ :

"ಖಂಡ ೧೪ರ ಉಪಖಂಡ (೨) ತೆಗೆಯಬೇಕು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಇಲ್ಲಿ ಶ್ರೀ ಶಿಬನ್‌ಲಾಲ್ ಸಕ್ಸೇನ ಅವರ ಇನ್ನೊಂದು ತಿದ್ದುಪಡಿಯಿದ್ದು, ಅದನ್ನು ನಾನು ಮತಕ್ಕೆ ಹಾಕುತ್ತೇನೆ.

ಮುಂದಿಟ್ಟಿರುವ ವಿಷಯ :

"ಖಂಡ ೧೪ರ ಉಪಖಂಡ (೪)ರಲ್ಲಿ 'ಮೂರನೇ ಒಂದು' ಎಂಬ ಶಬ್ದದ ಬದಲಿಗೆ 'ಅರ್ಧ' ಎಂದು ಬದಲಿಸಬೇಕು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಬೇಗಮ್ ಐಜಾಜ್ ರಸೂಲ್ ಅವರಿಂದ ಮಂಡಿಸಲ್ಪಟ್ಟ ತಿದ್ದುಪಡಿಯನ್ನು ನಾನು ಮತಕ್ಕೆ ಹಾಕುತ್ತೇನೆ.

ಮುಂದಿಟ್ಟಿರುವ ವಿಷಯ :

"ಖಂಡ ೧೪ರ ಉಪಖಂಡ (೪)ರಲ್ಲಿ 'ಎರಡನೆಯ' ಎಂಬ ಶಬ್ದದ ಬದಲು 'ಮೂರನೆಯ' ಎಂಬ ಶಬ್ದವನ್ನು ಸೇರಿಸಬೇಕು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ನಾನು ಈಗ ಮೂಲ ಖಂಡವನ್ನು, ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ, ಈಗಾಗಲೇ ಅಂಗೀಕಾರಗೊಂಡ ತಿದ್ದುಪಡಿಯಿಂದ ಪರಿಷ್ಕರಣೆಗೊಂಡ ರೂಪದಲ್ಲಿ ಮತಕ್ಕೆ ಹಾಕುತ್ತೇನೆ.

ಮುಂದಿಟ್ಟಿರುವ ವಿಷಯ :

"ಖಂಡ ೧೪, ತಿದ್ದುಪಡಿಗೊಳಗೊಂಡಂತೆ, ಅಂಗೀಕಾರವಾಗಬೇಕು."

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಶ್ರೀ ಎಮ್.ಎಸ್. ಅನೆ** : ಈ ಖಂಡದ ಅಡಿಯಲ್ಲಿ ಒಂದು ಸೂಚನೆಯಿದೆ ಮತ್ತು ಆ ಸೂಚನೆಯಲ್ಲಿ ವಿವಿಧ ಪ್ರಾಂತ್ಯಗಳು ಮತ್ತು ರಾಜ್ಯಗಳನ್ನು ಹೆಸರಿಸಲಾಗಿದೆ. ಆ ಹೆಸರುಗಳಲ್ಲಿ ನಾನು ಕೇಂದ್ರೀಯ ಪ್ರಾಂತ್ಯವನ್ನು 'ಸಿ.ಪಿ.' ಎಂದು ಉಲ್ಲೇಖಿಸಿರುವುದನ್ನು ಗಮನಿಸಿದ್ದೇನೆ. ಅಧಿನಿಯಮದ ಅಡಿಯಲ್ಲಿ ಈ ಪ್ರಾಂತ್ಯದ ಹೆಸರನ್ನು 'ಸಿ.ಪಿ. ಮತ್ತು ಬೇರಾರ್' ಎಂದು ರಚಿಸಲಾಗಿದೆ. ಆ ಹೆಸರು ನಾವು ಈಗಾಗಲೇ ಅಂಗೀಕರಿಸಿರುವ ಇತರ ಕೆಲವು ಖಂಡಗಳಲ್ಲಿ ನಕಲು ಮಾಡಲಾಗಿದೆ. ಆದ್ದರಿಂದ ನಾನು ಅಂದುಕೊಂಡಿದ್ದೇನೆ, ಇದೊಂದು ಕಾರಕೂನಿಯ ತಪ್ಪಾಗಿರಬಹುದು. ಆದರೆ, ಇದನ್ನು ನಿಮ್ಮ ಗಮನಕ್ಕೆ ಮತ್ತು ಸದನದ ಗಮನಕ್ಕೆ ತರಲು ನಾನು ಬಯಸುತ್ತೇನೆ. ಅಂತಿಮ ಕರಡನ್ನು ತಯಾರಿಸುವಾಗ, ಒಂದು ವೇಳೆ ಸೂಚನೆ ಉಳಿದುಕೊಂಡಿದ್ದರೆ, ಈ ಪ್ರಾಂತ್ಯದ ಸರಿಯಾದ ಹೆಸರನ್ನು 'ಕೇಂದ್ರೀಯ ಪ್ರಾಂತ್ಯಗಳು ಮತ್ತು ಬೇರಾರ್' ಎಂದು ನೀಡಬೇಕು.

**ಮಾನ್ಯ ಸಭಾಧ್ಯಕ್ಷರು** : ನನಗನ್ನಿಸುತ್ತದೆ ಅದು ಕಣ್ತಪ್ಪಿನ ದೋಷವಾಗಿದೆ. ಏಕೆಂದರೆ, ಪರಿಶಿಷ್ಟದಲ್ಲಿ ಇದು ಸರಿಯಾಗಿ ದಾಖಲಾಗಿದೆ.

## ಭಾಗ – ೧೦

**ಮಾನ್ಯ ಸಭಾಧ್ಯಕ್ಷರು** : ನಾವು ಈಗ ಭಾಗ ೧೦ನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ಈ ಭಾಗದ ಮಂಡಿಸುವಿಕೆಯನ್ನು ಮುಂದೂಡುವುದಕ್ಕೆ ನಾನು ನಿಮ್ಮ ಅನುಮತಿಯನ್ನು ಕೋರುತ್ತೇನೆ. ಏಕೆಂದರೆ, ಪ್ರಾಂತೀಯ ಶಾಸನ ಸಭೆಗೆ ಅಧಿಕಾರವನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಪ್ರಾಂತೀಯ ಸಂವಿಧಾನಕ್ಕೆ ತಿದ್ದುಪಡಿ ತರುವುದಕ್ಕೆ ಕೆಲವು

ಸಾಂವಿಧಾನಿಕ ಅಧಿಕಾರ ಇರಬೇಕು ಎಂಬಂತಹ ಅತ್ಯಂತ ಮಹತ್ತ್ವದ ವಿಷಯವನ್ನು ಕೆಲವು ತಿದ್ದುಪಡಿಗಳು ಎತ್ತಿವೆ. ಅದಕ್ಕೆ ಸ್ವಲ್ಪ ಪರಿಶೀಲನೆಯ ಅಗತ್ಯವಿದೆ. ಆದ್ದರಿಂದ, ನೀವು ಅನುಮತಿಸಿದರೆ, ಈ ವಿಷಯವನ್ನು ನಾವು ಮುಂದಿನ ಅಧಿವೇಶನದಲ್ಲಿ ಕೈಗೆತ್ತಿಕೊಳ್ಳಬಹುದು.

**ಮಾನ್ಯ ಸಭಾಧ್ಯಕ್ಷರು** : ಭಾಗ ೧೦ರ ಪರಿಗಣನೆಯನ್ನು ತಡೆಹಿಡಿಯಲಾಗಿದೆ.

## ಭಾಗ – ೧೧

**ಮಾನ್ಯ ಸಭಾಧ್ಯಕ್ಷರು** : ನಾವು ಈಗ ಭಾಗ ೧೧ಅನ್ನು ಕೈಗೆತ್ತಿಕೊಳ್ಳೋಣ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಭಾಗ ೧೧ರ ಪ್ರಥಮ ಖಂಡವು ಈ ಕೆಳಗಿನಂತೆ ಇದೆ :

"ಒಕ್ಕೂಟ ಸರ್ಕಾರವು, ಎಲ್ಲ ಆಸ್ತಿ, ಚಿರಸ್ಥಿರ ವಸ್ತುಗಳು, ಹಕ್ಕುಗಳು ಮತ್ತು ಬಾಧ್ಯತೆಗಳಿಗೆ ಸಂಬಂಧಿಸಿದಂತೆ, ಭಾರತ ಸರ್ಕಾರ ಅಧಿನಿಯಮ ೧೯೩೫ರ ಅಡಿಯಲ್ಲಿ ರಚನೆಯಾದ ಭಾರತ ಸರ್ಕಾರಕ್ಕೆ ಉತ್ತರಾಧಿಕಾರಿಯಾಗಿರುತ್ತದೆ."

ಇತ್ತೀಚಿನ ಘಟನಾವಳಿಗಳಿಗೆ ಸಂಬಂಧಿಸಿದಂತೆ, ಇತ್ತೀಚಿನ ನಿಯಮಗಳನ್ನು ತರುವ ಶಾಬ್ದಿಕ ಸೇರ್ಪಡೆಯೊಂದಿಗೆ ಈ ಖಂಡವನ್ನು ಮಂಡಿಸಲು ನಾನು ನಿಮ್ಮ ಅನುಮತಿಯನ್ನು ಕೋರುತ್ತೇನೆ. ಈ ಕರಡನ್ನು ರಚಿಸಿದಾಗ, ಸಂಸತ್ತು ಭಾರತ ಸ್ವಾತಂತ್ರ್ಯ ಅಧಿನಿಯಮವನ್ನು ಅಂಗೀಕರಿಸಿತ್ತು. ಆ ಅಧಿನಿಯಮವು ನೀಡಿದ ಅಧಿಕಾರಗಳ ಅಡಿಯಲ್ಲಿ, ಭಾರತ ಸರ್ಕಾರ ಅಧಿನಿಯಮದ ವ್ಯಾಪಕವಾದ ಮಾರ್ಪಾಟುಗಳು ಗವರ್ನರ್ ಜನರಲ್ ಅವರಿಂದ ಆದೇಶಿಸಲ್ಪಟ್ಟವು. ಆದ್ದರಿಂದ, ಆ ಸಮಯದಲ್ಲಿ ನಾವು ಈ ಹೊಸ ಸಂವಿಧಾನವನ್ನು ಜಾರಿಗೆ ತರುವಂತಾಯಿತು; ಇದು ಮಾರ್ಪಾಟುಗೊಂಡ ರೂಪದಲ್ಲಿನ ಭಾರತೀಯ ಸರ್ಕಾರ ಅಧಿನಿಯಮ ೧೯೩೫. ಆದ್ದರಿಂದ, ಹಾಗೆ ಮಾಡಲು ನೀವು ಅನುಮತಿ ನೀಡಿದರೆ, ನಾನು ಮಂಡಿಸುತ್ತೇನೆ:

"ಖಂಡ ೧ರಲ್ಲಿ, 'ಭಾರತ ಸರ್ಕಾರ ಅಧಿನಿಯಮ ೧೯೩೫' ಶಬ್ದಗಳ ಅನಂತರ 'ಭಾರತೀಯ ಸ್ವಾತಂತ್ರ್ಯ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಮಾರ್ಪಾಟುಗೊಂಡಂತೆ' ಶಬ್ದಗಳು ಸೇರ್ಪಡೆಯಾಗಬೇಕು."

**ಮಾನ್ಯ ಸಭಾಧ್ಯಕ್ಷರು** : ಖಂಡ ೧ನ್ನು ಕೆಲವು ಬದಲಾವಣೆಗಳೊಂದಿಗೆ ಮಂಡಿಸಲಾಗಿದೆ. ಅನೇಕ ತಿದ್ದುಪಡಿಗಳಿಗೆ ನಾನು ಸೂಚನೆಗಳನ್ನು ಸ್ವೀಕರಿಸಿದ್ದೇನೆ.

**ಶ್ರೀ ಕೆ. ಸಂತಾನಮ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಒಂದು ವೇಳೆ ಆ ಅಭಿವ್ಯಕ್ತಿಯನ್ನು ಸೇರಿಸಿದರೆ ಏನಾಗುತ್ತದೆಂದು ನಾನು ತಿಳಿದುಕೊಳ್ಳಬಯಸುತ್ತೇನೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ನನ್ನ ತಿದ್ದುಪಡಿಯ ಅನಂತರ ಖಂಡವು ಈ ರೀತಿ ಇರುತ್ತದೆ:

"೧. ಒಕ್ಕೂಟ ಸರ್ಕಾರವು, ಎಲ್ಲ ಆಸ್ತಿ, ಚಿರಸ್ಥಿರ ವಸ್ತುಗಳು, ಹಕ್ಕುಗಳು ಮತ್ತು ಬಾಧ್ಯತೆಗಳಿಗೆ ಸಂಬಂಧಿಸಿದಂತೆ, ಭಾರತ ಸರ್ಕಾರ ಅಧಿನಿಯಮ ೧೯೩೫ರ ಅಡಿಯಲ್ಲಿ, ಭಾರತೀಯ ಸ್ವಾತಂತ್ರ್ಯ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಮಾರ್ಪಾಟುಗೊಂಡಂತೆ ರಚನೆಯಾದ ಭಾರತ ಸರ್ಕಾರಕ್ಕೆ ಉತ್ತರಾಧಿಕಾರಿಯಾಗಿರುತ್ತದೆ."

**ಶ್ರೀ ಕೆ. ಸಂತಾನಮ್** : ನಾನು ನನ್ನ ತಿದ್ದುಪಡಿ ಸಂಖ್ಯೆ ೪೦೧ನ್ನು ಮಂಡಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಪರಿಷ್ಕರಣೆಗೊಂಡ ರೂಪದಲ್ಲಿ ಮಂಡನೆಯಾದ ಖಂಡವು ಈ ರೀತಿ ಇದೆ: "೧. ಒಕ್ಕೂಟ ಸರ್ಕಾರವು, ಎಲ್ಲ ಆಸ್ತಿ, ಚಿರಸ್ಥಿರ ವಸ್ತುಗಳು, ಹಕ್ಕುಗಳು ಮತ್ತು ಬಾಧ್ಯತೆಗಳಿಗೆ ಸಂಬಂಧಿಸಿದಂತೆ, ಭಾರತ ಸರ್ಕಾರ ಅಧಿನಿಯಮ ೧೯೩೫ರ ಅಡಿಯಲ್ಲಿ, ಭಾರತೀಯ ಸ್ವಾತಂತ್ರ್ಯ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಮಾರ್ಪಾಟುಗೊಂಡಂತೆ ರಚನೆಯಾದ ಭಾರತ ಸರ್ಕಾರಕ್ಕೆ ಉತ್ತರಾಧಿಕಾರಿಯಾಗಿರುತ್ತದೆ."

**ಶ್ರೀ ಕೆ. ಸಂತಾನಮ್ :** ತೊಂದರೆ ಏನೆಂದರೆ, ಭಾರತೀಯ ಸ್ವಾತಂತ್ರ್ಯ ಅಧಿನಿಯಮವು ಭಾರತ ಸರ್ಕಾರ ಅಧಿನಿಯಮ ೧೯೩೫ ಕ್ಕಿಂತ ಅಗ್ರಸ್ಥಾನ ಪಡೆಯಬೇಕಾಗುತ್ತದೆ. ಆದ್ದರಿಂದ, ಆ ಅಕ್ಷರಗಳನ್ನು ಮೊದಲಿಗೆ ಸೇರಿಸುವುದು ಸರಿಯೆನಿಸುವುದಿಲ್ಲ. ಆದೇಶವನ್ನು ತಿರುಗುಮುರುಗುಗೊಳಿಸಬೇಕು.

**ಮಾನ್ಯ ಸಭಾಧ್ಯಕ್ಷರು :** ೧೯೩೫ರ ಅಧಿನಿಯಮವನ್ನು ಮಾರ್ಪಡಿಸಲಾಗಿದೆ.

**ಶ್ರೀ ಕೆ. ಸಂತಾನಮ್ :** ಜಾರಿಯಲ್ಲಿರುವ ಅಧಿನಿಯಮವು ಭಾರತೀಯ ಸ್ವಾತಂತ್ರ್ಯ ಅಧಿನಿಯಮವಾಗಿದೆ. ಮಾರ್ಪಾಟು ಭಾರತೀಯ ಸ್ವಾತಂತ್ರ್ಯ ಅಧಿನಿಯಮದ ಅಡಿಯಲ್ಲಿದೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ನಾನು ವಿಷಯವನ್ನು ವಿವರಿಸಬಹುದೇ? ಅಷ್ಟಕ್ಕೂ, ಮಾನ್ಯರೆ, ಭಾರತೀಯ ಸ್ವಾತಂತ್ರ್ಯ ಅಧಿನಿಯಮವು ಸಮರ್ಥಗೊಳಿಸುವ ಅಧಿನಿಯಮದಲ್ಲಿ ವಿಸ್ತಾರವಾಗಿದೆ. ಆಗಸ್ಟ್ ೧೫, ೧೯೪೭ರ ಅನಂತರ ನಾವು ಯಾವ ಸಂವಿಧಾನದ ಅಡಿಯಲ್ಲಿ ಕಾರ್ಯ ನಿರ್ವಹಿಸಲಿದ್ದೇವೆಯೋ ಅದು ಈಗಲೂ, ಗವರ್ನರ್ ಜನರಲ್ ಅವರು ಭಾರತ ಸ್ವಾತಂತ್ರ್ಯ ಅಧಿನಿಯಮದ ಅಡಿಯಲ್ಲಿ ಹೊಂದಿರುವ ಅಧಿಕಾರದ ಪ್ರಕಾರ ಹೊರಡಿಸಿದ ಆದೇಶದ ಅನ್ವಯ ಮಾರ್ಪಾಟುಗೊಂಡ ಭಾರತ ಸರ್ಕಾರ ಅಧಿನಿಯಮ ೧೯೩೫ ಆಗಿದೆ.

**ಶ್ರೀ ಕೆ. ಸಂತಾನಮ್ :** ಇದು ಕಾನೂನಾತ್ಮಕವಾಗಿ ಸರಿಯೆಂದು ನಾನು ಭಾವಿಸುವುದಿಲ್ಲ. ಕೆಲವು ವಿಷಯಗಳಲ್ಲಿ ನಾವು ಭಾರತಿಯ ಸ್ವಾತಂತ್ರ್ಯ ಅಧಿನಿಯಮದ ಅಡಿಯಲ್ಲಿ ಅಥವಾ ಭಾರತ ಸರ್ಕಾರ ಅಧಿನಿಯಮ ೧೯೩೫ರ ಅಡಿಯಲ್ಲಿ ಕಾರ್ಯನಿರ್ವಹಿಸಲಿದ್ದೇವೆ.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ :** ಶ್ರೀ ಸಂತಾನಮ್ ಅವರು ಹೇಳುವುದು ಸರಿಯೆಂದು ನಾನು ಭಾವಿಸುತ್ತೇನೆ. ನೈಜ ಸಂವಿಧಾನವು ಚಕ್ರಾಧಿಪತ್ಯ (ಡೊಮಿನಿಯನ್) ಸಂವಿಧಾನವಾಗುತ್ತದೆ. ಚಕ್ರಾಧಿಪತ್ಯದ ಅಧಿನಿಯಮಕ್ಕೆ ಹೊಂದುವ ರೀತಿಯಲ್ಲಿ ನಾವು ೧೯೩೫ರ ಅಧಿನಿಯಮದ ಕೆಲವು ನಿರ್ದಿಷ್ಟ ಉಪಬಂಧಗಳನ್ನು ಮಾರ್ಪಾಟು ಮಾಡುತ್ತಿದ್ದೇವೆ. ಭವಿಷ್ಯದ ಸರ್ಕಾರವು ಚಕ್ರಾಧಿಪತ್ಯ ಸರ್ಕಾರದ ಉತ್ತರಾಧಿಕಾರಿಯಾಗುತ್ತದೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ನನಗೆ ಇದು ಮನವರಿಕೆಯಾಗದೇ ಇದ್ದರೂ, ನಾನು ಶಾಸನ ಸಮ್ಮತವಾದ ಅಭಿಪ್ರಾಯಕ್ಕೆ ತಲೆಬಾಗುತ್ತೇನೆ. ಇದರ ಸರಿತನವನ್ನು ನಾನು ಅನುಮಾನಿಸುತ್ತೇನೆ.

**ಶ್ರೀ ಕೆ. ಸಂತಾನಮ್ :** ಸೂಕ್ತ ವ್ಯವಸ್ಥೆಗಳನ್ನು ಮಾಡಬೇಕಾಗುತ್ತದೆ.

**ಮಾನ್ಯ ಸಭಾಧ್ಯಕ್ಷರು :** ಇಲ್ಲಿ ಅರ್ಥದಲ್ಲಿ ಯಾವುದೇ ವ್ಯತ್ಯಾಸವಿಲ್ಲದೇ ಇದ್ದರೂ, ಭಿನ್ನಾಭಿಪ್ರಾಯವಿದೆ. ಇದನ್ನು ಸರಿಯಾದ ರೂಪಕ್ಕೆ ತರುವುದನ್ನು ನೀವು ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರಿಗೆ ಬಿಟ್ಟುಬಿಡುವುದು ಉತ್ತಮ.

ಶ್ರೀಯುತರಾದ ನಿಜಲಿಂಗಪ್ಪ, ಕೃಷ್ಣಮೂರ್ತಿ ರಾವ್ ಮತ್ತು ಅನಂತಶಯನಮ್ ಅಯ್ಯಂಗಾರ್ ಅವರು ತಮ್ಮ ತಿದ್ದುಪಡಿಗಳನ್ನು ಮಂಡಿಸುತ್ತಿಲ್ಲ. ನಾನು ಭಾಗ ೧೧ರ ಖಂಡ ೧ನ್ನು ಮತಕ್ಕೆ ಹಾಕುತ್ತೇನೆ.

ಮುಂದಿಟ್ಟಿರುವ ವಿಷಯ :

"ಭಾಗ ೧೧ರ ಖಂಡ ೧, ಪರಿಷ್ಕರಣೆಗೊಂಡ ರೂಪದಲ್ಲಿ ಅಂಗೀಕಾರವಾಗಬೇಕು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಖಂಡ – ೨

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ನಾನು ಮಂಡಿಸುತ್ತೇನೆ :

"೨. (೧) ಈ ಸಂವಿಧಾನಕ್ಕೆ ಸಂಬಂಧಿಸಿದಂತೆ, ಒಕ್ಕೂಟದ ಪ್ರಾಂತ್ಯ–ರಾಜ್ಯಗಳಲ್ಲಿ ನೂತನ ಸಂವಿಧಾನ

ಆರಂಭಗೊಳ್ಳುವುದಕ್ಕೆ ಮೊದಲು (ನಿಕಟಪೂರ್ವ) ಜಾರಿಯಲ್ಲಿದ್ದ ಕಾನೂನುಗಳು, ದಕ್ಷ ಶಾಸನಸಭೆಯಿಂದ ಅಥವಾ ಯೋಗ್ಯ ಅಧಿಕಾರ(ಪ್ರಾಧಿಕಾರ)ದಿಂದ ಬದಲಾವಣೆಗೊಳ್ಳುವವರೆಗೆ ಅಥವಾ ರದ್ದಾಗುವವರೆಗೆ ಅಥವಾ ಮಾರ್ಪಾಟುಗೊಳ್ಳುವವರೆಗೆ ಹಾಗೆಯೇ ಮುಂದುವರಿಯುವವು.

(೨) ಪ್ರಾಂತ್ಯಗಳಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನುಗಳಿಗೆ ಯಾವುದಾದರೂ ವಿಷಯಕ್ಕೆ ಸಂಬಂಧಿಸಿದಂತೆ, ಯೋಗ್ಯ ಅಧಿಕಾರ(ಪ್ರಾಧಿಕಾರ)ದಿಂದ ರದ್ದಾಗುವುದಕ್ಕೆ ಅಥವಾ ಮಾರ್ಪಾಟಾಗುವುದಕ್ಕೆ ಮುನ್ನವೇ, ಮಾರ್ಪಾಟು ಅಥವಾ ಬದಲಾವಣೆ ತರುವುದು ಆವಶ್ಯಕ ಅಥವಾ ಸಮಯೋಚಿತವೆಂದು ಕಂಡುಬಂದರೆ, ಈ ಸಂವಿಧಾನದಲ್ಲಿರುವ ಉಪಬಂಧಗಳಿಗೆ ಅನುಗುಣವಾಗಿ ಆ ನಿರ್ದಿಷ್ಟ ಕಾನೂನಿನ ಉಪಬಂಧಗಳಲ್ಲಿ, ನಿರ್ದಿಷ್ಟ ದಿನಾಂಕದಿಂದ ಜಾರಿಯಾಗುವಂತೆ ರಾಷ್ಟ್ರಪತಿಯವರು ಆದೇಶದ ಮೂಲಕ ಬದಲಾವಣೆ ಅಥವಾ ಮಾರ್ಪಾಟು ತರಬಹುದು."

ಪ್ರಸ್ತುತ ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಜಾರಿಯಲ್ಲಿಡಲು ಇವುಗಳು ಆವಶ್ಯಕವಾಗಿವೆ.

(ಶ್ರೀ ಜೈನಾರಾಯಣ ವ್ಯಾಸ ಅವರು ತಮ್ಮ ತಿದ್ದುಪಡಿ ಸಂಖ್ಯೆ ೪೦೪ನ್ನು ಮಂಡಿಸಲಿಲ್ಲ.)

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯ ಸಭಾಧ್ಯಕ್ಷರೆ, ನಾನು ಮಂಡಿಸಲು ಅವಕಾಶ ಕೋರುತ್ತೇನೆ :

"ಖಂಡ ೨೮ ಉಪಖಂಡ (೨)ರಲ್ಲಿ, 'ಬೈ ಕಾಂಪಿಟೆಂಟ್ ಅಥಾರಿಟಿ' ಶಬ್ದಗಳ ಬದಲು 'ಬೈ ಎ ಕಾಂಪಿಟೆಂಟ್ ಅಥಾರಿಟಿ' ಶಬ್ದಗಳನ್ನು ಬದಲಿಸಬೇಕು."

ಮಾನ್ಯರೆ, ಇದು ಕೇವಲ ಒಕ್ಕಣೆಯ ತಿದ್ದುಪಡಿಯಾಗಿದೆ.

**ಶ್ರೀ ಎಸ್. ವಿ. ಕೃಷ್ಣಮೂರ್ತಿ ರಾವ್** (ಮೈಸೂರು ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ಇದು ಪ್ರಾಂತ್ಯಗಳಿಗೆ ನೀಡಲಾಗಿರುವಂತಹ ಕೇವಲ ಸಮರ್ಥಗೊಳಿಸುವ ಉಪಬಂಧವಾಗಿದೆ. ಇದು ಒಕ್ಕೂಟದಲ್ಲಿ ಸೇರ್ಪಡೆಯಾಗಲು ಸಮ್ಮತಿಸಿರುವಂತಹ ರಾಜ್ಯಗಳಿಗೆ ಸಂಬಂಧಿಸಿದ್ದಾಗಿದೆ. ನನ್ನ ತಿದ್ದುಪಡಿಯು ಹೀಗಿದೆ :

"ಖಂಡ ೨೮ ಉಪಖಂಡ (೨)ರಲ್ಲಿ 'ಪ್ರಾಂತ್ಯಗಳು' ಶಬ್ದದ ಅನಂತರ ಈ ಕೆಳಗಿನದ್ದು ಸೇರ್ಪಡೆಯಾಗಬೇಕು:

'ಮತ್ತು ಅಂತಹ ರಾಜ್ಯಗಳು, ಭಾರತ ಸ್ವಾತಂತ್ರ್ಯ ಅಧಿನಿಯಮ ೧೯೪೭ರ ಪ್ರಕರಣ ೨, ಖಂಡ ೪ರ ಅನ್ವಯ ಭಾರತ ಸಾಮ್ರಾಜ್ಯದ ಭಾಗವಾಗಿರುವುದರಿಂದ.' "

ಈ ಖಂಡವನ್ನು ಮಂಡಿಸಿದವರು ಈ ತಿದ್ದುಪಡಿಯನ್ನು ಸ್ವೀಕರಿಸುತ್ತಾರೆಂದು ನಾನು ಆಶಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಈ ಖಂಡಕ್ಕೆ ಇತರ ಯಾವುದೇ ತಿದ್ದುಪಡಿಗಳು ಇಲ್ಲದಿರುವುದರಿಂದ ಮತ್ತು ಬೇರೆ ಯಾವುದೇ ಸದಸ್ಯರು ಮಾತನಾಡಲು ಬಯಸದೇ ಇರುವುದರಿಂದ, ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಈ ಚರ್ಚೆಗೆ ಉತ್ತರ ನೀಡಬಹುದಾಗಿದೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯ ಸಭಾಧ್ಯಕ್ಷರೆ, ಶ್ರೀ ನಜಿರುದ್ದೀನ್ ಅಹ್ಮದ್ ಅವರ ಸಲಹೆಯು ಒಕ್ಕಣೆಯ ತಿದ್ದುಪಡಿಯಾಗಿದೆ. ಆದರೆ ಇದು ಬರವಣಿಗೆಯನ್ನು ಸುಧಾರಿಸುತ್ತದೆಂದು ನನಗೆ ಖಾತರಿಯಾಗುವುದಿಲ್ಲ. ನಾನು ನಿಜವಾಗಿ ಹೇಳಬೇಕೆಂದರೆ, 'ಎ ಕಾಂಪಿಟೆಂಟ್ ಅಥಾರಿಟಿ' ಶಬ್ದದ ಬದಲು 'ಕಾಂಪಿಟೆಂಟ್ ಅಥಾರಿಟಿ' ಶಬ್ದವನ್ನೇ ಉಳಿಸಿಕೊಳ್ಳಲು ಬಯಸುತ್ತೇನೆ.

ಶ್ರೀಯುತ ರಾವ್ ಅವರ ತಿದ್ದುಪಡಿಯನ್ನು ಕುರಿತು ಹೇಳುವುದಾದರೆ, ನಾನು ಅಂದುಕೊಳ್ಳುತ್ತೇನೆ, ಒಂದು ವೇಳೆ ಭಾರತೀಯ ರಾಜ್ಯಗಳ ಪ್ರತಿನಿಧಿಗಳು ಇದನ್ನು ಒಪ್ಪಿಕೊಳ್ಳಲು ಸಿದ್ಧರಿದ್ದರೆ, ನಾನೂ ಕೂಡ ಒಪ್ಪಿಕೊಳ್ಳಲು ಸಿದ್ಧನಿದ್ದೇನೆ. ಆದರೆ, ನನ್ನ ಭಯವೇನೆಂದರೆ, ನಾವು ಇದನ್ನು ಒಪ್ಪಿಕೊಳ್ಳುವುದಕ್ಕೆ ಮೊದಲು ಈ ಪ್ರಶ್ನೆಯನ್ನು ಬಹಳ ಎಚ್ಚರಿಕೆಯಿಂದ ಪರೀಕ್ಷಿಸಬೇಕಾಗುತ್ತದೆ. ನಾನು ನಿಜವಾಗಿಯೂ ಹೇಳಲು ಬಯಸುವುದೇನೆಂದರೆ, ಖಂಡವನ್ನು ಮಾತ್ರ ತೆಗೆದುಕೊಳ್ಳೋಣ ಮತ್ತು ವಿಷಯವನ್ನು ಅನಂತರ ಪರೀಕ್ಷಿಸೋಣ.

**ಮಾನ್ಯ ಸಭಾಧ್ಯಕ್ಷರು** : ನಾನು ಈಗ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ಶ್ರೀ ನಜಿರುದ್ದೀನ್ ಅಹ್ಮದ್ ಅವರ ತಿದ್ದುಪಡಿಯು ಹೀಗಿದೆ :

"ಖಂಡ ೨ರ ಉಪಖಂಡ (೨)ರಲ್ಲಿ, 'ಬೈ ಕಾಂಪಿಟೆಂಟ್ ಅಥಾರಿಟಿ' ಶಬ್ದಗಳ ಬದಲು 'ಬೈ ಎ ಕಾಂಪಿಟೆಂಟ್ ಅಥಾರಿಟಿ' ಶಬ್ದಗಳನ್ನು ಬದಲಿಸಬೇಕು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಶ್ರೀ ಎಸ್.ವಿ. ಕೃಷ್ಣಮೂರ್ತಿ ರಾವ್ :** ಮಾನ್ಯರೇ, ನಾನು ನನ್ನ ತಿದ್ದುಪಡಿಯನ್ನು ಹಿಂದಕ್ಕೆ ಪಡೆದುಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಕೃಷ್ಣಮೂರ್ತಿ ರಾವ್ ಅವರು ತಮ್ಮ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯುತ್ತಿದ್ದಾರೆ. ಅದನ್ನು ಹಿಂದಕ್ಕೆ ಪಡೆಯಲು ಸದನವು ಅವರಿಗೆ ಅನುಮತಿ ನೀಡುತ್ತದೆಂದು ನಾನು ಅಂದುಕೊಳ್ಳುತ್ತೇನೆ.

ಸಭೆಯ ಅನುಮತಿಯೊಡನೆ ಈ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಅನಂತರ ನಾನು ಈ ಖಂಡವನ್ನು ಮತಕ್ಕೆ ಹಾಕುತ್ತೇನೆ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಖಂಡ – ೩

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ಖಂಡ ೩ ಈ ರೀತಿ ಮುಂದುವರಿಯುತ್ತದೆ :

"ಈ ಸಂವಿಧಾನದ ಅಡಿಯಲ್ಲಿ ಉಚಿತ ರೀತಿಯಲ್ಲಿ ಸರ್ವೋಚ್ಚ ನ್ಯಾಯಾಲಯವು ರಚನೆಯಾಗುವವರೆಗೆ, ಒಕ್ಕೂಟದ ನ್ಯಾಯಾಲಯವನ್ನು ಸರ್ವೋಚ್ಚ ನ್ಯಾಯಾಲಯವೆಂದು ಪರಿಗಣಿಸಲಾಗುವುದು ಮತ್ತು ಅದು ಸರ್ವೋಚ್ಚ ನ್ಯಾಯಾಲಯದ ಎಲ್ಲ ಕಾರ್ಯಗಳನ್ನು ನಿರ್ವಹಿಸುವುದು:

ಷರತ್ತು ಏನೆಂದರೆ, ಈ ಸಂವಿಧಾನವು ಕಾರ್ಯಾರಂಭಮಾಡುವ ದಿನದ ಹೊತ್ತಿಗೆ ಒಕ್ಕೂಟದ ನ್ಯಾಯಾಲಯ ಮತ್ತು ಪ್ರಿವಿ ಕೌನ್ಸಿಲ್ ನ್ಯಾಯಾಂಗಸಮಿತಿಯು ತನ್ನ ಮುಂದೆ ಬಾಕಿ ಇರುವ ಪ್ರಕರಣಗಳನ್ನು, ಒಂದು ವೇಳೆ ಈ ಸಂವಿಧಾನವು ಕಾರ್ಯರೂಪಕ್ಕೆ ಬರದಿದ್ದರೆ ಹೇಗೆ ಮಾಡುತ್ತಿತ್ತೋ ಹಾಗೆ ಇತ್ಯರ್ಥಗೊಳಿಸಬಹುದು."

ನಾನು ಹೇಳಲು ಹೊರಟಿರುವುದು ಏನೆಂದರೆ, ಈ ಸಂವಿಧಾನವು ಕಾರ್ಯಾರಂಭಮಾಡುವುದಕ್ಕೆ ಮೊದಲು, ನ್ಯಾಯಾಂಗ ಸಮಿತಿಯ ಮುಂದೆ ಬಾಕಿ ಇರುವ ಪ್ರಕರಣಗಳನ್ನು ಅನಂತರವೂ ಕೂಡ ಸಮಿತಿಯು ಇತ್ಯರ್ಥಗೊಳಿಸುವುದನ್ನು ಮುಂದುವರಿಸುವುದು. ಮಾನ್ಯರೆ, ಈ ಖಂಡದಲ್ಲಿ ಸುಧಾರಣೆ ತರುವುದಕ್ಕಾಗಿ ನಾನು ಕೆಲವು ತಿದ್ದುಪಡಿಗಳನ್ನು ಗಮನಿಸಿದ್ದೇನೆ. ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಸೂಚನೆ ನೀಡಿರುವ ತಿದ್ದುಪಡಿಯನ್ನು ಸ್ವೀಕರಿಸಲು ನಾನು ತಯಾರಾಗಿದ್ದೇನೆ.

(ಶ್ರೀಯುತರಾದ ಕೆ. ಸಂತಾನಮ್, ಬಿಶ್ವನಾಥ್ ದಾಸ್ ಮತ್ತು ಠಾಕೂರ್ ದಾಸ್ ಭಾರ್ಗವ ಅವರು ತಮ್ಮ ತಿದ್ದುಪಡಿ ಸಂಖ್ಯೆಗಳಾದ ೪೦೭, ೪೦೮ ಮತ್ತು ೪೮೯ನ್ನು ಮಂಡಿಸಲಿಲ್ಲ.)

**ಶ್ರೀ ಜಸ್ಪತ್ ರಾಯ್ ಕಪೂರ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಸರ್ ಅಲ್ಲಾದಿಯವರ ತಿದ್ದುಪಡಿಯನ್ನು ಗಮನದಲ್ಲಿಟ್ಟುಕೊಂಡು ನಾನು ನನ್ನ ತಿದ್ದುಪಡಿ ಸಂಖ್ಯೆ ೪೧೦ನ್ನು ಮಂಡಿಸುತ್ತಿಲ್ಲ.

(ಶ್ರೀ ಆರ್. ಕೆ. ಸಿಧ್ವಾ ಅವರು ತಮ್ಮ ತಿದ್ದುಪಡಿ ಸಂಖ್ಯೆ ೪೧೧ನ್ನು ಮಂಡಿಸಲಿಲ್ಲ.)

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ :** ನನ್ನ ತಿದ್ದುಪಡಿಯು ಈ ರೀತಿ ಇದೆ :

"ಖಂಡ ೩ರ ನಿಬಂಧನೆಗೆ ಈ ಕೆಳಗಿನದ್ದು ಸೇರ್ಪಡೆಯಾಗಬೇಕು :

'ಈ ಸಂವಿಧಾನವು ಜಾರಿಗೆ ಬಂದ ದಿನ ಮತ್ತು ಅನಂತರ, ಭಾರತ ಒಕ್ಕೂಟದ ಯಾವುದೇ ನ್ಯಾಯಾಲಯದಲ್ಲಿ, ಅಪರಾಧ ವಿಷಯಗಳಿಗೆ ಸಮಬಂಧಿಸಿದ ಕಾನೂನು ಪರಿಧಿಯನ್ನು ಒಳಗೊಂಡಂತೆ, ಮೇಲ್ಮನವಿ ಹಾಗೂ

ಮೊಕದ್ದಮೆಗಳನ್ನು ಪ್ರೋತ್ಸಾಹಿಸುವ ಮತ್ತು ಇತ್ಯರ್ಥಗೊಳಿಸುವ ಸಾರ್ವಭೌಮರ ಪ್ರಿವಿ ಕೌನ್ಸಿಲ್‌ನ ನ್ಯಾಯಾಂಗ ಸಮಿತಿಯ ಕಾನೂನು ಪರಿಧಿಯಲ್ಲಿ, ವಿಷಯವನ್ನು ಇತ್ಯರ್ಥಗೊಳಿಸುವ ಸಾರ್ವಭೌಮರ ವಿಶೇಷಾಧಿಕಾರವು ರದ್ದಾಗುವುದು ಮತ್ತು ಪ್ರಿವಿ ಕೌನ್ಸಿಲ್ ನ್ಯಾಯಾಂಗಸಮಿತಿಯ ಮುಂದಿರುವ ಎಲ್ಲ ಮೇಲ್ಮನವಿಗಳು ಹಾಗೂ ಇತರ ನಡವಳಿಗಳು ಸರ್ವೋಚ್ಚ ನ್ಯಾಯಾಲಯಕ್ಕೆ ವರ್ಗಾಯಿಸಲ್ಪಡುವವು ಮತ್ತು ಅದುವೇ ಇತ್ಯರ್ಥಗೊಳಿಸುವುದು. ಈ ಉಪಬಂಧವನ್ನು ಜಾರಿಗೊಳಿಸುವ ಮತ್ತು ಪರಿಣಾಮಕಾರಿಯಾಗಿಸುವ ಮುಂದಿನ ಉಪಬಂಧವನ್ನು ಒಕ್ಕೂಟ ಸಂಸತ್ತಿನಿಂದ ಮಾಡಬಹುದಾಗಿದೆ."

ಮಾನ್ಯರೆ, ಈ ತಿದ್ದುಪಡಿಯನ್ನು ಸದನದ ಅಂಗೀಕಾರಕ್ಕಾಗಿ ಶಿಫಾರಸು ಮಾಡುವುದಕ್ಕೆ ಮುನ್ನ ನಾನು ಗಮನಿಸಿದ ಕೆಲವು ಅಂಶಗಳನ್ನು ಹೇಳಬೇಕಾಗಿದೆ. ಬ್ರಿಟಿಷ್ ಕಾಮನ್‌ವೆಲ್ತ್‌ನಲ್ಲಿಯೂ ಕೂಡ ಅದು ಪಡೆದ ನೂತನ ಸಾಮ್ರಾಜ್ಯದ ಸ್ಥಾನದಲ್ಲಿ ನ್ಯಾಯಾಂಗದ ಸ್ವಾಯತ್ತತೆಯನ್ನು ಆವಶ್ಯಕವಾಗಿ ಪ್ರಾಸಂಗಿಕ ಎಂದು ಪರಿಗಣಿಸಲಾಗಿದೆ. ಆಸ್ಟ್ರೇಲಿಯಾದಲ್ಲಿ, ದೇಶದ ಉಚ್ಚನ್ಯಾಯಾಲಯದಲ್ಲಿ ಉಳಿದಿದ್ದನ್ನು ಹೊರತುಪಡಿಸಿ ಮತ್ತೆಲ್ಲಿಯೂ ಮೇಲ್ಮನವಿಗೆ ಅವಕಾಶವೇ ಇಲ್ಲ. ಕೆನಡಾದಲ್ಲಿ, ಇತ್ತೀಚಿನ ಶಾಸನದ ಪ್ರಕಾರ, ನಾಗರಿಕ ಹಾಗೂ ಅಪರಾಧ ಪ್ರಕರಣಗಳೆರಡರಲ್ಲೂ ಕೆನಡಾದ ಸರ್ವೋಚ್ಚ ನ್ಯಾಯಾಲಯದಿಂದ ಮೇಲ್ಮನೆಯ ಹಕ್ಕನ್ನು ರದ್ದುಮಾಡಲಾಗಿದೆ. ದಕ್ಷಿಣ ಆಫ್ರಿಕಾದಲ್ಲಿ, ದಕ್ಷಿಣ ಆಫ್ರಿಕಾದ ಸಂವಿಧಾನದ ಅಡಿಯಲ್ಲಿ, ನ್ಯಾಯಾಂಗ ಸಮಿತಿಗೆ ಮೇಲ್ಮನವಿ ಸಲ್ಲಿಸುವ ಅಧಿಕಾರವಿಲ್ಲ. ಬ್ರಿಟಿಷ್ ಕಾಮನ್‌ವೆಲ್ತ್ ಸಾಮ್ರಾಜ್ಯಗಳಿಗೆ ಸಂಬಂಧಿಸಿದಂತೆಯೂ ಕೂಡ ಪರಿಸ್ಥಿತಿ ಹೀಗಿರುವಾಗ, ಭಾರತವು ಪ್ರಜಾಪ್ರಭುತ್ವವಾದ ಅನಂತರವೂ ಹಾಗೂ ನಾವು ಸಿದ್ಧಪಡಿಸಿದ ಸಂವಿಧಾನವು ಜಾರಿಯಾದ ಅನಂತರವೂ, ನ್ಯಾಯಾಂಗ ಸಮಿತಿಯಲ್ಲಿಯೇ ಕಾನೂನು ಪರಿಧಿಯನ್ನು ಉಳಿಸಿಕೊಳ್ಳಬೇಕೆನ್ನುವುದು ಕಲ್ಪನಾತೀತವಾಗಿದೆ. ಉಳಿದಿರುವ ಮೇಲ್ಮನವಿ (ಅಪೀಲು)ಗಳಿಗೆ ಸಂಬಂಧಿಸಿದಂತೆ, ಕಾನೂನು ಪರಿಧಿಯು ತನ್ನಿಂತಾನೇ ನಿಂತುಹೋಗಬೇಕಾದುದು ಆವಶ್ಯಕವಾಗಿದೆ. ಭಾರತೀಯ ನ್ಯಾಯಪೀಠದ ನಿರ್ಧಾರ(ತೀರ್ಪು)ಗಳನ್ನು ತಿರುಗಿಸುವ ಅಥವಾ ಬದಲಾಯಿಸುವ ಸ್ಥಾನದಲ್ಲಿ ವಿದೇಶಿ ನ್ಯಾಯಾಲಯ ಇರಬೇಕೆಂಬುದನ್ನು ಊಹಿಸುವುದೂ ಕೂಡ ಅಸಾಧ್ಯವಾಗಿದೆ. ಇನ್ನಷ್ಟೇ ಸ್ಥಾಪನೆಯಾಗಬೇಕಿರುವ ಸರ್ವೋಚ್ಚ ನ್ಯಾಯಾಲಯವೇ ಮೇಲ್ಮನವಿ (ಅಪೀಲು) ಸಲ್ಲಿಸುವುದಕ್ಕೆ ಅಖಿಲ ಭಾರತಕ್ಕೆ ಅಂತಿಮ ನ್ಯಾಯಾಲಯ ಮತ್ತು ಅಪೀಲುಗಳಿಗೆ ಸಂಬಂಧಿಸಿದಂತೆ ಬಾಕಿ ಉಳಿದಿರುವ ಎಲ್ಲ ಪ್ರಕರಣಗಳನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ವರ್ಗಾಯಿಸುವುದು ಸೂಕ್ತವಾಗಿದೆ. ನ್ಯಾಯಾಂಗ ಸಮಿತಿಯಿಂದ ದಾಖಲೆಗಳನ್ನು ವರ್ಗಾಯಿಸಬೇಕೇ ಎಂಬ ಪ್ರಶ್ನೆಯನ್ನು ಕೆಲವು ವಲಯಗಳಲ್ಲಿ ಎತ್ತಲಾಗಿದೆ. ನಾವು ಮಾಡಬೇಕಾಗಿರುವುದು ಇಷ್ಟೇ – ಆ ಪ್ರಕರಣಗಳು ವರ್ಗಾಯಿಸಲ್ಪಡಬೇಕು, ತದನಂತರದಲ್ಲಿ, ಈ ಪ್ರಕರಣಗಳಲ್ಲಿ ವ್ಯವಹರಿಸುವ ಕಾನೂನು ಪರಿಧಿಯನ್ನು ಸರ್ವೋಚ್ಚನಾಯಾಲಯವು ಹೊಂದಿರಬೇಕು. ನಮ್ಮ ಶಾಸನಕ್ಕೆ ಬೆಂಬಲ ನೀಡುವುದರಲ್ಲಿ ನ್ಯಾಯಾಂಗ ಸಮಿತಿಯು ವಿಫಲವಾಗುತ್ತದೆಂದು ನಾನು ನಂಬುವುದಿಲ್ಲ. ಅಷ್ಟಕ್ಕೂ ವಾಸ್ತವ ಅಂಶದ ಪ್ರಕಾರ, ಅತ್ಯಂತ ಕಡಿಮೆ ಮೂಲ ದಾಖಲೆಗಳು ಮಾತ್ರ ನ್ಯಾಯಾಂಗ ಸಮಿತಿಯ ಆಧೀನದಲ್ಲಿವೆ. ಒಂದು ವೇಳೆ ನಡವಳಿ ಮತ್ತು ಇತರ ವಿಷಯಗಳಿಗೆ ಸಂಬಂಧಪಟ್ಟಂತೆ ಏನಾದರೂ ತೊಂದರೆಗಳಿದ್ದಲ್ಲಿ ಒಕ್ಕೂಟದ ಶಾಸನವು ತನ್ನ ಪಾತ್ರ ನಿರ್ವಹಿಸುತ್ತದೆ. ಅದು ಈ ತಿದ್ದುಪಡಿಯ ಅನಂತರದ ಭಾಗವಾಗಿದೆ. ಆದ್ದರಿಂದ ಈ ತಿದ್ದುಪಡಿಯನ್ನು ಅಂಗೀಕರಿಸಬೇಕೆಂದು ನಾನು ಸದನವನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ :** ನಾನು, ಪೂರಕ ಪಟ್ಟಿ ೪ರಲ್ಲಿರುವ ನನ್ನ ತಿದ್ದುಪಡಿ ಸಂಖ್ಯೆ ೧೧ನ್ನು ಮಂಡಿಸುತ್ತಿಲ್ಲ.

**ಮಾನ್ಯ ಸಭಾಧ್ಯಕ್ಷರು :** ನಾನು ಅಂದುಕೊಂಡ ಪ್ರಕಾರ, ಇಲ್ಲಿ ಒಂದೇ ಒಂದು ತಿದ್ದುಪಡಿಯಿದೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ನಾನು ಸರ್ ಅಲ್ಲಾದಿ ಕೃಷ್ಣಸ್ವಾಮಿ

ಅಯ್ಯರ್ ಅವರ ತಿದ್ದುಪಡಿಯನ್ನು ಸ್ವೀಕರಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಖಂಡವನ್ನು ಮಂಡಿಸಿದವರು ಈ ತಿದ್ದುಪಡಿಯನ್ನು ಒಪ್ಪಿಕೊಂಡಿದ್ದಾರೆ. ನಾನು ಇದನ್ನು ಈಗ ಮತಕ್ಕೆ ಹಾಕುತ್ತೇನೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ನಾನು ಖಂಡವನ್ನು, ಸರ್ ಅಲ್ಲಾದಿಯವರಿಂದ ತಿದ್ದುಪಡಿಗೊಳ್ಳಲಾದ ರೂಪದಲ್ಲಿ ಈಗ ಮತಕ್ಕೆ ಹಾಕುತ್ತೇನೆ.

ಖಂಡ ೩ ಇನ್ನು ತಿದ್ದುಪಡಿಗೊಳಗಾದಂತೆ, ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ನಮಗೆ ಕೇವಲ ಎರಡು ನಿಮಿಷ ಉಳಿದಿದೆ. ಮತ್ತು...

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಇನ್ನು ಕೇವಲ ಎರಡು ಅಥವಾ ಮೂರು ಖಂಡಗಳು ಬಾಕಿ ಉಳಿದಿವೆ.

**ಮಾನ್ಯ ಸಭಾಧ್ಯಕ್ಷರು** : ಈ ಖಂಡಗಳನ್ನು ನಾವು ಪೂರ್ಣಗೊಳಿಸಲೇಬೇಕು ಎಂಬುದು ಸದನದ ಬಯಕೆಯಾದರೆ, ನನ್ನದೇನೂ ಅಭ್ಯಂತರವಿಲ್ಲ. ಆದರೆ, ಅಪರಾಹ್ನ ೨–೩೦ಕ್ಕೆ ಸಲಹಾಸಮಿತಿಯ ಸಭೆಯಿದೆ ಮತ್ತು ಸದಸ್ಯರು ಬಹುಶಃ ಬಯಸಬಹುದು...

**ಶ್ರೀ ಎಂ. ಅನಂತಶಯನಮ್ ಅಯ್ಯಂಗಾರ್** : ಇಂದು ಸಭೆಯು ೧ ಗಂಟೆಯವರೆಗೆ ಮಾತ್ರ ನಡೆಯಬಹುದು ಎಂದು ಭಾವಿಸಿ, ನಾವು ಈಗಾಗಲೇ ನಮ್ಮ ಪ್ರಯಾಣವನ್ನು ನಿಗದಿ ಮಾಡಿಕೊಂಡಿದ್ದೇವೆ.

**ಮಾನ್ಯ ಸಭಾಧ್ಯಕ್ಷರು** : ಹಾಗಾದರೆ, ಬಾಕಿ ಉಳಿದಿರುವ ಖಂಡಗಳ ಪರಿಗಣನೆಯನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳಬೇಕೆಂದು ಸದನವು ಬಯಸುತ್ತದೆಯೇ?

**ಹಲವು ಗೌರವಾನ್ವಿತ ಸದಸ್ಯರು** : ಹೌದು.

**ಮಾನ್ಯ ಸಭಾಧ್ಯಕ್ಷರು** : ಹಾಗಾದರೆ, ಬಾಕಿ ಉಳಿದಿರುವ ಖಂಡಗಳ ಪರಿಗಣನೆಯನ್ನು ತಡೆಹಿಡಿಯೋಣ.

## ಮಾನ್ಯ ಸಭಾಧ್ಯಕ್ಷರಿಂದ ಪ್ರಕಟಣೆಗಳು

**ಮಾನ್ಯ ಸಭಾಧ್ಯಕ್ಷರು** : ನಾವು ಇಲ್ಲಿಂದ ಚದುರಿಹೋಗುವುದಕ್ಕೆ ಮುನ್ನ ನಾನು ಕೆಲವು ಪ್ರಕಟಣೆಗಳನ್ನು ಹೊರಡಿಸಬೇಕಿದೆ. ರಾಷ್ಟ್ರಧ್ವಜಕ್ಕಾಗಿ ಖಾದಿ ಬಟ್ಟೆಯನ್ನು ಉಪಯೋಗಿಸಬೇಕೆಂಬ ವಿಷಯವನ್ನು ಕುರಿತು ರಾಜಕುಮಾರಿ ಅಮೃತ್ ಕೌರ್ ಅವರಿಂದ ನಿರ್ಣಯದ ಸೂಚನೆಯಿದೆ. ಈ ನಿರ್ಣಯದ ಸೂಚನೆಯು ಬಂದಾಗ ನಾವು ಕಾರ್ಯಕ್ರಮ ಅನುಷ್ಠಾನವನ್ನು ನಿರ್ಣಯಿಸುವ ಸಮಿತಿಯ ಸಭೆಯನ್ನು ಕರೆಯುವುದು ಸಾಧ್ಯವಾಗಿರಲಿಲ್ಲ ಮತ್ತು ಆದ್ದರಿಂದ, ನಾವು ಇದನ್ನು ಸದನದ ಮುಂದೆ ಇಡಲಾಗಲಿಲ್ಲ. ಆದರೆ, ನಾನು ಏನನ್ನು ತಿಳಿಸಬಹುದೆಂದರೆ, ಈ ಸಂವಿಧಾನ ರಚನಾಸಭೆಗೆ ಸಂಬಂಧಿಸಿದಂತೆ, ನಾವು ರಾಷ್ಟ್ರಧ್ವಜಕ್ಕಾಗಿ ಖಾದಿ ಬಟ್ಟೆಯನ್ನು ಹೊರತುಪಡಿಸಿ ಬೇರೆ ಯಾವುದನ್ನೂ ಉಪಯೋಗಿಸಿಲ್ಲ. ಇದು ಸರ್ಕಾರದ ನೀತಿಯೂ ಆಗಿದ್ದು, ಅದು ಈ ಸಂಬಂಧ ಪ್ರಾಂತೀಯ ಸರ್ಕಾರಗಳನ್ನೂ ಕೂಡ ಸಂಪರ್ಕಿಸಿದ್ದು, ರಾಷ್ಟ್ರಧ್ವಜಗಳು ಖಾದಿ ಬಟ್ಟೆ – ಅಂದರೆ, ಕೈಮಗ್ಗ ಹಾಗೂ ಕೈನೇಯ್ಗೆಯ ಬಟ್ಟೆ, ಅದು ಹತ್ತಿಯದಿರಬಹುದು, ಉಣ್ಣೆಯದಿರಬಹುದು ಅಥವಾ ರೇಷ್ಮೆಯದಿರಬಹುದು ಅಥವಾ ಇತರ ಯಾವುದೇ ವಸ್ತುವಿನದಿರಬಹುದು – ಯಿಂದ ಮಾಡಲ್ಪಟ್ಟಿರಬೇಕೆಂದು ಸೂಚಿಸಿದೆ.

ನಿನ್ನೆ, ಮುಖ್ಯ ಆಯುಕ್ತರ ಪ್ರಾಂತ್ಯಗಳಿಗೆ ಕರಡು ಸಂವಿಧಾನವನ್ನು ಸಿದ್ಧಪಡಿಸುವುದಕ್ಕಾಗಿ ಸಮಿತಿಯನ್ನು ನೇಮಿಸುವಂತೆ ನನ್ನನ್ನು ಕೋರುವ ನಿರ್ಣಯವೊಂದನ್ನು ಅಂಗೀಕರಿಸಿದೆ ಮತ್ತು ಈ ಉದ್ದೇಶಕ್ಕಾಗಿ ನಾನು ಈ ಕೆಳಗಿನ ಸಮಿತಿಯನ್ನು ನೇಮಕಮಾಡಿದ್ದೇನೆ ಎಂದು ಪ್ರಕಟಿಸುವುದಕ್ಕೆ ನನಗೆ ಹರ್ಷವಾಗುತ್ತಿದೆ:

ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್.
ಡಾ. ಪಟ್ಟಾಭಿ ಸೀತಾರಾಮಯ್ಯ.
ಶ್ರೀ ಕೆ. ಸಂತಾನಮ್.
ಶ್ರೀ ದೇಶಬಂಧು ಗುಪ್ತ.
ಶ್ರೀ ಮುಕುಟ್ ಬಿಹಾರಿ ಲಾಲ್ ಭಾರ್ಗವ.
ಶ್ರೀ ಸಿ. ಎಮ್. ಪೂಣಚ್ಚ.
ಶ್ರೀ ಹುಸೇನ್ ಇಮಾಮ್.

ಇಲ್ಲಿ ಇನ್ನೊಂದು ಮುಖ್ಯವಾದ ವಿಷಯವಿದ್ದು, ಈ ಕುರಿತು ಚರ್ಚೆಯ ಮೊದಲ ಭಾಗದಲ್ಲಿ ಉಲ್ಲೇಖ ಮಾಡಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ನಾನು ಕೆಲವು ಪ್ರಕಟಣೆಯನ್ನು ಹೊರಡಿಸಬೇಕಾಗಿದೆ; ಅದು ಏನೆಂದರೆ, ೧೫ನೇ ತಾರೀಖಿನ ಸಮಾರಂಭ. ಈ ಕಾರ್ಯಕ್ರಮವನ್ನು ಕುರಿತು ನಾವು ಯೋಚಿಸಿದ್ದು ಈ ರೀತಿ ಇದೆ :

೧೪ರ ಮಧ್ಯರಾತ್ರಿ ಹಾಗೂ ೧೫ರ ಆರಂಭದ ಸಮಯದಲ್ಲಿ, ನಾವು ಈ ಸದನದ ಸಭೆ ಸೇರಲಿದ್ದೇವೆ ಮತ್ತು ಆ ಸಮಯದಲ್ಲಿ ಗಡಿಯಾರ ಹನ್ನೆರಡನ್ನು ತೋರಿಸುತ್ತಿದ್ದಂತೆಯೇ, ನಾವು ಅಂಗೀಕರಿಸಿರುವ ಅಧಿನಿಯಮದ ಅಡಿಯಲ್ಲಿ ಪಡೆಯುವ ಅಧಿಕಾರದ ಮೂಲಕ ಒಂದೋ ನಮ್ಮ ನಡವಳಿಗಳನ್ನು ಆರಂಭಿಸಲಿದ್ದೇವೆ, ಇಲ್ಲವೇ ನಮ್ಮ ನಡವಳಿಗಳನ್ನು ಮುಕ್ತಾಯಗೊಳಿಸಲಿದ್ದೇವೆ ಮತ್ತು ನಿರ್ಣಯ ಅಥವಾ ಅಂತಹ ಇತರ ಯಾವುದರ ಮೂಲಕವಾದರೂ ನಾವು ಸದನದ ಮುಖ್ಯಸ್ಥರಿಗೆ ಲಾರ್ಡ್ ಮೌಂಟ್ ಬ್ಯಾಟನ್ ಅವರ ಬಳಿಗೆ ಹೋಗುವ ಅಧಿಕಾರ ನೀಡುತ್ತೇವೆ ಮತ್ತು ಗವರ್ನರ್ ಜನರಲ್ ಹುದ್ದೆಯನ್ನು ಒಪ್ಪಿಕೊಳ್ಳುವಂತೆ ಅವರಲ್ಲಿ ಮನವಿ ಮಾಡುತ್ತೇವೆ ಮತ್ತು ಆ ಮೂಲಕ, ನಮ್ಮ ಕೋರಿಕೆಗೆ ಅನುಗುಣವಾಗಿ ಗವರ್ನರ್ ಜನರಲ್ ಆಗಿ ಅವರ ನೇಮಕಾತಿಯನ್ನು ಕ್ರಮಬದ್ಧಗೊಳಿಸುತ್ತೇವೆ ಮತ್ತು ಆ ಸಮಯದಲ್ಲಿ, ಸದನದ ಮುಖ್ಯಸ್ಥರು, ತಾವು ರಚಿಸಿದ ಸಚಿವಸಂಪುಟದ ಸದಸ್ಯರ ಹೆಸರುಗಳನ್ನು ಅವರಿಗೆ ತಿಳಿಸುತ್ತಾರೆ. ಅದು ಮಧ್ಯರಾತ್ರಿಯ ನಡವಳಿಗಳಾಗಿವೆ. ಮರುದಿನ ಬೆಳಗ್ಗೆ ೧೦ ಗಂಟೆಗೆ ನಾವು ಇಲ್ಲಿ ಸದನದ ಸಭೆ ಸೇರಲಿದ್ದೇವೆ ಮತ್ತು ಗವರ್ನರ್ ಜನರಲ್ ಅವರು ಈ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಮತ್ತು ಇಲ್ಲಿ ನಾವು ಒಂದು ರೀತಿಯ ಔಪಚಾರಿಕ ಸಮಾರಂಭ – ನಮಗೆ ನೈಜ ಅಧಿಕಾರ ಹಸ್ತಾಂತರಿಸುವ – ಏರ್ಪಡಿಸಲಿದ್ದೇವೆ.

**ಶ್ರೀ ಎಮ್. ಎಸ್. ಅನೆ :** ೧೫ರಂದು?

**ಮಾನ್ಯ ಸಭಾಧ್ಯಕ್ಷರು :** ಅದು ೧೪ರ ಮಧ್ಯರಾತ್ರಿ ಮತ್ತು ೧೫ರ ಬೆಳಗಿನ ಜಾವವಾಗಿರುತ್ತದೆ.

**ಶ್ರೀ ಬಾಲಕೃಷ್ಣ ಶರ್ಮ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಅದು ನಮ್ಮ ವಿಮೋಚನಾ ದಿನವಾಗಲಿದೆ.

**ಮಾನ್ಯ ಸಭಾಧ್ಯಕ್ಷರು :** ರಾತ್ರಿಯ ಅಧಿವೇಶನ ಅಥವಾ ಬೆಳಗಿನ ಅಧಿವೇಶನದ ಕಾರ್ಯಕ್ರಮದ ವಿವರಗಳಿಗೆ ಸಂಬಂಧಿಸಿದಂತೆ, ಎಲ್ಲ ವಿವರಗಳ ಬಗ್ಗೆ ನಾವು ಇದುವರೆಗೂ ನಿರ್ಧಾರ ಮಾಡಿಲ್ಲ; ಆದರೆ, ಕಾರ್ಯಕ್ರಮದ ವಿವರಗಳನ್ನು ನಾನು, ಇಲ್ಲಿ ಲಭ್ಯವಿರುವ ಪಂಡಿತ್ ಜವಾಹರಲಾಲ್ ನೆಹರು ಹಾಗೂ ಇತರ ಕೆಲವು ಸದಸ್ಯರೊಂದಿಗೆ ಸಮಾಲೋಚಿಸಿ ನಿರ್ಧರಿಸಲು ಉದ್ದೇಶಿಸಿದ್ದೇನೆ.

**ಶ್ರೀ ಬಿ. ದಾಸ್** (ಒರಿಸ್ಸಾ : ಸಾಮಾನ್ಯ) : ಹಣಕಾಸಿನ ಹಂಚಿಕೆಗೆ ಸಂಬಂಧಿಸಿದಂತೆ ಹಣಕಾಸು ಸಮಿತಿಯ ಬಗ್ಗೆ ಏನನ್ನುವಿರಿ?

**ಮಾನ್ಯ ಸಭಾಧ್ಯಕ್ಷರು :** ಈ ವಿಷಯವನ್ನು ಮೊದಲು ಪೂರ್ಣಗೊಳಿಸಲು ನನಗೆ ಬಿಡಿ.

ಸಂದರ್ಶಕರ ಪ್ರವೇಶಕ್ಕೆ ಸಂಬಂಧಿಸಿದಂತೆ, ಸದಸ್ಯರಿಗೆ ತಿಳಿದಿರುವಂತೆ, ಈ ಸದನದಲ್ಲಿ ನಾವು ಬಹಳ

ಸೀಮಿತವಾದ ಸ್ಥಳಾವಕಾಶವನ್ನು ಹೊಂದಿದ್ದೇವೆ. ತಮ್ಮ ಅತಿಥಿಗಳನ್ನು ಕರೆತರುವುದಕ್ಕೆ ಅವಕಾಶ ನೀಡಬೇಕೆಂಬ ಬಗ್ಗೆ ಸದಸ್ಯರ ಪರವಾಗಿ ಬೇಡಿಕೆ ಬಂದಿದೆ; ಆದಾಗ್ಯೂ, ಸಾಮಾನ್ಯ ಪರಿಸ್ಥಿತಿಗಳಲ್ಲಿ ನಮ್ಮಿಂದ ಆಮಂತ್ರಣ ಪತ್ರಗಳನ್ನು ವಿತರಿಸಲಾಗುತ್ತದೆ. ಆ ಕಾರ್ಯಕ್ರಮಕ್ಕೆ ಇಲ್ಲಿ ಇರುವ ಬೇರೆ ದೇಶಗಳ ಪ್ರತಿನಿಧಿಗಳಿಗೆ, ರಾಯಭಾರಿಗಳಿಗೆ ಸಂಬಂಧಿಸಿದ ಪ್ರತಿನಿಧಿಗಳಿಗೆ ಹಾಗೂ ಇತರರಿಗೆ ಆಮಂತ್ರಣ ನೀಡುವುದು ಆವಶ್ಯಕವಾಗಿದೆ ಮತ್ತು ಭಾರತ ಸರ್ಕಾರದ ಉನ್ನತ ನಾಗರಿಕ ಮತ್ತು ಸೇನಾ ಅಧಿಕಾರಿಗಳನ್ನೂ ಕೂಡ ಆಮಂತ್ರಿಸಬೇಕಾಗುತ್ತದೆ. ಆ ಸಂದರ್ಭದಲ್ಲಿ ಮಾಧ್ಯಮದವರು ಪೂರ್ಣಪ್ರಮಾಣದಲ್ಲಿ ಉಪಸ್ಥಿತರಿರುವುದು ಸಹಜವಾಗಿದೆ. ಆದ್ದರಿಂದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಬಯಸುವ ಎಲ್ಲರಿಗೂ ಸ್ಥಳಾವಕಾಶ ಕಲ್ಪಿಸುವುದು ಕಷ್ಟಕರವಾಗಿದೆ. ಆದರೆ, ನ್ಯಾಯಯುತವಾಗಿ ಹಾಗೂ ನಿಷ್ಪಕ್ಷಪಾತವಾಗಿ ಎಷ್ಟು ಗರಿಷ್ಠ ಸಾಧ್ಯವೋ ಅಷ್ಟು ಜನರಿಗೆ ಸ್ಥಳಾವಕಾಶ ಕಲ್ಪಿಸುವುದಕ್ಕೆ ಸಂಬಂಧಿಸಿದಂತೆ ಕೆಲವು ಏರ್ಪಾಟು ಮಾಡುವ ಜವಾಬ್ದಾರಿಯನ್ನು ಸದನವು ನಮಗೆ ಬಿಡುತ್ತದೆಂಬ ವಿಶ್ವಾಸ ನನಗಿದೆ.

**ಒಬ್ಬರು ಗೌರವಾನ್ವಿತ ಸದಸ್ಯರು** : ಪ್ರತಿ ಸದಸ್ಯರಿಗೆ ಎರಡು ಪ್ರವೇಶಪತ್ರ ನೀಡಲಾಗುತ್ತದೆಯೇ?

**ಮಾನ್ಯ ಸಭಾಧ್ಯಕ್ಷರು** : ಒಂದು ವೇಳೆ ನಾವು ಪ್ರತಿ ಸದಸ್ಯರಿಗೆ, ಇಬ್ಬರು ಸಂದರ್ಶಕರನ್ನು ಕರೆತರಲು ಅವಕಾಶ ನೀಡಿದರೆ, ಬೇರೆ ಯಾರಿಗೂ ಅವಕಾಶ ನೀಡದಿದ್ದರೂ, ಸ್ಥಳಾವಕಾಶ ಇರುವುದಿಲ್ಲ.

**ಶ್ರೀ ಗೋಪಿಕೃಷ್ಣ ವಿಜಯವರ್ಗೀಯ** : ಕನಿಷ್ಠ ಪಕ್ಷ ಪ್ರತಿ ಸದಸ್ಯರಿಗೆ ಒಂದು ಪ್ರವೇಶಪತ್ರ.

**ಮಾನ್ಯ ಸಭಾಧ್ಯಕ್ಷರು** : ೧೪ರ ರಾತ್ರಿ, ಸಂದರ್ಶಕರ ಪ್ರವೇಶಪತ್ರಗಳನ್ನು ಸಾಮಾನ್ಯ ಪರಿಸ್ಥಿತಿಗಳಲ್ಲಿ, ಸಹಜ ವಿಧಾನದಲ್ಲಿ ನೀಡಲಾಗುವಂತೆ ಕೊಡಲಾಗುವುದು.

**ಶ್ರೀ ಮಹಾವೀರ ತ್ಯಾಗಿ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಭವಿಷ್ಯದಲ್ಲಿ ಲಾರ್ಡ್ ಮೌಂಟ್ ಬ್ಯಾಟನ್ ಅವರನ್ನು ನಮ್ಮ ಗವರ್ನರ್ ಜನರಲ್ ಆಗಿ ಆಮಂತ್ರಿಸಬೇಕಾದುದು ನಮ್ಮ ಕಾರ್ಯಕ್ರಮದ ಯಾವ ಭಾಗ ಎಂಬ ಬಗ್ಗೆ ತಾವು ದಯವಿಟ್ಟು ಸದನಕ್ಕೆ ವಿವರಿಸಬಾರದೇ? ಏಕೆಂದರೆ, ಈ ಸದನವು ಯಾವತ್ತೂ ಈ ಪ್ರಶ್ನೆಯನ್ನು ಕುರಿತು ಚರ್ಚೆ ನಡೆಸಿಲ್ಲ; ಅಥವಾ ಈ ಬಗ್ಗೆ ಸದನವು ಯಾವುದೇ ನಿರ್ಣಯವನ್ನು ಅಂಗೀಕರಿಸಿಲ್ಲ; ಅಥವಾ, ಲಾರ್ಡ್ ಮೌಂಟ್ ಬ್ಯಾಟನ್ ಅವರು ಭಾರತದ ಗವರ್ನರ್ ಜನರಲ್ ಆಗಬೇಕೆಂಬ ಯೋಚನೆಗೆ ಒಪ್ಪಿಗೆ ನೀಡಿಲ್ಲ. ಉಳಿದ ಕಾರ್ಯಕ್ರಮಗಳು ಹೇಗಿದೆಯೋ ಹಾಗೆ ನಡೆಯಬಹುದಾಗಿದೆ.

**ಮಾನ್ಯ ಸಭಾಧ್ಯಕ್ಷರು** : ಒಂದು ವೇಳೆ ಗೌರವಾನ್ವಿತ ಸದಸ್ಯರು ಅಷ್ಟೊಂದು ಕುತೂಹಲಗೊಂಡಿದ್ದರೆ, ನಾನು ಈ ವಿಷಯವನ್ನು ಚರ್ಚೆಗಾಗಿ ಸದನದ ಮುಂದೆ ಇಡುತ್ತೇನೆ. (ಅನೇಕ ಗೌರವಾನ್ವಿತ ಸದಸ್ಯರು: ಬೇಡ, ಬೇಡ). ಅದು ನನ್ನ ಅಭಿಪ್ರಾಯವಾಗಿತ್ತು; ಆದರೆ, ಒಂದು ವೇಳೆ ಸದಸ್ಯರು ಬಯಸಿದರೆ, ನಾನು ಇದನ್ನು ಸದನದ ಮುಂದೆ ಇಡಬಹುದು.

**ಶ್ರೀ ಶಂಕರ ದತ್ತಾತ್ರಯ ದೇವ್** (ಬಾಂಬೆ : ಸಾಮಾನ್ಯ) : ಆ ಪ್ರಸ್ತಾವ ಯಾವುದು? ನಮಗೆ ಅರ್ಥವಾಗಿಲ್ಲ. ಅವರ ಪ್ರಸ್ತಾವ ಏನೆಂಬುದನ್ನು ನಾವೂ ಕೂಡ ಅರ್ಥಮಾಡಿಕೊಳ್ಳೋಣ.

**ಮಾನ್ಯ ಸಭಾಧ್ಯಕ್ಷರು** : ನನ್ನ ಹೇಳಿಕೆಯ ಇತ್ತೀಚಿನ ಭಾಗದಲ್ಲಿ ನಾನು ಸೂಚಿಸಿದಂತೆ, ನಾನು ಕಾರ್ಯಕ್ರಮವನ್ನು ನಿರ್ಧಾರಮಾಡಿದ್ದೇನೆ. ಒಬ್ಬ ಸದಸ್ಯರು ಹೇಳುತ್ತಾರೆ, ಲಾರ್ಡ್ ಮೌಂಟ್ ಬ್ಯಾಟನ್ ಅವರು ನಮ್ಮ ಗವರ್ನರ್ ಜನರಲ್ ಆಗಿರುತ್ತಾರೆ ಎಂಬ ಪ್ರಶ್ನೆಯನ್ನು ನಾವು ಎತ್ತಬಾರದಾಗಿತ್ತು; ಏಕೆಂದರೆ, ಸದನವು ಇದನ್ನು ಪರಿಗಣಿಸಿಲ್ಲ ಎಂದು. ನಾನು ಹೇಳಿದೆ, ಒಂದು ವೇಳೆ ಅವರು ಕುತೂಹಲಗೊಂಡಿದ್ದರೆ, ಆತಂಕಗೊಂಡಿದ್ದರೆ, ನಾನು ಇದನ್ನು ಸದನದ ಮುಂದೆ ಇಡುತ್ತೇನೆ ಎಂದು.

**ಅನೇಕ ಗೌರವಾನ್ವಿತ ಸದಸ್ಯರು** : ಬೇಡ, ಬೇಡ. ಇದನ್ನು ಸಭಾಧ್ಯಕ್ಷರಿಗೇ ಬಿಟ್ಟುಬಿಡಬೇಕು.

**ಪಂಡಿತ್ ಗೋವಿಂದ ಮಾಳವೀಯ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಪ್ರಶ್ನೆಯ ಯೋಗ್ಯತೆಯ

ಬಗ್ಗೆ ಸ್ವಲ್ಪವೂ ಆಳಕ್ಕಿಳಿಯದೇ, ನಾನು ಹೇಳಬಹುದಾದುದು ಏನೆಂದರೆ, ಸದನದ ಮುಂದೆ ಈ ವಿಷಯವನ್ನು ಯಾವುದೇ ರೂಪದಲ್ಲಿಯೂ ತರದೇ, ಸದನದ ಮುಖ್ಯಸ್ಥರು ವೈಸರಾಯ್ ಅವರ ಬಳಿಗೆ ಈ ಸದನದಿಂದ ನೇರವಾಗಿ ಹೋಗುವ ಮತ್ತು ಗವರ್ನರ್ ಜನರಲ್ ಹುದ್ದೆಯನ್ನು ಸ್ವೀಕರಿಸುವಂತೆ ಈ ಸದನದ ಪರವಾಗಿ ಅವರನ್ನು ಕೇಳಿಕೊಳ್ಳುವ ಕಾರ್ಯಕ್ರಮವನ್ನು ಇಟ್ಟುಕೊಳ್ಳಬಾರದೆಂಬುದು ನನ್ನ ಪ್ರಕಾರ ಗೌರವಾನ್ವಿತ ಸದಸ್ಯರ ಮಾತಿನ ಅರ್ಥ. ನಾನು ಅರ್ಥಮಾಡಿಕೊಂಡಿರುವ ಪ್ರಕಾರ, ಅವರ ಮಾತಿನ ಅರ್ಥ ಅಷ್ಟು ಮಾತ್ರ ಮತ್ತು ನಾವು ಲಾರ್ಡ್ ಮೌಂಟ್ ಬ್ಯಾಟನ್ ಅವರನ್ನು ನಮ್ಮ ಗವರ್ನರ್ ಜನರಲ್ ಆಗಿ ಹೊಂದಬಾರದು ಎಂಬುದಲ್ಲ.

**ಶ್ರೀ ಮಹಾವೀರ ತ್ಯಾಗಿ :** ಲಾರ್ಡ್ ಮೌಂಟ್ ಬ್ಯಾಟನ್ ಅವರನ್ನು ಭಾರತದ ಗವರ್ನರ್ ಜನರಲ್ ಆಗಿ ಅಂಗೀಕರಿಸುವುದಕ್ಕೆ ಸದನದ ಪರವಾಗಿ ತಕರಾರು ದಾಖಲಿಸುವುದು ನನ್ನ ಮನದಿಂಗಿತವಲ್ಲ. ಆ ವಿಷಯ ಈಗಾಗಲೇ ನಡೆದಿದೆ ಮತ್ತು ಒಂದು ವೇಳೆ ಅದನ್ನು ವಿರೋಧಿಸುವ ಗೌರವಾನ್ವಿತ ಸದಸ್ಯರು ಯಾರಾದರೂ ಈ ಸದನದಲ್ಲಿ ಇದ್ದರೆ, ಅಂಥವರು ಈ ಸಂಬಂಧ ನಿರ್ಣಯವನ್ನು ಮಂಡಿಸಬಹುದು. ನಾನು ಆ ವಿಷಯವನ್ನು ಈ ಸದನದಲ್ಲಿ ತೆಗೆದುಕೊಳ್ಳಲು ಬಯಸುವುದಿಲ್ಲ. ನಾನು ಸಲಹೆ ನೀಡುತ್ತಿದ್ದುದು ಏನೆಂದರೆ, ಆ ಕಾರ್ಯಕ್ರಮದಲ್ಲಿನ ಆ ವಿಷಯ – ನೀವು ಹೇಳಿದಂತೆ, ಲಾರ್ಡ್ ಮೌಂಟ್ ಬ್ಯಾಟನ್ ಅವರ ಬಳಿಗೆ ಹೋಗಿ, ಭಾರತದ ಗವರ್ನರ್ ಜನರಲ್ ಹುದ್ದೆಯನ್ನು ಅಲಂಕರಿಸುವಂತೆ ಅವರನ್ನು ಕೇಳಿಕೊಳ್ಳುವುದನ್ನು ಕೈಬಿಡುವುದು ಉತ್ತಮ. ನನ್ನ ಅನಿಸಿಕೆಯಂತೆ, ಅವರು ಅದನ್ನು ಈಗಾಗಲೇ ಮಾಡಿದ್ದಾರೆ ಮತ್ತು ಈ ಔಪಚಾರಿಕತೆಯನ್ನು ಬಿಟ್ಟುಬಿಡುವುದು ಒಳ್ಳೆಯದು; ಏಕೆಂದರೆ, ಸದನವು ಈ ವಿಷಯದ ಬಗ್ಗೆ ಯಾವತ್ತೂ ಚರ್ಚಿಸಿಲ್ಲ ಮತ್ತು ಒಂದು ವೇಳೆ ಸದನವು ಈ ವಿಷಯವನ್ನು ಪರಿಗಣಿಸದೇ ಇದ್ದರೂ ಅವರನ್ನು ಆಮಂತ್ರಿಸಿದರೆ, ಅದು ಅತ್ಯಂತ ಔಪಚಾರಿಕವಾಗುತ್ತದೆ ಮತ್ತು ನನ್ನ ಅಭಿಪ್ರಾಯದ ಪ್ರಕಾರ ಇದು ಸ್ವಲ್ಪ ಅನ್ಯಾಯದ್ದಾಗಿದೆ. ನಾನು ಸಲಹೆ ಮಾಡಿದ್ದು ಏನೆಂದರೆ, ಯೋಜನೆಯನ್ನು ಅಡ್ಡಿಪಡಿಸದೇ ಇದ್ದರೆ ಅಥವಾ ಅವರು ಭಾರತದ ಗವರ್ನರ್ ಆಗುವುದಕ್ಕೆ ತಕರಾರು ಎತ್ತದೇ ಇದ್ದರೆ, ಸದನವು ತಪ್ಪು ಮಾಡಿದಂತಾಗುವುದಿಲ್ಲ. ಅವರು ಗವರ್ನರ್ ಜನರಲ್. ಅವರು ಆ ಪ್ರಸ್ತಾವವನ್ನು ಒಪ್ಪಿಕೊಂಡಿದ್ದಾರೆ ಕೂಡ ಮತ್ತು ಈ ಸದನದ ಪರವಾಗಿ ಯಾವುದೇ ವಚನಬದ್ಧತೆ ಇಲ್ಲದೇ ಇದ್ದರೂ ಕೂಡ ಅವರು ಹಾಗೆಯೇ (ಆ ಸ್ಥಾನದಲ್ಲಿಯೇ) ಇರುತ್ತಾರೆ.

**ಪಂಡಿತ್ ಗೋವಿಂದ ಮಾಳವೀಯ :** ಮಾನ್ಯರೆ, ನಾನು ಸಲಹೆ ನೀಡುವುದೇನೆಂದರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಮತ್ತಷ್ಟು ಚರ್ಚೆ ನಡೆಸುವುದು ಬೇಡ ಮತ್ತು ಸಭಾಧ್ಯಕ್ಷರಿಗೆ ಯಾವುದು ಉತ್ತಮವೆಂದು ಕಾಣುತ್ತದೆಯೋ ಅದರಂತೆ ಇದನ್ನು ನಿಗದಿಪಡಿಸಲು ಅವರಿಗೇ ಬಿಟ್ಟುಬಿಡೋಣ.

**ಶ್ರೀ ತಾಜಮಲ್ ಹುಸೇನ್** (ಬಿಹಾರ್ : ಮುಸ್ಲಿಮ್) : ಮಾನ್ಯರೆ, ಇದಕ್ಕೆ ಸಂಬಂಧಪಟ್ಟಂತೆ ಔಪಚಾರಿಕ ನಿರ್ಣಯವೊಂದನ್ನು ಮಂಡಿಸುವುದಕ್ಕೆ ನಾನು ನಿಮ್ಮ ಅನುಮತಿ ಕೋರಬಹುದೇ?

"ಸ್ವಾತಂತ್ರ್ಯ ದಿನದ ಸಂಭ್ರಮಾಚರಣೆಯ ಕಾರ್ಯಕ್ರಮವನ್ನು ಗೌರವಾನ್ವಿತ ಸಭಾಧ್ಯಕ್ಷರು ಸಂಪೂರ್ಣವಾಗಿ ತಮ್ಮ ಯೋಜನೆಯಂತೆ ನಿಶ್ಚಯಮಾಡುವುದನ್ನು ಈ ಸದನವು ಒಪ್ಪುತ್ತದೆ."

**ಮಾನ್ಯ ಸಭಾಧ್ಯಕ್ಷರು :** ಇಂತಹ ವಿಷಯಗಳಿಗೆ ಸಂಬಂಧಿಸಿದ ನಿರ್ಣಯಗಳನ್ನು ಮತಕ್ಕೆ ಹಾಕುವುದು ಆವಶ್ಯಕವೆಂದು ನಾನು ಭಾವಿಸುವುದಿಲ್ಲ. ನನಗನ್ನಿಸುತ್ತದೆ, ನಾನು ಹೇಳಿದ ಹಾಗೆ, ನಾನೇ ಕಾರ್ಯಕ್ರಮವನ್ನು ನಿಗದಿಪಡಿಸುತ್ತೇನೆ; ಇದರ ವಿವರವನ್ನು ನಾನು ಅನಂತರ ನಿಶ್ಚಯಿಸಬಹುದು.

**ಶ್ರೀ ಎಚ್. ವಿ. ಕಾಮತ್ :** ಈ ಐತಿಹಾಸಿಕ ಸಂದರ್ಭದಲ್ಲಿ ಕನಿಷ್ಠ ಒಬ್ಬರು ಸಂದರ್ಶಕರನ್ನು ಪರಿಚಯಿಸುವ ಹಕ್ಕನ್ನು ಈ ಸದನದ ಸದಸ್ಯರಿಂದ ಕಿತ್ತುಕೊಳ್ಳುವುದಿಲ್ಲ ಎಂದು ನೀವು ನಿರ್ದೇಶನ ನೀಡಿದರೆ ಅದು ಅತ್ಯುತ್ತಮ ಎನಿಸುತ್ತದೆ.

**ಮಾನ್ಯ ಸಭಾಧ್ಯಕ್ಷರು** : ಇದು ಸ್ಥಳಾವಕಾಶವನ್ನು ಅವಲಂಬಿಸಿದೆ. ನಾನು ಹೇಳಿದಂತೆ, ನಾವು ಎಷ್ಟು ಗರಿಷ್ಠ ಸಂಖ್ಯೆಯಲ್ಲಿ ಸಾಧ್ಯವೋ ಅಷ್ಟು ಜನರಿಗೆ ಸ್ಥಳಾವಕಾಶ ಕಲ್ಪಿಸಬೇಕಿದೆ; ಆದರೆ, ಒಂದು ವೇಳೆ ಸಾಧ್ಯವಾಗದೇ ಇದ್ದರೆ, ಪಕ್ಷಪಾತವಾಗದ ರೀತಿಯಲ್ಲಿ ಎಲ್ಲ ಸದಸ್ಯರಿಗೆ ಸಮಾನ ಅವಕಾಶ ಕಲ್ಪಿಸುವುದಕ್ಕೆ ನಾವು ಯಾವುದಾದರೂ ಮಾರ್ಗವನ್ನು ಹುಡುಕಬೇಕಾಗುತ್ತದೆ.

**ಒಬ್ಬರು ಗೌರವಾನ್ವಿತ ಸದಸ್ಯರು** : ಮಾನ್ಯರೇ, ನಾವು ಯಾವ ಸಮಯಕ್ಕೆ ಇಲ್ಲಿಗೆ ಬರಬೇಕೆಂದು ತಿಳಿದುಕೊಳ್ಳಬಹುದೇ?

**ಮಾನ್ಯ ಸಭಾಧ್ಯಕ್ಷರು** : ನೀವು ಇಲ್ಲಿಗೆ ೧೪ರ ರಾತ್ರಿ ಬರಬೇಕಾಗುತ್ತದೆ. ಖಚಿತವಾದ ಸಮಯವನ್ನು ನಾನು ಅನಂತರ ಪ್ರಕಟಿಸುತ್ತೇನೆ. ಇದು ಮಧ್ಯರಾತ್ರಿಯಿರುತ್ತದೆ.

**ಶ್ರೀ ಎಚ್. ವಿ. ಕಾಮತ್** : ಪ್ರತಿಯೊಬ್ಬ ಸದಸ್ಯರಿಗೆ ರಾಷ್ಟ್ರಧ್ವಜವನ್ನು ಉಡುಗೊರೆಯಾಗಿ ನೀಡುವುದಕ್ಕೆ ಸಂಬಂಧಪಟ್ಟಂತೆ, ಒಂದು ವೇಳೆ ಇದು ಆಗಸ್ಟ್ ೧೫ರೊಳಗೆ ನೀಡಲ್ಪಟ್ಟರೆ, ನಾವು ಕೃತಜ್ಞರು.

**ಮಾನ್ಯ ಸಭಾಧ್ಯಕ್ಷರು** : ಪ್ರತಿಯೊಬ್ಬರೂ ತಲಾ ಒಂದು ಧ್ವಜವನ್ನು ಖರೀದಿಸಿ.

**ಶ್ರೀ ಎಚ್. ವಿ. ಕಾಮತ್** : ಮಾನ್ಯರೆ, ನಿಮ್ಮಿಂದ ಉಡುಗೊರೆ!

**ಮಾನ್ಯ ಸಭಾಧ್ಯಕ್ಷರು** : ಇದು ನಾವು ಪರಿಗಣಿಸಬೇಕಾದ ವಿಷಯ. ಪ್ರತಿಯೊಬ್ಬ ಸದಸ್ಯರಿಗೆ ರಾಷ್ಟ್ರಧ್ವಜ ಒದಗಿಸುವುದನ್ನು ನಾವು ಈಗ ಕೈಗೆತ್ತಿಕೊಳ್ಳಲಾಗದು. ಪ್ರಸಕ್ತ ಪರಿಸ್ಥಿತಿಯಲ್ಲಿ ಇದು ಪ್ರಾಯೋಗಿಕವೆಂದು ನನಗೆ ಕಂಡುಬರುತ್ತಿಲ್ಲ.

**ಶ್ರೀ ಅಜಿತ್ ಪ್ರಸಾದ್ ಜೈನ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಸದನದಲ್ಲಿ ಸಂದರ್ಶಕರಿಗೆ ನಿಷ್ಪಕ್ಷಪಾತವಾಗಿ ಅವಕಾಶ ನೀಡುವುದಕ್ಕೆ ಸಂಬಂಧಪಟ್ಟಂತೆ, ಯೋಜನೆಯನ್ನು ರೂಪಿಸುವುದಾಗಿ ನೀವು ಹೇಳಿದ್ದೀರಿ. ಆ ಯೋಜನೆಯನ್ನು ಕುರಿತು ನಾವು ಯಾವ ಸಮಯಕ್ಕೆ ತಿಳಿದುಕೊಳ್ಳಬಹುದು ಎಂಬುದನ್ನು ನಾನು ತಿಳಿದುಕೊಳ್ಳಬಯಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಒಂದೆರಡು ದಿನಗಳಲ್ಲಿ ನಾವು ಇದನ್ನು ನಿಶ್ಚಯಿಸೋಣ ಮತ್ತು ಇದನ್ನು ಮಾಧ್ಯಮಗಳಲ್ಲಿ ಪ್ರಕಟಿಸೋಣ.

**ಶ್ರೀ ಮಹಾವೀರ ತ್ಯಾಗಿ** : ಇದಕ್ಕೆ ಸಂಬಂಧಿಸಿದಂತೆ, ನಾನು ಒಂದು ಸಲಹೆ ನೀಡಬಹುದೇ? ಮಾನ್ಯರೆ, ಹಲವಾರು ಗಣ್ಯರನ್ನು ಆಮಂತ್ರಿಸಬೇಕು ಎಂದು ನೀವು ಹೇಳಿರುವುದರಿಂದ ಮತ್ತು ನಮ್ಮ ಸ್ನೇಹಿತರೂ ಸಹ ಈ ಶುಭಕಾರಕ ಸಮಾರಂಭಕ್ಕೆ ಸಾಕ್ಷಿಯಾಗಬೇಕೆಂದು ನಾವೂ ಕೂಡ ತವಕಗೊಂಡಿರುವುದರಿಂದ, ನಾನು ಸಲಹೆ ನೀಡುವುದೇನೆಂದರೆ, ಸಮಾರಂಭವನ್ನು ಇಲ್ಲಿ ನಡೆಸುವ ಬದಲು, ಬೃಹತ್ ಸಮಾರಂಭವನ್ನು ನಡೆಸಲು ಅನುಕೂಲವಾಗುವ ಹಾಗೂ ಅಪಾರ ಸಂಖ್ಯೆಯ ಜನರಿಗೆ ಸ್ಥಳಾವಕಾಶ ಒದಗಿಸಲು ಸಾಧ್ಯವಾಗವಾಗುವಂತಹ ಹಳೆಯ ಕೋಟೆ ಅಥವಾ ಬೇರೆ ಎಲ್ಲಿಯಾದರೂ ಏರ್ಪಡಿಸಬೇಕು. ಭಾರತದಲ್ಲಿರುವ ಆದರೆ, ದೆಹಲಿಯಲ್ಲಿಲ್ಲದ ಅನೇಕ ಜನರು, ಅನೇಕರು ಹೊರಗಡೆಯಿಂದ ಆಗಮಿಸಿ ಈ ಕಾರ್ಯಕ್ರಮಕ್ಕೆ ಸಾಕ್ಷಿಯಾಗಬಹುದು. ಆದ್ದರಿಂದ, ನನ್ನ ಸಲಹೆ ಏನೆಂದರೆ, ನಾವು ಇದನ್ನು ಬಹಳ ದೊಡ್ಡ ಪ್ರದರ್ಶನವಾಗಿಸೋಣ ಮತ್ತು ಸಾಕಷ್ಟು ಸಂಖ್ಯೆಯಲ್ಲಿ ಸ್ಥಳಾವಕಾಶವನ್ನು ಹೊಂದಿರುವಂತಹ ಬೇರೆ ಯಾವುದಾದರೂ ಸ್ಥಳದಲ್ಲಿ ಈ ಕಾರ್ಯಕ್ರಮವನ್ನು ಏರ್ಪಡಿಸೋಣ.

**ಅನೇಕ ಗೌರವಾನ್ವಿತ ಸದಸ್ಯರು** : ಬೇಡ, ಬೇಡ.

**ಮಾನ್ಯ ಸಭಾಧ್ಯಕ್ಷರು** : ನಾವು ಅಧಿವೇಶನವನ್ನು ಇದೇ ಸಭಾಂಗಣದಲ್ಲಿ ನಡೆಸುತ್ತಿರುವುದರಿಂದ, ಈ ಸಮಾರಂಭವನ್ನೂ ಕೂಡ ನಾವು ಇಲ್ಲಿಯೇ ನಡೆಸಬೇಕೆಂದು ನಾನು ಭಾವಿಸುತ್ತೇನೆ (ಕೇಳಿ, ಕೇಳಿ).

**ಒಬ್ಬರು ಗೌರವಾನ್ವಿತ ಸದಸ್ಯರು** : ನಾನು ಸೂಚಿಸುವುದೇನೆಂದರೆ, ಹೆಚ್ಚು ಜನರಿಗೆ ಸ್ಥಳಾವಕಾಶ

ಒದಗಿಸುವ ಉದ್ದೇಶಕ್ಕಾಗಿ, ಇದಕ್ಕೆ ಹೊಂದಿಕೊಂಡಿರುವ ಕೋಣೆಗಳನ್ನೂ ಸಹ ಬಳಸಿಕೊಳ್ಳಬಹುದು.

**ಮಾನ್ಯ ಸಭಾಧ್ಯಕ್ಷರು :** ಪ್ರತಿಯೊಂದು ಚಿಕ್ಕ ಸ್ಥಳವನ್ನೂ ಕೂಡ ನಾವು ಬಳಸಿಕೊಳ್ಳೋಣ.

ನಾನು ನಿಮಗೆ ಹೇಳಲು ಬಯಸುವ ಇನ್ನೊಂದು ವಿಷಯವಿದೆ. ನಮ್ಮ ಮುಂದಿನ ಅಧಿವೇಶನವನ್ನು ೧೪ರ ರಾತ್ರಿ ಮತ್ತು ೧೫ರ ಬೆಳಗ್ಗೆ ಎಂದು ಪ್ರಕಟಿಸಿದ್ದೇವೆ. ಇದಕ್ಕೆ ಸಂಬಂಧಿಸಿದ ಸೂಚನೆಗಳನ್ನು ಕಛೇರಿಯಿಂದ ಸೂಕ್ತ ಸಮಯಕ್ಕೆ ಕಳುಹಿಸಲಾಗುವುದು. ಸದಸ್ಯರು ಸಕಾಲದಲ್ಲಿ ಸೂಚನೆಗಳನ್ನು ಪಡೆಯುವುದಕ್ಕೆ ಸಾಧ್ಯವಾಗದೆಯೂ ಹೋಗಬಹುದು. ಆದ್ದರಿಂದ ಅವರು ಇದನ್ನೇ ಸೂಚನೆ ಅಂದುಕೊಳ್ಳಬಹುದು ಮತ್ತು ಇದಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ ಪ್ರಕಟವಾಗುವ ವಿಷಯಗಳನ್ನೇ ಸೂಚನೆಯೆಂಗು ಭಾವಿಸಬಹುದು ಮತ್ತು ಅವರು ತಮಗೆ ಔಪಚಾರಿಕ ಸೂಚನೆ ಬರಲಿ ಎಂದು ಕಾಯುವುದು ಬೇಡ.

ನಾವು ಈಗ ಸದನವನ್ನು ೧೪ರವರೆಗೆ ಮುಂದೂಡುತ್ತಿದ್ದೇವೆ.

ಅನಂತರ ಸದನವನ್ನು ಗುರುವಾರ, ೧೪ನೇ ಆಗಸ್ಟ್ ೧೯೪೭ರವರೆಗೆ ಮುಂದೂಡಲಾಯಿತು.

*[ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ]*